ಜಮಖಂಡಿ ತಾಲೂಕಿನ ದೇವಾಲಯಗಳು

ಇತಿಹಾಸ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಸಂಪ್ರಬಂಧ

ಸಂಶೋಧಕರು :

ಶ್ರೀ ಸಚಿನ ಎಸ್. ಕೊಕಟನೂರ

ಬಿ.ಎಲ್.ಡಿ. ಶಿಕ್ಷಣ ಸಂಸ್ಥೆಯ
ವಾಣಿಜ್ಯ ಬಿ.ಎಚ್.ಎಸ್. ಕಲಾ, ಹಾಗೂ
ಟಿ.ಜಿ.ಪಿ. ವಿಜ್ಞಾನ ಮಹಾವಿದ್ಯಾಲಯ, ಜಮಖಂಡಿ

ಮಾರ್ಗದರ್ಶಕರು:

ಡಾ|| ಸುರೇಶ ಬಿರಾದಾರ

ಬಿ.ಎಲ್.ಡಿ. ಶಿಕ್ಷಣ ಸಂಸ್ಥೆಯ
ಎಸ್. ಬಿ. ಕಲಾ ಹಾಗೂ ಕೆ.ಸಿ.ಪಿ. ವಿಜ್ಞಾನ
ಮಹಾವಿದ್ಯಾಲಯ, ವಿಜಾಪೂರ.

ಶ್ರೀ. ಬಿ. ಆರ್. ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ. ಜಿ. ಬೆಳಗಾವಿ
ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೦೯

ಜಮಖಂಡಿ ತಾಲೂಕಿನ ದೇವಾಲಯಗಳು

ಇತಿಹಾಸ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಸಂಪ್ರಬಂಧ

ಸಂಶೋಧಕರು :

ಶ್ರೀ ಸಚಿನ ಎಸ್. ಕೊಕಟನೂರ

ಬಿ.ಎಲ್.ಡಿ. ಶಿಕ್ಷಣ ಸಂಸ್ಥೆಯ
ವಾಣಿಜ್ಯ ಬಿ.ಎಚ್.ಎಸ್. ಕಲಾ, ಹಾಗೂ
ಟಿ.ಜಿ.ಪಿ. ವಿಜ್ಞಾನ ಮಹಾವಿದ್ಯಾಲಯ, ಜಮಖಂಡಿ

ಮಾರ್ಗದರ್ಶಕರು:

ಡಾ॥ ಸುರೇಶ ಬಿರಾದಾರ

ಬಿ.ಎಲ್.ಡಿ. ಶಿಕ್ಷಣ ಸಂಸ್ಥೆಯ
ಎಸ್. ಬಿ. ಕಲಾ ಹಾಗೂ ಕೆ.ಸಿ.ಪಿ. ವಿಜ್ಞಾನ
ಮಹಾವಿದ್ಯಾಲಯ, ವಿಜಾಪೂರ.

ಶ್ರೀ. ಬಿ. ಆರ್. ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ. ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೦೯

ಪ್ರಮಾಣ ಪತ್ರ

ಜಮಖಂಡಿ ತಾಲೂಕಿನ ದೇವಾಲಯಗಳು ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಡಾ॥ ಸುರೇಶ ಬಿರಾದಾರ ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. ಹಾರೂಗೇರಿಯ ಶ್ರೀ. ಬಿ. ಆರ್. ದರೂರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಇತಿಹಾಸ ವಿಷಯದಲ್ಲಿ ಎಂ. ಫಿಲ್. ಪದವಿಗಾಗಿ ಸಂಪ್ರಬಂಧವನ್ನು ಸಲ್ಲಿಸುತ್ತದ್ದೇನೆ. ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದು ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ : 10.09.2009

ಸಚಿನ ಎಸ್. ಕೊಕಟನೂರ
ಸಂಶೋಧನ ವಿದ್ಯಾರ್ಥಿ
ಶ್ರೀ. ಬಿ. ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ.

ಧೃಡೀಕರಣ ಪತ್ರ

ಸಚಿನ ಎಸ್. ಕೊಕಟನೂರ ಇವರು ಜಮಖಂಡಿ ತಾಲೂಕಿನ ದೇವಾಲಯಗಳು ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಶ್ರೀ. ಬಿ. ಆರ್. ದರೂರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಇತಿಹಾಸ ವಿಷಯದಲ್ಲಿ ಎಂ. ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಇವರು ಈ ಮೊದಲು ಇಡಿಯಾಗಿ, ಬಿಡಿಯಾಗಿ ಎಲ್ಲಿಯೂ ಪ್ರಕಟಿಸಿಲ್ಲವೆಂದು ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಧೃಢೀಕರಿಸುತ್ತೇನೆ.

ಸ್ಥಳ : ವಿಜಾಪೂರ

ದಿನಾಂಕ : ೧೦.೦೯.೨೦೦೯

ಡಾ|| ಸುರೇಶ ಬಿರಾದಾರ
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು
ಬಿ.ಎಲ್.ಡಿ. ಶಿಕ್ಷಣ ಸಂಸ್ಥೆಯ
ಎಸ್. ಬಿ. ಕಲಾ ಹಾಗೂ ಕೆ.ಸಿ.ಪಿ. ವಿಜ್ಞಾನ
ಮಹಾವಿದ್ಯಾಲಯ, ವಿಜಾಪೂರ.

* ಕೃತಜ್ಞತೆಗಳು *

ಬಿ.ಎಲ್.ಡಿ. ಶಕ್ಷಣ ಸಂಸ್ಥೆಯ ವಾಣಿಜ್ಯ, ಬಿ.ಎಚ್.ಎಸ್. ಹಾಗೂ ಟಿ.ಜಿ.ಪಿ. ಮಹಾವಿದ್ಯಾಲಯ, ಜಮಖಂಡಿಯಲ್ಲಿ ಇತಿಹಾಸ ಉಪನ್ಯಾಸಕನಾಗಿ ಸೇವೆ ಸಲ್ಲಿಸುತ್ತಿರುವ ನಾನು ನನ್ನ ವಯಕ್ತಿಕ ಕಾರಣದಿಂದ ಸಂಶೋಧನ ಕ್ಷೇತ್ರದಿಂದ ಬಹಳ ಹಿಂದುಳಿದಿದ್ದೆ. ಬಿ.ಎಲ್.ಡಿ. ಶಿಕ್ಷಣ ಸಂಸ್ಥೆಯ ಆಡಳಿತ ಅಧಿಕಾರಿಗಳಾದ **ಪ್ರೊ. ಎಸ್. ಎಚ್. ಲಗಳಿ** ಅವರ ಪ್ರೋತ್ಸಾಹ ಪಡೆದು ಎಂ. ಫಿಲ್. ಪದವಿಗಾಗಿ ಸಂಶೋಧನಾ ವಿದ್ಯಾರ್ಥಿಯಾಗಲು ಬಯಸಿದಾಗ ಹಾರೂಗೇರಿಯ ಶ್ರೀ. ಬಿ. ಆರ್. ದರೂರ ಸಂಶೋಧನ ಕೇಂದ್ರದ ನಿರ್ದೇಶಕರಾದ **ಡಾ॥ ವಿ. ಎಸ್. ಮಾಳಿಯವರ** ನೆರವಿನಿಂದ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿ ಸೇರಿದಾಗ ಬಹಳ ಖುಷಿಯಾಯಿತು. ಆ ಖುಷಿ ಮುಂದೆ ಉಳಿಯಲಿಲ್ಲ. ಏಕೆಂದರೆ ಪ್ರತಿನಿತ್ಯ ಕ್ಲಾಸಿಗೆ ಬರುವುದು ಕಷ್ಟವಾಯಿತು ಆದರೂ ನಿಭಾಯಿಸಿದೆ.

ನನ್ನ ಸಂಶೋಧನೆಗೆ ಪ್ರೇರಕ ಶಕ್ತಿ ನೀಡಿದ ಆತ್ಮೀಯರಾದ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ **ಪ್ರೊ. ಕೆ. ಚನ್ನಬಸಪ್ಪನವರ** ಸಹಾಯಕ್ಕೆ ಚಿರಋಣಿಯಾಗಿದ್ದೇನೆ. ನನ್ನ ತಂದೆ – **ಶಿದಗೌಡ ಕೊಕಟನೂರ.** ತಾಯಿ – **ಗೋದಾವರಿ** ಇವರ ಆಶೀರ್ವಾದದಿಂದ ಸಂಶೋಧನಾ ಕಾರ್ಯದಲ್ಲಿ ಆಸಕ್ತಿವಹಿಸಿ ಮುಂದುವರಿಸಿದೆ. ಅದಕ್ಕೆ ಸಹಾಯ ಮಾಡಿದ ಮಾವ **ಮಲ್ಲಪ್ಪ ಕೌಜಲಗಿ,** ಸಹೋದರಿಯರಾದ **ಜಯಶ್ರೀ, ಶೋಭಾ** ಮತ್ತು ಸಹೋದರರಾದ **ರವಿ, ಶ್ರೀಶೈಲ** ಇವರೆಲ್ಲರ ಸಹಾಯವನ್ನು ನಾನೆಂದು ಮರೆಯಲಾರೆ. ನನಗೆ ಸಕಾಲಕ್ಕೆ ಗ್ರಂಥ ಮತ್ತು ವಿಷಯ ಅನುಭವದ ಉಪದೇಶವನ್ನು ನೀಡಿದ ಹಿರಿಯರಾದ **ಪ್ರೊ. ಎಸ್. ಜಿ. ಮಟೋಳಿಯವರ** ಸಹಾಯಕ್ಕೆ ನಾನು ಚಿರಋಣಿಯಾಗಿದ್ದೇನೆ. ಪದವಿ ಕಾಲೇಜಿನ ಪ್ರಾಚಾರ್ಯರಾದ **ಡಾ॥ ಎಸ್. ಎಸ್. ಸುವರ್ಣಖಂಡಿ.** ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ **ಪಿ. ಎಸ್. ಹಿರೇಮಠ** ಅವರ ಪ್ರೋತ್ಸಾಹದಿಂದ ಸಕಾಲಕ್ಕೆ ಗ್ರಂಥಗಳನ್ನು ಒದಗಿಸಿದ ಗ್ರಂಥಪಾಲಕರಿಗೂ ಹಾಗೂ ಘಟ್ನಟ್ಟಿಯವರಿಗೂ ಮತ್ತು ಶ್ರೀ. ಬಿ. ಆರ್. ದರೂರ ಸಂಶೋಧನ ಕೇಂದ್ರದ ರೂವಾರಿಯಾದ **ಶ್ರೀ. ಬಿ. ಆರ್. ದರೂರ** ಅವರಿಗೂ ನನ್ನ ನಮನಗಳು. ನನ್ನ ಈ ಸಂಶೋಧನೆಗೆ ಮನಃಸ್ಪೂರ್ವಕವಾಗಿ ಮಾರ್ಗದರ್ಶನ ನೀಡಿದ **ಡಾ॥ ಸುರೇಶ ಜಿರಾದರ** ಅವರಿಗೆ ವಂದನೆಗಳು. ಅಚ್ಚುಕಟ್ಟಾಗಿ ಡಿ.ಟಿ.ಪಿ. ಮಾಡಿರುವ **ಸಂಜೀವ ಹಳಿಂಗಳಿಯವರಿಗೂ** ನನ್ನ ವಂದನೆಗಳು.

ಈ ಸಂಶೋಧನಾ ನಿಬಂಧವನ್ನು ಆಕರ್ಷಕವಾಗಿ ಮುದ್ರಿಸಿ ಮತ್ತು ಅಂದವಾಗಿ ಬೈಂಡಿಂಗ್ ಮಾಡಿಕೊಟ್ಟ ವೀಣಾ ಮತ್ತು ದೀಪಕ ರವರ **ಸಾಯಿ ಝೆರಾಕ್ಸ ಮತ್ತು ಡಿ.ಟಿ.ಪಿ. ಸೆಂಟರ್, ಬೆಳಗಾವಿ.** ಇವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳು.

ಸ್ಥಳ : ಜಮಖಂಡಿ

ದಿನಾಂಕ : 10.09.2009

ಸಚಿನ ಎಸ್. ಕೊಕಟನೂರ
ಬಿ.ಎಲ್.ಡಿ. ಶಿಕ್ಷಣ ಸಂಸ್ಥೆಯ
ವಾಣಿಜ್ಯ ಬಿ.ಎಚ್.ಎಸ್. ಕಲಾ, ಹಾಗೂ
ಟಿ.ಜಿ.ಪಿ. ವಿಜ್ಞಾನ ಮಹಾವಿದ್ಯಾಲಯ, ಜಮಖಂಡಿ

* ಪರಿವಿಡಿ *

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಆಕರಗಳು ಅಧ್ಯಯನದ ರೀತಿ (ವಿಧಾನ)

ನಮ್ಮ ದೇಶದ ಸಾಂಸ್ಕೃತಿಕ ಪರಂಪರೆ ತುಂಬಾ ಅದ್ಭುತವಾದದ್ದು. ಈ ಸಾಂಸ್ಕೃತಿಕ ಪರಂಪರೆ ನಮ್ಮ ದೇಶದ ಇತಿಹಾಸಹೊಂದಿಗೆ ಸಮೀಕರಣಗೊಂಡಿರುತ್ತದೆ. ಇತಿಹಾಸ ಹೆಚ್ಚು ಸತ್ಯ ಮತ್ತು ನೈಜವಾಗಬೇಕೆಂದರೆ ಸಣ್ಣ ಸಣ್ಣ ಘಟಕಗಳ ಅಧ್ಯಯನವನ್ನು ಅವಶ್ಯಕವಾಗಿ ಮಾಡಬೇಕಾಗುತ್ತದೆ.

ಇತಿಹಾಸ ಪೂರ್ವಕಾಲದಲ್ಲಿದ್ದ ವಿವಿಧ ಸಂಗತಿಗಳನ್ನು ಪ್ರಾಕ್ತನ ಶಾಸ್ತ್ರಾಧಾರಗಳಿಂದ ತಿಳಿಯಬಹುದಾದರೂ, ಕ್ರಮೇಣವಾಗಿ ಇವು ಸಂಕೀರ್ಣ ಹಾಗೂ ವೈವಿಧ್ಯತೆಯಿಂದ ಕೂಡಿರುವುದನ್ನು ಕಾಣುತ್ತೇವೆ. ಪ್ರಾಚ್ಯ ಶಾಸ್ತ್ರವು ಶಾಸನ, ನಾಣ್ಯ, ದೇವಾಲಯ ಹಾಗೂ ಇನ್ನಿತರ ಉತ್ಖನನದಿಂದ ಶೋಧಿಸಲ್ಪಟ ಅಂಶಗಳನ್ನು ಹೊಂದಿರುತ್ತದೆ. ಮುಖ್ಯವಾಗಿ ದೇವಾಲಯಗಳು ಆಳರಸರಿಂದ ಅಥವಾ ಮಾಂಡಲಿಕರಿಂದ ಅಥವಾ ಆಡಳಿತಾಧಿಕಾರಿಗಳಿಂದ, ವಿವಿಧ ಧರ್ಮ–ಜಾತಿ ಸಮುದಾಯದಿಂದ ಕಟ್ಟಲ್ಪಟಿರುತ್ತವೆ. ಈ ದೇವಾಲಯಗಳು ಆ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ತಾಂತ್ರಿಕ–ಕ್ಷೇತ್ರಗಳ ಮೇಲೆ ಬೆಳಕು ಚೆಲ್ಲುತ್ತದೆ. ಇಂತಹ ದೇವಾಲಯಗಳು ಕರ್ನಾಟಕದ ತುಂಬಾ ಇವೆ. ಅಂತಹದರಲ್ಲಿ ಕರ್ನಾಟಕದ ಅವಿಭಾಜ್ಯ ಅಂಗವಾದ ಜಮಖಂಡಿ ತಾಲೂಕಿನಲ್ಲಿಯೂ ಹಲವಾರು ದೇವಾಲಯಗಳಿವೆ ಎಂಬುದನ್ನು ಮನಗಂಡು ಇತಿಹಾಸ ಸಂಶೋಧನಾ ವಿಭಾಗದ ವಿಧ್ಯಾರ್ಥಿಯಾದ ನಾನು ದೇವಾಲಯಗಳ ಹಿನ್ನೆಲೆಯಲ್ಲಿ ಜಮಖಂಡಿ ತಾಲೂಕಿನ ಸಾಂಸ್ಕೃತಿಕ ಇತಿಹಾಸ ರಚನೆಯ ಆಸೆಯನ್ನಿಟ್ಟುಕೊಂಡು ಈ ತಾಲೂಕು ಪ್ರದೇಶದಲ್ಲಿ ಪ್ರಸಿದ್ಧ ರಾಜ ಮನೆತನಗಳು ಬಿಟ್ಟು ಹೋಗಿರುವಂತಹ ಶಾಶ್ವತ–ಕುರುಹುಗಳ ಆಧಾರದಿಂದ ಈ ತಾಲೂಕಿನ ಸಾಂಸ್ಕೃತಿಕ– ಅಧ್ಯಯನಕ್ಕೆ ಪೂರಕವಾಗುವಂತೆ ಅವುಗಳನ್ನು ಉಪಯೋಗಿಸಿಕೊಂಡು ಪ್ರಬಂಧದ ಮೌಲ್ಯವನ್ನು ಹೆಚ್ಚಿಸುವ ಉದ್ದೇಶ ಹೊಂದಿದ್ದೇನೆ.

ಕರ್ನಾಟಕ ಎರಡು ಸಾವಿರ ವರ್ಷಗಳ ಸುದೀರ್ಘ ಉನ್ನತ ಪರಂಪರೆಯನ್ನು ಹೊಂದಿದೆ.[1] ವಿಶಾಲವಾದ ಈ ಕರ್ನಾಟಕದ ಭೂಭಾಗದಲ್ಲಿ ಹಲವಾರು ಅರಸರು ಮನೆತನದವರು ಆಳ್ವಿಕೆಯನ್ನು ನಡೆಸಿಹೋಗಿದ್ದಾರೆ. ಅಂತೆಯೇ ನಮ್ಮ ಈ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಜಮಖಂಡಿ ತಾಲೂಕಿನಲ್ಲಿ ದೊರೆತ ದೇವಾಲಯಗಳನ್ನು ಶಾಸನಗಳನ್ನು ಹಾಗೂ ವಿಷಯಕ್ಕೆ ಸಂಬಂಧಿಸಿದ ಹಲವಾರು ಗ್ರಂಥಗಳನ್ನು ಬಳಸಿಕೊಂಡು, ಅಧ್ಯಯನ ಹೊಂದಿದ ಉದ್ದೇಶವನ್ನು ಸಾಕಾರಗೊಳಿಸಲು ಪ್ರಯತ್ನಿಸಲಾಗಿದೆ.

ವ್ಯಾಪ್ತಿ :–

ಒಂದು ವಿಷಯದ ವ್ಯಾಪ್ತಿ ಎಂದರೆ ಆ ಕ್ಷೇತ್ರದ ವಿಸ್ತಾರ ಅಥವಾ ಅದು ಹೊಂದಿದ ಗಡಿ ರೇಖೆ ಎಂದರ್ಥ,[2] ರಾಜಕೀಯ ವಸ್ತುನಿಷ್ಠತೆಯನ್ನು ಮಾತ್ರ ಪರಿಗಣಿಸುತ್ತಿದ್ದ ಇತಿಹಾಸ ಇತ್ತೀಚಿನ ದಿನಗಳಲ್ಲಿ ವಿಜ್ಞಾನದ ಪ್ರಗತಿಯಿಂದಾಗಿ ಹಾಗೂ ವೈಜ್ಞಾನಿಕ ಉತ್ಖನನ, ಅನ್ವೇಷಣೆಯಂತಹ ಪ್ರಯೋಗಾತ್ಮಕ ಕೆಲಸಗಳಿಂದ ತನ್ನ ಐತಿಹಾಸಿಕತೆಯನ್ನು ಹೆಚ್ಚಿಸಿಕೊಂಡಿದ್ದನ್ನು ನೋಡುತ್ತೇವೆ. ಆದ್ದರಿಂದ ಈ

[illegible]

ಅಧ್ಯಯನದ ವ್ಯಾಪ್ತಿಗೆ ಸುದೀರ್ಘಕಾಲದ ವ್ಯಾಪ್ತಿಯನ್ನು ಹಾಕಿಕೊಂಡಿದ್ದೇನೆ. ಏಕೆಂದರೆ ನನ್ನ ಅಧ್ಯಯನದ ವಿಷಯವು ಜಮಖಂಡಿ ತಾಲೂಕಿನ ಪ್ರದೇಶಗಳಲ್ಲಿ ಆಳ್ವಿಕೆ ನಡೆಸಿದ ಸಮಸ್ತ ರಾಜ ಮನೆತನಗಳು ಹಾಗೂ ಅವರ ಕಾಲದಲ್ಲಿ ಕಟ್ಟಲ್ಪಟ ದೇವಾಲಯಗಳನ್ನು ಅಧ್ಯಯನ ಮಾಡಲಾಗಿದೆ. ಜಮಖಂಡಿ ತಾಲೂಕಿನ ಅತೀ ಪ್ರಾಚೀನ ದೇವಾಲಯವೆಂದರೆ ಮೂತ್ತೂರಿನ ಮಹಾಲಕ್ಷೀ ದೇವಾಲಯ & ಜಮಖಂಡಿಯ ಜಂಬುಕೇಶ್ವರ ದೇವಾಲಯ & ಆಲೂರಿನ ಕಲ್ಮೇಶ್ವರ ದೇವಾಲಯವಾಗಿದು (ಶಾಸನದಿಂದ ೧೦೧೭-೧೮ ರಲ್ಲಿ ತಿಳಿದುಬರುತ್ತದೆ) ದೇವಾಲಯವಾಗಿವೆ, ನೂತನವಾಗಿ ಕಟ್ಟಲ್ಪಡುವ ಹಿಪ್ಪರಗಿಯ ಸಂಗಮೇಶ್ವರ ದೇವಾಲಯದ ವರೆಗೆ ವಿಸ್ತರಿಸಲ್ಪಟ್ಟಿದೆ.

ಹೀಗಾಗಿ ವ್ಯಾಪ್ತಿ ವಿಶಾಲವಾಗಿದ್ದರೂ ಸಾದ್ಯವಾದಷ್ಟು ವಿಷಯಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.ಪ್ರಾಚೀನ ಕಾಲದಲ್ಲಿ ಜಂಬೂ ದ್ವೀಪದಲ್ಲಿ ಕುಂತಲ ದೇಶವು "ಧಾರಿಣೀಯುವತಿಯ ಕುಂತಳಂಬೊಲ್ ಎಸೆಯುತ್ತಿದ್ದಿತು ಅಲ್ಲಿ ಅವಿರಳವಾಗಿ ಶೋಭಿಸುವುದು ಕರಹಾಟದೇಶ. ಛಪ್ಪನ್ನೈವತ್ತಾರು ದೇಶಗಳಲ್ಲಿ ಇದು ಒಂದು ಈ ಕರ್ಹಾಡ ದೇಶದಲ್ಲಿ ಕಳಂಬಡೆ ಎಂಬುದು ಒಂದು ಕಂಪಣ ಈ ಕಂಪಣದಲ್ಲಿ ಮೂವತ್ತಾರುಂಬಾಡದ ಎಂಬ ವಾಣಿಯಂತೆ ಮೂವತ್ತುಂಬಾಡದ ತುಂಗಳ ಒಂದು ಮುಖ್ಯ ಸ್ಥಳ".[೩] ಇಂದು ಜಮಖಂಡಿ ತಾಲೂಕಿನ ಇತರೆ ಗ್ರಾಮಗಳಾದ ಕೊಣ್ಣೂರ, ಜಮಖಂಡಿ, ತೇರದಾಳ, ಶೂರ್ಪಾಲಿ (ಮರನೂರ) ಗ್ರಾಮಗಳು ಜಮಖಂಡಿ ತಾಲೂಕಿನ ಗತ ವೈಭವವನ್ನು ಹೇಳುತ್ತವೆ.

ಇಲ್ಲಿ ಅನೇಕ ಪ್ರಮುಖ ಅರಸುಮನೆತನದವರು ಇಲ್ಲಿ ಆಳ್ವಿಕೆ ನಡೆಸಿದ್ದಾರೆ. ಅವರಲ್ಲಿ ಅತ್ಯಂತ ಪ್ರಮುಖರಾದವರೆಂದರೆ, ಕಲ್ಯಾಣದ ಚಾಲುಕ್ಯರು. ಕಲಚೂರಿಗಳು, ದೇವಗಿರಿ ಯಾದವರು, ವಿಜಯನಗರದವರು, ಬಹುಮನಿ ಸುಲ್ತಾನರು, ವಿಜಾಪೂರ ಆದಿಲ್ ಷಾಹಿಗಳು &ಮರಾಠರು.

ಇಂತಹ ರಾಜಮನೆತನದವರ ಕಾಲದಲ್ಲಿ ಧರ್ಮಸಾಹಿತ್ಯ ಶಿಕ್ಷಣ, ಕಲೆ ಮತ್ತು ವಾಸ್ತು ಶಿಲ್ಪ ಉನ್ನತ ಮಟ್ಟದಲ್ಲಿತ್ತು ಎಂಬುವದನ್ನು ಈ ತಾಲೂಕಿನ ಆಡಳಿತ ಭಾಗಗಳಾದ ತುಂಗಳ, ಸಾವಳಗಿ ಮೊದಲಾದ ದೇವಾಲಯದಲ್ಲಿನ ಶಾಸನಗಳಿಂದ ತಿಳಿಯಬಹುದು. ಇವುಗಳನ್ನು ಅನೇಕ ಪ್ರಬುಗಳು ಮತ್ತು ಆಡಳಿತಾಧಿಕಾರಿಗಳು ನೋಡಿಕೊಳ್ಳುತ್ತಿದ್ದರು ಪ್ರಭುಗಳಲ್ಲಿ ಮಹಾಮಂಡಳೇಶ್ವರ ಮಹಾಸಾಮಂತ, ಗಾವುಂಡ, ಆಡಳಿತಾಧಿಕಾರಿಗಳಲ್ಲಿ ಮಹಾಸಾಮಂತಾದಿಪತಿ, ದಂಡನಾಯಕರೆಂಬ ಅಧಿಕಾರಿಗಳು ಅಧಿಕ ಸಂಖ್ಯೆಲ್ಲಿದ್ದು, ಅವರು ಪರೋಪಕಾರ ಜೀವಿಗಳಾಗಿ ಕೆಲಸವನ್ನು ನಿರ್ವಹಿಸುತ್ತಿದ್ದರು.

ನಮ್ಮ ನಾಡಿನಲ್ಲಿ ಧಾರ್ಮಿಕ ಪೂಜಾ ಪರಂಪರೆಯು ಇಂದಿಗೂ ಆದರ್ಶಪ್ರಾಯ ವೆನಿಸಿದೆ. ಧಾರ್ಮಿಕ ಪರಂಪರೆಯಲ್ಲಿ ಜೈನರು, ಬೌದ್ದರು, ವೈಷ್ಣವರು, ಶೈವರು, ಶಿವಶರಣರು, ದಾಸರು ಸರ್ವಧರ್ಮದವರ ಸಮನ್ವಯ ಸಮೀಕ್ಷೆಯನ್ನು ತಿಳಿಸಲು ಪ್ರಯತ್ನಿಸಲಾಗಿದೆ.

ದೇವಾಲಯಗಳ ಜೊತೆಗೆ ಇತಿಹಾಸ ಗುರುತಿಸಲಿಕ್ಕೆ ಸಹಾಯಕವಾಗುವ ಮತ್ತೊಂದು ಪ್ರಮುಖ ಆಂಶವೆಂದರೆ ಶಾಸನಗಳ ಅಧ್ಯಯನ ಈ ಪ್ರದೇಶದಲ್ಲಿರುವ ತೇರದಾಳದ ಗೊಂಕ-ಜಿನಾಲಯದ ಜಮಖಂಡಿ ಜಂಬುಕೇಶ್ವರ ದೇವಾಲಯದ, ಕೊಣ್ಣೂರಿನ ಪರಮಾನಂದ ದೇವಾಲಯದ, ಚಿಕ್ಕ ಜಂಬಗಿಯ ಕಲ್ಮೇಶರ ದೇವಾಲಯದ ಸಾವಳಗಿಯ ಸೋಮನಾಥೇಶ್ವರ ದೇವಾಲಯದ, ಖಾಜಿಬೀಳಗಿಯ ಕಲ್ಲಿನಾಥ

[illegible]

[illegible]

[illegible]

[illegible]

ದೇವಾಲಯದ ಶಾಸನಗಳ ಸಹಾಯದಿಂದ ಜಮಖಂಡಿ ತಾಲೂಕಿನ ಇತಿಹಾಸವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಮೂಲಾಧಾರಗಳು (ಆಕರಗಳು)

ಯಾವುದೇ ಒಂದು ದೇಶದ "ಇತಿಹಾಸ ರಚನೆಗೆ" ಆಧಾರಗಳೇ ಮುಖ್ಯ. ಆದಾರಗಳಿಲ್ಲದೆ ಇತಿಹಾಸ ರಚನೆ ಕಷ್ಟಸಾಧ್ಯವಾಗುತ್ತದೆ. ಆಕರಗಳು ಪುರಾತತ್ವ ಅಥವಾ ಸಾಹಿತ್ಯಿಕ – ಎಂದೆನಿಸಿಕೊಂಡಿರಬಹುದು. ಪ್ರಸ್ತುತ ಪ್ರಬಂಧಕ್ಕೆ ಮೂಲ ಆಕರಗಳೆಂದರೆ ದೇವಾಲಯಗಳೇ ಏಕೆಂದರೆ ದೇವಾಲಯಗಳು ಇತಿಹಾಸದ ಪುನರ್ ರಚನೆಯನ್ನು ಮಾಡಿಕೊಡುವ ಪ್ರಮುಖ ಆಧಾರಗಳಾಗಿವೆ. ಆದರೂ ಇತರೆ ಎಲ್ಲ ಪ್ರಕಾರದ ಆಕರಗಳ ನೆರವನ್ನು ಪಡೆಯಲಾಗಿದೆ.

ದೇವಾಲಯಗಳು :

ನಮ್ಮ ಪ್ರಬಂಧಕ್ಕೆ ಪ್ರಮುಖ ಆಧಾರ ಸ್ಥಂಬಗಳೇ ದೇವಾಲಯಗಳು. ಇವುಗಳ ಕಲಾ ಶೈಲಿಯನ್ನು, ಧಾರ್ಮಿಕ ಸ್ಥಿತಿಗಳನ್ನು ಹಾಗೂ ರಾಜರ ಕಲಾಪ್ರಿಯತೆಯನ್ನು, ಕಲೆಗೆ ನೀಡಿರುವ ಪ್ರೋತ್ಸಾಹವನ್ನು ತಿಳಿಸುತ್ತವೆ. ಅದಕ್ಕಾಗಿಯೇ ಈ ಪ್ರದೇಶದ ಕ್ಷೇತ್ರ ಕಾರ್ಯವನ್ನು ಕೈಗೊಂಡು ಪ್ರಮುಖ ದೇವಾಲಯಗಳ ಪರಿವೀಕ್ಷಣೆಯನ್ನು ಮಾಡಲಾಗಿದೆ. ಇದರ ಜೊತೆಗೆ. ಡಾ॥ ಎಸ್. ರಾಜಶೇಖರರ "ಕರ್ನಾಟಕದ ಕಲೆ ಮತ್ತು ವಾಸ್ತು ಶಿಲ್ಪ" ಎಂಬ ಕೃತಿ, ಡಾ॥ ಅರುಣಿಯವರ ದಖನಿ ಪೇಂಟಿಂಗ್ಸ್ ಆರ್ಕಿಯೋಲಾಜಿಕಲ್ ಸರ್ವೇಯ ಭೂಪಟಗಳು, ಆದಿಲ್ ಶಾಹಿಗಳ ಕಲೆ ಮತ್ತು ವಾಸ್ತು ಶಿಲ್ಪದ ಕೃತಿಗಳನ್ನು, ಡಾ॥ ಈರಣ್ಣ ಪತ್ತಾರರವರ ಬದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಂಪರೆ ಶೀಲಾಕಾಂತ ಪತ್ತಾರ ಚಾಲುಕ್ಯರ ಕಲೆ ಮತ್ತು ವಾಸ್ತುಶಿಲ್ಪದ ಕೃತಿಗಳನ್ನು ಪರ್ಶಿಬ್ರೌನರ ಪ್ರವಾಸ ಕಥನವನ್ನು ಅಷ್ಟೇ ಅಲ್ಲದೇ ಬಾಗಲಕೋಟೆ ಜಿಲ್ಲೆಯ ಗೆಜೆಟಿಯರ ಕೃತಿಗಳನ್ನು ಆಧಾರವಾಗಿರಿಸಿಕೊಂಡಿದ್ದೆನೆ.

ಶಾಸನಗಳು :–

ಜಮಖಂಡಿ ತಾಲೂಕಿನ ಇತಿಹಾಸವನ್ನು ತಿಳಿಯಲು (ದೇವಾಲಯಗಳ) ಅನೇಕ ಶಾಸನಗಳು ಪ್ರಮುಖ ಪಾತ್ರ ವಹಿಸುತ್ತವೆ. ಇದರಲ್ಲಿ ಪುರಾತತ್ವ ಸರ್ವೇಕ್ಷಣ ಇಲಾಖೆಯವರು ಪ್ರಕಟಿಸಿದ " ದಕ್ಷಿಣ ಭಾರತದ ಶಾಸನ ಸಂಪುಟಗಳಲ್ಲಿ, ದಕ್ಷಿಣ ಭಾರತದ ಶಾಸನ ಸಂಪುಟ ೨೦ ರಲ್ಲಿನ ೨೪ ಶಾಸನಗಳು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನಾ ಸಂಸ್ಥೆ ಹೊರತಂದ ಕರ್ನಾಟಕ ಶಾಸನದ ಸಂಪುಟ ೨೫ ರಲ್ಲಿ ನಾಲ್ಕು ಶಾಸನ ಸಂಪುಟ ೧೫ ರಲ್ಲಿ ೮ ಶಾಸನಗಳು & ಹಂಪಿ ಕನ್ನಡ ವಿಶ್ವವಿದ್ಯಾಲಯದವರು ಪ್ರಕಟಿಸಿದ ಬಾಗಲಕೋಟೆ ಜಿಲ್ಲಾ ಶಾಸನ ಸಂಪುಟ & ಚಿಕ್ಕಜಂಬಗಿಯ ಒಂದು ಶಾಸನ ಅಧ್ಯಯನಕ್ಕೆ ಸಹಾಯಕವಾಗಿವೆ. ಈ ವರೆಗೆ ಈ ತಾಲೂಕಿನಲ್ಲಿ ಒಟ್ಟು ೨೮ ಶಾಸನಗಳು ಪ್ರಕಟವಾಗಿದ್ದು ಅದರಲ್ಲಿ ಬಹುಪಾಲು ದೇವಾಲಯಕ್ಕೆ ಸಂಬಂಧಿಸಿದವುಗಳಾಗಿದ್ದು, ಈ ಪ್ರಬಂಧಕ್ಕೆ ಆಧಾರಗಳಾಗಿವೆ. (ಜಮಖಂಡಿ ತಾಲೂಕಿನ ಶಾಸನಗಳು: ಒಂದು ಸಾಂಸ್ಕೃತಿಕ ಅಧ್ಯಯನ ಕೆ. ಚನ್ನಬಸಪ್ಪರವರ ಎಂ.ಫಿಲ್. ಪ್ರಬಂಧ).

ಇತರೆ ಆಕರಗಳು :-

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಈ ತಾಲೂಕಿನ ಇತಿಹಾಸವನ್ನು ಹೇಳುವ ಕೃತಿಗಳಾದ ಜಮಖಂಡಿ ತಾಲೂಕು ದರ್ಶನ – ದು. ನಿಂ. ಬೆಳಗಲಿ, ತ್ರಿದಳ ಸೌರಭ ಸ್ಮರಣ ಸಂಚಿಕೆ,- ದೊಡ್ಡಣ್ಣ ಭಜಂತ್ರಿ, ಜಮಖಂಡಿ ಜಿಲ್ಲೆ ಏಕೆ- ಹೇಗೆ – ತಾತಾಸಾಹೇಬ ಬಾಂಗಿ ಜೈ ಜಮಖಂಡಿ ಪಾಕ್ಷಿಕ – ಪತ್ರಿಕೆ- ಜಮಖಂಡಿಯ ಇತಿಹಾಸದರ್ಪಣ- ಎಸ್. ಬಿ, ಮಟೋಳಿ, ಸಾಂಸ್ಕೃತಿಕ ದಿಬ್ಬಣ ಸ್ಮರಣ ಸಂಚಿಕೆ – ೨೦೦೭ ಕೃತಿಗಳಲ್ಲಿನ ಲೇಖನಗಳನ್ನು ಆಯ್ದುಕೊಳ್ಳಲಾಗಿದೆ.

ಅಧ್ಯಯನದ ವಿಧಾನ :-

ಜಮಖಂಡಿ ತಾಲೂಕಿನ ದೇವಾಲಯಗಳು ಎಂಬ ಅಧ್ಯಯನಕ್ಕಾಗಿ ಸ್ವತಃ ಹಳ್ಳಿಗಳ ಕ್ಷೇತ್ರಕಾರ್ಯವನ್ನು ಕೈಗೊಂಡಿದ್ದೇನೆ ಅಲ್ಲಿ ಸ್ವತಃ ದೇವಾಲಯಗಳನ್ನು ವಿಕ್ಷೀಸಿ ದೇವಾಲಯಗಳ ಛಾಯಾಚಿತ್ರ ತೆಗೆದುಕೊಂಡು ಅವುಗಳ ವಾಸ್ತುಶಿಲ್ಪದ ಲಕ್ಷಣಗಳನ್ನು ಪ್ರಬಂಧದ ಅಧ್ಯಾಯ-೫ ರಲ್ಲಿ ಕೆಲವು ದೇವಾಲಯಗಳ ವಿಶೇಷ ಅಧ್ಯಯನವನ್ನು ಅಳವಡಿಸಲಾಗಿದೆ.

ಈ ಅಧ್ಯಯನದ ಸಂಶೋಧನೆಗೆ ಶಾಸನಗಳು ಪೂರಕ ಆಕರವಾಗಿದ್ದು, ಅದಕ್ಕಾಗಿ ಜಮಖಂಡಿ ತಾಲೂಕಿನ ಶಾಸನ ಸಂಪುಟ ಮಾಡಿದ ಸಂಶೋಧಕರ ಸಹಾಯವನ್ನು ಪಡೆದುಕೊಂಡಿದ್ದೇನೆ.

ಅಧ್ಯಯನದ ಅನುಕೂಲಕ್ಕಾಗಿ ಮಹಾಪ್ರಬಂಧವನ್ನು ಆರು ಅಧ್ಯಾಯಗಳಾಗಿ ವಿಭಾಗಿಸಿಕೊಳ್ಳಲಾಗಿದೆ ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಆಕರಗಳು ಹಾಗೂ ಅಧ್ಯಯನದ ರೀತಿಯನ್ನು ಕುರಿತು ಚರ್ಚಿಸಲಾಗಿದೆ.

ಎರಡನೇಯ ಅಧ್ಯಾಯದಲ್ಲಿ ಜಮಖಂಡಿ ತಾಲೂಕಿನ ಐತಿಹಾಸಿಕತೆ ಮತ್ತು ಭೌಗೋಳಿಕ ಲಕ್ಷಣಗಳನ್ನು ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ದೇವಾಲಯಗಳ ವೈಶಿಷ್ಠತೆಗಳ ಬಗ್ಗೆ ಅಂದರೆ ದೇವಾಲಯಗಳ ಶೈಲಿಗಳ ಬಗ್ಗೆ ಚರ್ಚಿಸಲಾಗಿದೆ (ನಾಗರ ಶೈಲಿ, ದ್ರಾವಿಡ ಶೈಲಿ, ವೇಸರ ಶೈಲಿ, ಬಸದಿಗಳ ಶೈಲಿ)

ನಾಲ್ಕನೆಯ ಅಧ್ಯಾಯದಲ್ಲಿ ದೇವಾಲಯಗಳ ಪಾತ್ರ

(ಅ) ಸಾಮಾಜಿಕ – ಕ್ಷೇತ್ರದಲ್ಲಿ

(ಬ) ಧಾರ್ಮಿಕ- ಕ್ಷೇತ್ರದಲ್ಲಿ,

(ಕ) ಶೈಕ್ಷಣಿಕ – ಕ್ಷೇತ್ರದಲ್ಲಿನ ಬೆಳವಣಿಗೆಯನ್ನು ಚರ್ಚಿಸಲಾಗಿದೆ.

ಅಧ್ಯಾಯ – ೫ ರಲ್ಲಿ ಕೆಲವು ಮುಖ್ಯ ದೇವಾಲಯಗಳ ವಿಶೇಷ ಅಧ್ಯಯನ ನಡೆಸಲಾಗಿ, ಮೂರ್ತಿಶಿಲ್ಪಗಳ ವೈಶಿಷ್ಠವನ್ನು ಚರ್ಚಿಸಲಾಗಿದೆ. ಅವುಗಳೆಂದರೆ.

ಜಮಖಂಡಿಯ ಜಂಬುಕೇಶ್ವರ,ಕಲ್ಮೇಶ್ವರ, ನಂದಿಕೇಶ್ವರ, ರಾಮತೀರ್ಥದ ರಾಮೇಶ್ವರ, ಕಡಪಟ್ಟಿಯ ಸುವರ್ಣಖಂಡಿ ಈಶ್ವರ (ಬಸವ) ಹಳಿಂಗಳಿಯ ರಾಮೇಶ್ವರ ಕಲಾಲಿಂಗೇಶ್ವರ, ಕರಿಸಿದ್ದೇಶ್ವರ,

ಸಾವಳಗಿಯ ಸೋಮನಾಥ, ಖಾಜಿಬೀಳಗಿಯ ಕಲ್ಮೇಶ್ವರ, ಕೊಣ್ಣೂರಿನ ಪ್ರಭಾಕೇಶ್ವರ, ತೇರದಾಳದ ಪ್ರಭುಸ್ವಾಮಿ, ಗೊಂಕ ಜಿನಾಲಯ, ಮಹಾಸತಿ ಕಲ್ಲುಗಳನ್ನು ವಿಶ್ಲೇಷಿಸಲಾಗಿದೆ.

ಅಧ್ಯಾಯ– ೬ ಸಮಾರೋಪ ಅಧ್ಯಾಯವಾಗಿದ್ದು. ಮೇಲಿನ ಐದು ಅಧ್ಯಾಯಗಳ ಸಾರಾಂಶವನ್ನು ಹೇಳುವುದರೊಂದಿಗೆ ನಮ್ಮ ಕ್ಷೇತ್ರಕಾರ್ಯದಿಂದ ಹೊರಹೊಮ್ಮಿದ ವಿಷಯಗಳನ್ನು ಸಂಗ್ರಹಿಸಲಾಗಿದೆ. ಸಮಾಜಕ್ಕೆ ದೇವಾಲಯಗಳ ಉಪಯೋಗದ ಬಗ್ಗೆ ಚರ್ಚಿಸಲಾಗಿದೆ.

ಅಡಿಟಿಪ್ಪಣಿಗಳು

(೧) ತರ್ದವಾಡಿನಾಡು ಒಂದು ಅಧ್ಯಯನ– ಪುಟ ಸಂಖ್ಯೆ – ೨

ಕೊಪ್ಪ, ಎಸ್, ಕೆ

(೨) ತರ್ದವಾಡಿನಾಡು ಒಂದು ಅಧ್ಯಯನ– ಪುಟ ಸಂಖ್ಯೆ – ೨

ಕೊಪ್ಪ, ಎಸ್, ಕೆ

(೩) ಡಾ॥ ಸಂಗಮೇಶ ಬಿರಾದಾರ "ಗೆಳೆಯರ ಬಳಗ ತುಂಗಳ ಸ್ಮರಣ ಸಂಚಿಕೆ ಪು. ಸಂ. – ೬

(೪) ಎಸ್, ಆಯ್, ಆಯ್, ಸಂ ೨೦, ನಂ ೬೫

(೫) ಕೆ, ಆಯ್, ಸಂ, ೧೫ ಸಂ. ೨೧, ಕ್ರಿ,ಶ ೧೧೨೫

(೬) ಎಸ್, ಆಯ್, ಆಯ್ ಸಂ ೧೫ ನಂ ೬೫ ಕ್ರಿ,ಶ ೧೧೮೫

(೭) ಎಸ್, ಆಯ್, ಆಯ್, ಸಂ, ೨೦ ನಂ ೨೬೧ ಕ್ರಿ, ಶ ೧೨ ನೆಯ ಶತಮಾನ.

ಅಧ್ಯಾಯ – ಎರಡು

ಜಮಖಂಡಿ ತಾಲೂಕಿನ ಇತಿಹಾಸ ಮತ್ತು ಭೌಗೋಳಿಕ ಲಕ್ಷಣಗಳು

ಪೀಠಿಕೆ :

ಒಂದು ನಾಡಿನ ಸಮಗ್ರ ಇತಿಹಾಸ ರಚನೆಯಾಗಬೇಕಾದರೆ ಆ ನಾಡಿನಲ್ಲಿ ಇರುವ ಗ್ರಾಮ ಪಟ್ಟಣಗಳ ಪಾತ್ರ ಬಹಳ ಪ್ರಮುಖವಾದುದು. ಗ್ರಾಮ ಮತ್ತು ಪಟ್ಟಣಗಳು ನಾಡಿನ ಅವಿಭಾಜ್ಯ ಅಂಗಗಳು. ಇವುಗಳು ಯಾವುದೋ ಒಂದು ವಿಶಿಷ್ಟ ಪರಂಪರೆಯ ಹಿನ್ನಲೆಯಲ್ಲಿ ಬೆಳೆದು ಒಂದು ಇತಿಹಾಸ ದಾಖಲೆ ಎಂದು ಕರೆಸಿಕ್ಕೊಳ್ಳುತ್ತವೆ. ಈ ಹಿನ್ನಲೆಯಲ್ಲಿ ಜಮಖಂಡಿ ಬಾಗಲಕೋಟೆ ಜಿಲ್ಲೆಯ ಪ್ರಮುಖ ತಾಲೂಕು ಹಾಗೂ ತಾಲೂಕು ಉಪವಿಭಾಗ ಎಂದು ಹೆಸರು ಪಡೆದಿದೆ. ರಾಜಕೀಯವಾಗಿ ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ, ಮಹತ್ವದ ನೆಲೆಯಾಗಿ ಬೆಳೆದು ಬಂದ ಈ ತಾಲೂಕು ಬಹು ಪ್ರಾಚೀನ ಕಾಲದಿಂದಲೇ ಐತಿಹಾಸಿಕ– ನೆಲೆಯಾಗಿ ಹೆಸರು ಪಡೆಯುತ್ತ ಹಂತ ಹಂತವಾಗಿ ಪ್ರಗತಿಯನ್ನು ಹೊಂದುತ್ತಾ ಬಂದಿದೆ.

ಜಮಖಂಡಿ ತಾಲೂಕು ಬದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಯಾದವರು, ಕಲ್ಯಾಣದ ಕಲಚೂರಿಗಳು, ಹೊಯ್ಸಳರು ಮುಂತಾದ ಅರಸರ ಆಡಳಿತಕ್ಕೊಳಗಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ಪೇಶ್ವೆಗಳ ಸಂಸ್ಥಾನದ ಭಾಗವಾಗಿ ಬ್ರಿಟಿಷರ ಆಳ್ವಿಕೆಯಲ್ಲಿ ಮುಂಬಯಿ ಪ್ರಾಂತ್ಯದ ಬೆಳಗಾವಿ ಜಿಲ್ಲೆಯ ಭಾಗವಾಗಿ ಸ್ವಾತಂತ್ರ್ಯ ನಂತರ ಅವಿಭಜಿತ ವಿಜಾಪುರ ಜಿಲ್ಲೆಯ ೧೧ ತಾಲೂಕುಗಳಲ್ಲಿ ಒಂದು ಪ್ರಮುಖ ತಾಲೂಕು ಹಾಗೂ ಉಪವಿಭಾಗೀಯ ಸ್ಥಳವಾಗಿ ಹಿಂದಿನ ಹೆಗ್ಗಳಿಕೆಯನ್ನು ಮುಂದುವರೆಸಿಕೊಂಡು ಬಂದು ಅಗಷ್ಟ ೧೫-೧೯೯೭ ರಿಂದ ಬಾಗಲಕೋಟ ಜಿಲ್ಲೆಯ ಪ್ರಮುಖ ತಾಲೂಕು ಹಾಗೂ ಉಪವಿಭಾಗ ಸ್ಥಳವಾಗಿದೆ.

ಬಾಗಲಕೋಟ ಜಿಲ್ಲೆ ೧೯೯೭ ಅಗಷ್ಟ ೧೫ ರಂದು ನೂತನ ಜಿಲ್ಲೆಯಾಗಿ ರೂಪತಳಿದಿದೆ. ಇದು ಭಾರತದ ದಖ್ಖನ್ ಪ್ರಸ್ಥಭೂಮಿಯ ಪಶ್ಚಿಮ ಕರಾವಳಿಯಿಂದ ಸುಮಾರು ೨೦೮ ಕಿ.ಮೀ. ಒಳಪ್ರದೇಶದಲ್ಲಿದೆ. ಭೌಗೋಳಿಕವಾಗಿ ೧೫° – ೨೮° ರಿಂದ ೧೬° – ೩೩° ಉತ್ತರ ಅಕ್ಷಾಂಶಗಳಲ್ಲಿ ಹಾಗೂ ೭೪°– ೫೯° ರಿಂದ ೭೬° – ೨೮° ಪೂರ್ವದ ರೇಖಾಂಶಗಳ ಮಧ್ಯ ಸುಮಾರು ೬೫೯೩ ಚ.ಕಿ.ಮೀ.ಗಳಷ್ಟು ಭೂಪ್ರದೇಶವನ್ನು ಆವರಿಸಿಕೊಂಡಿದೆ. ಈ ನೂತನ ಜಿಲ್ಲೆ ಆರು ತಾಲೂಕುಗಳನ್ನು ಒಳಗೊಂಡಿದೆ. ಅವುಗಳೆಂದರೆ ಬಾದಾಮಿ, ಬೀಳಗಿ, ಬಾಗಲಕೋಟ, ಹುನಗುಂದ, ಮುಧೋಳ ಹಾಗೂ ಜಮಖಂಡಿ ಈ ಆರು ತಾಲೂಕುಗಳಲ್ಲಿ ೧೧ ವಿವಿಧ ದರ್ಜೆಯ ನಗರ – ಪಟ್ಟಣಗಳು ಮತ್ತು ೫೯೯ ಜನವಾಸಿತ ಹಳ್ಳಿಗಳಿವೆ.[೧]

ಬಾಗಲಕೋಟ ಜಿಲ್ಲೆ ಅತೀ ಪ್ರಾಚೀನ ಇತಿಹಾಸವನ್ನು ಹೊಂದಿದೆ. ಬಾಗಲಕೋಟ ಜಿಲ್ಲೆಯ ಬಾದಾಮಿ, ಐಹೊಳೆ, ಪಟ್ಟದ ಕಲ್ಲು, ಗಲಗಲಿ, ಕಲಾದಗಿ, ಬಾಗಲಕೋಟ ಮುಂತಾದ ಸ್ಥಳಗಳು ಆಗಿನ ಕಾಲದಲ್ಲಿ ಇದ್ದವೆಂದು ಹೇಳುವ ದಂಡಕಾರಣ್ಯ ಅಧ್ಯಾಯದ ಪ್ರಮುಖ ಸ್ಥಳಗಳು[೨] ಪ್ರಸಿದ್ಧ ಗ್ರೀಕ – ತತ್ವಜ್ಞಾನಿ ಮತ್ತು ಭೂಗೋಳ ಶಾಸ್ತ್ರಜ್ಞನಾದ ಟಾಲೆಮಿ ಬಾಗಲಕೋಟ ಜಿಲ್ಲೆಯ ಬದಾಮಿ, ಪಟ್ಟದ ಕಲ್ಲುಗಳ

ಬಗ್ಗೆ ಉಲ್ಲೇಖಿಸಿದ್ದಾನೆ. ಬಾಗಲಕೋಟ ಜಿಲ್ಲೆಯನ್ನು ಕ್ರಿ.ಶ. ೬ನೇ ಶತಮಾನದಲ್ಲಿ ಬಾದಾಮಿ ಚಾಲುಕ್ಯರು, ೯ನೇ ಶತಮಾನದಲ್ಲಿ ರಾಷ್ಟ್ರಕೂಟರು, ೧೦ನೇ ಶತಮಾನದಲ್ಲಿ ಕಲ್ಯಾಣದ ಚಾಲುಕ್ಯರು, ೧೨ನೇ ಶತಮಾನದಲ್ಲಿ ಕಲಚೂರಿಗಳು, ನಂತರ ಯಾದವರು ಆಳಿ ಹೋಗಿದ್ದಾರೆ ಎಂದು ನಂಬಲಾಗಿದೆ.

೧೨ನೇ ಶತಮಾನದಲ್ಲಿ ಆಳ್ವಿಕೆ – ನಡೆಸಿದ ಕಲಚೂರಿ ಅರಸರ ಕಾಲದಲ್ಲಿ ಜಗತ್ತಿಗೆ ಮಾನವತಾಧರ್ಮವನ್ನು ಭೋಧಿಸಿದ ಮತ್ತು ಮಾನವ ಕುಲದಲ್ಲಿ ಸಮಾನತೆ – ತರಲು ಯತ್ನಿಸಿದ ಮಹಾನ್ ಸಮಾಜ ಸುಧಾರಕ – ಜಗಜ್ಯೋತಿ – ಬಸವಣ್ಣನವರು ಬೆಳೆದ ನಾಡು ಇದಾಗಿದೆ, ೧೬ನೇ ಶತಮಾನದಲ್ಲಿ ಆದಿಲ್‌ಷಾಹಿಗಳ ಆಳ್ವಿಕೆಗೆ ಒಳಪಟ್ಟಿದ್ದ ಇದಕ್ಕೆ ಬಾಂಗಡಿಕೋಟೆ ಎಂಬ ಹೆಸರಿತ್ತು. ನಂತರದ ದಿನಗಳಲ್ಲಿ ಬಾಗಲಕೋಟೆ ಎಂದು ಕರೆಯಲಾಗಿದೆ. ಇದು ೧೮೧೮ರಲ್ಲಿ ಬ್ರಿಟಿಷ್ ಆಳ್ವಿಕೆಗೆ ೧೮೩೭ರಲ್ಲಿ ಧಾರವಾಡ, ೧೮೬೪ರಲ್ಲಿ ಬೆಳಗಾವಿ ನಂತರ ಕಲಾದಗಿ ಜಿಲ್ಲೆಗೆ, ೧೮೮೪ರಲ್ಲಿ ವಿಜಾಪೂರ ಜಿಲ್ಲೆಗೆ ಸೇರಿತ್ತು. ನಂತರ ೧೯೯೭ ರ ಆಗಸ್ಟ ೧೫ ರಂದು ಸ್ವತಂತ್ರ ಜಿಲ್ಲೆಯಾಗಿ ಮಾರ್ಪಟ್ಟಿದೆ.

ಇಂತಹ ರಮಣೀಯ ಐತಿಹ್ಯವನ್ನು ಹೊಂದಿರುವ ಬಾಗಲಕೋಟ ಜಿಲ್ಲೆಯ ಆರು ತಾಲೂಕುಗಳಲ್ಲಿ ಜಮಖಂಡಿ ತಾಲೂಕು ಒಂದು ಪ್ರಮುಖ ತಾಲೂಕು ಹಾಗೂ ಉಪವಿಭಾಗ. ಈ ಉಪವಿಭಾಗದಲ್ಲಿ ಬೀಳಗಿ ಮತ್ತು ಮುಧೋಳ ತಾಲೂಕುಗಳು ಸೇರಿವೆ.

ಈ ತಾಲೂಕಿನ ವಾಯುವ್ಯಕ್ಕೆ ಬೆಳಗಾವಿ ಜಿಲ್ಲೆಯ ಅಥಣಿ, ಪಶ್ಚಿಮಕ್ಕೆ ರಾಯಬಾಗ, ದಕ್ಷಿಣಕ್ಕೆ ಮುಧೋಳ, ನೈರುತ್ಯಕ್ಕೆ ಬೀಳಗಿ, ಉತ್ತರದಲ್ಲಿ ವಿಜಾಪೂರ, ಪೂರ್ವದಲ್ಲಿ ಬಾಗಲಕೋಟ ತಾಲೂಕುಗಳಿವೆ.

ಪ್ರಾಚೀನ ಇತಿಹಾಸ : (ಇತಿಹಾಸದ ಪೂರ್ವಕಾಲ)

ಬಾಗಲಕೋಟೆಯ ಜಿಲ್ಲೆಯ ಕೆಲವು ಪ್ರಾಚೀನ ಸ್ಥಳಗಳು ವಿಶ್ವದ ಮನುಕುಲದ ಇತಿಹಾಸವನ್ನು ಹೇಳುವ ರಾಮಾಯಣದಲ್ಲಿ ಬರುವ ದಂಡಕಾರಣ್ಯ ಅಧ್ಯಾಯದಲ್ಲಿ ಕಂಡುಬಂದಿವೆ ಎಂದು ಈಗಾಗಲೇ ಹೇಳಲಾಗಿದೆ. ಅಂತೆಯೇ ಜಮಖಂಡಿಗೆ ಹೊಂದಿಕೊಂಡಿರುವ ರಾಮತೀರ್ಥ, ರಾಮ ಶ್ರೀಲಂಕಾದ ಕಡೆ ಹೋಗುವಾಗ ಈ ಮಾರ್ಗದ ಮೂಲಕವೆ ಹೋಗಿದ್ದಾನೆ. ಆದ್ದರಿಂದ ರಾಮತೀರ್ಥ ಎಂಬ ಹೆಸರಿದೆ ಎಂಬ ನಂಬಿಕೆ ಇದೆ. ಇದಕ್ಕೆ ಸಾಕ್ಷಿಯಾಗಿ ರಾಮಲಿಂಗೇಶ್ವರ ದೇವಾಲಯವಿದೆ.

ಜಮಖಂಡಿ ತಾಲೂಕಿನ ಪೂರ್ವ ಇತಿಹಾಸವನ್ನು ತಿಳಿಯಬೇಕಾದರೆ ಪುರಾತತ್ವ ಆಧಾರಗಳು ಅವಶ್ಯಕ, ಅತೀ ಪ್ರಾಚೀನ ಕಾಲಕ್ಕೆ (ಶಿಲಾಯುಗ) ಸಂಬಂಧಪಟ್ಟಂತೆ – ಕರ್ನಾಟಕ ರಾಜ್ಯದ ಯಾವುದೇ ಸ್ಥಳದ ಪ್ರಾಚೀನತೆಯನ್ನು ಅವಲೋಕಿಸಿದಾಗ ಅಷ್ಟು ಸಮಂಜಸವಾದ ನಿಖರ ಮಾಹಿತಿಗಳು ಸಿಗುವುದು ವಿರಳ, ಸಿಕ್ಕರೂ ಕೂಡಾ ಕರ್ನಾಟಕದ ಕೆಲವೇ ಕೆಲವು ನದಿ ಪ್ರದೇಶ, ನದಿದಂಡೆಗಳಲ್ಲಿ ಕೇಂದ್ರಿಕೃತವಾಗಿವೆ. ಅಂತಹ ಪ್ರಮುಖ ನದಿ ತೀರವೆಂದರೆ ಕೃಷ್ಣಾ ನದಿತೀರ ಇದು ಜಮಖಂಡಿಯ ಉತ್ತರ ಭಾಗದಿಂದ ಹರಿದು ಬಂದು ಪೂರ್ವವಾಹಿನಿವಾಗಿ ಮುಂದುವರೆದಿದೆ. ಪ್ರಾಚೀನ ಶಿಲಾಲೇಖನಗಳಲ್ಲಿ ಕೃಷ್ಣಾ ನದಿಯನ್ನು ಕೃಷ್ಣವೇಣಿ ಎಂದೂ ರನ್ನನ ಅಜಿತನಾಥ ಪುರಾಣ ಕೃತಿಯಲ್ಲಿ ಪೆರ್ದ್ದೊರೆ ಎಂದೂ ರೂಢಿಯಲ್ಲಿ ಹಿರೇಹೊಳೆ ಎಂದು ಕರೆಯಲ್ಪಟ್ಟಿದೆ.[7]

ಕೃಷ್ಣಾ ಮತ್ತು ಅದರ ಉಪನದಿಗಳಾದ ಭೀಮಾ, ದೋಣಿ, ಮಲಪ್ರಭಾ ಮತ್ತು ಘಟಪ್ರಭಾ ಫಲವತ್ತಾದ ಬಯಲುಗಳು ನಿರಂತರವಾಗಿ ಶಿಲಾಯುಗ ಮಾನವನ ಚಟುವಟಿಕೆಗಳ ಹಲವಾರು ನೆಲೆಗಳಿಗೆ ಆಶ್ರಯ ನೀಡಿವೆ. ಆದಿಮಾನವನು ನದಿಯ ದಡಗಳ ಸಮೀಪದಲ್ಲಿ ವಾಸಿಸಲು ಹೆಚ್ಚು ಇಷ್ಟಪಟ್ಟಿದ್ದಾನೆ ಎಂಬ ಅಂಶ ಕೃಷ್ಣಾ ನದಿತೀರದಲ್ಲಿ ಪತ್ತೆಯಾಗಿರುವ ನಿವೇಶನಗಳಿಂದ ಗೊತ್ತಾಗುತ್ತದೆ, ಬ್ರಿಟಿಷ್ ಭೂ ವಿಜ್ಞಾನಿ ರಾಬರ್ಟ ಬ್ರೂಸ್‌ಪುಟ್ ೧೮೮೮ರಲ್ಲಿ ಪ್ರಾಚೀನ ನಿವೇಶನಗಳನ್ನೂ ಪತ್ತೆ ಹಚ್ಚಿದವರಲ್ಲಿ ಮೊದಲಿಗರು. ಇದಾದ ೭ ದಶಕಗಳ ನಂತರ ಎಫ್.ಇ.ಜಯನರ ಸಂಕಾಲಿಯಾ, ಆರ್. ವಿ. ಜೋಷಿ, ಅ ಸುಂದರ, ಪಿ.ಪಿ. ಪಪ್ಪು. ಡಾ|| ರವಿ ಕೋರಿಶೆಟ್ಟರ, ಡಾ|| ರಾಜಶೇಖರ ಮೊದಲಾದವರು ಕರ್ನಾಟಕದ ಆದಿ ಶಿಲಾಯುಗದ ಸಂಸ್ಕೃತಿಯ ಅಧ್ಯಯನ ಮಾಡಿದ್ದಾರೆ. ಈ ಸಂಸ್ಕೃತಿಯು ೩ ರಿಂದ ೫ ಲಕ್ಷ ವರ್ಷ ಪ್ರಾಚೀನ ಎಂದು ಊಹಿಸಿದ್ದಾರೆ.[೬]

ಆದಿ ಹಳೆ ಶಿಲಾಯುಗದ ನೂರಾರು ಆಯುಧ ಉಪಕರಣಗಳು ಕೃಷ್ಣಾ & ಅದರ ಉಪನದಿಗಳ ತೀರದಲ್ಲಿ ಪತ್ತೆಯಾಗಿವೆ. ಜಮಖಂಡಿ ತಾಲೂಕಿನ ಕುಂಬಾರಹಳ್ಳ, ಪಡಸಲಗಿ, ಆಸಂಗಿ ಮುಂಡಗನೂರು ಸ್ಥಳಗಳಲ್ಲಿ ಶಿಲಾಯುಗದ ನೆಲೆಗಳು ಪತ್ತೆಯಾಗಿವೆ.

ಮಧ್ಯ ಹಳೆ ಶಿಲಾಯುಗಕ್ಕೆ ಸಂಬಂಧಿಸಿದ ಸುಳಿವುಗಳು ಕೃಷ್ಣಾ ನದಿ ತೀರದ ಪ್ರದೇಶಗಳಲ್ಲಿ ಜಮಖಂಡಿ ತಾಲೂಕಿನ ಪಡಸಲಗಿ ತೀರದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸಂಬಂಧಪಟ್ಟ ಕುರುಹುಗಳು ಜಮಖಂಡಿ ತಾಲೂಕಿನ ತೇರದಾಳ, ಆಸಂಗಿ ಪ್ರದೇಶದ ನಡುವಿನ ಕಿರು ಬೆಟ್ಟಗಳ ಸಾಲಿನಲ್ಲಿ ಬೃಹತ್ ಶಿಲಾಗೋರಿಗಳು ಪತ್ತೆಯಾಗಿವೆ. ತೇರದಾಳ, ಹಳಿಂಗಳಿ, ಹನಗಂಡಿ, ಆಸಂಗಿ, ಮದನಮಟ್ಟಿ ಪ್ರದೇಶಗಳಲ್ಲಿ ಉಸುಕು ಕಲ್ಲಿನ ಸಣ್ಣ ಸಣ್ಣ ದಿಣ್ಣೆಗಳನ್ನು ಎ. ಎಮ್. ಅಣ್ಣಿಗೇರಿಯವರು ಪತ್ತೆಹಚ್ಚಿದ್ದಾರೆ.[೭]

ಡಾ|| ಅ ಸುಂದರರವರು ಜಮಖಂಡಿ ತಾಲೂಕಿನ ತೇರದಾಳ, ಹನಗಂಡಿ, ಹಳಿಂಗಳಿ ಪ್ರದೇಶಗಳಲ್ಲಿ ೩ ಪ್ರಕಾರದ ಗೋರಿಗಳನ್ನು ಗುರುತಿಸಿ ವಿವರಣೆ ಕೊಟ್ಟದ್ದಾರೆ. ಇವೆಲ್ಲವೂ ಗ್ರೀಕ್ ಮತ್ತು ಲ್ಯಾಟಿನ್ ಮಾದರಿಯಲ್ಲಿ ನಿರ್ಮಿತವಾದವುಗಳೆಂದೂ ಹೇಳುತ್ತಾರೆ.

ನೂತನ ಶಿಲಾಯುಗ, ತಾಮ್ರ ಶಿಲಾಯುಗ, ಕಬ್ಬಿಣ ಯುಗದ ಸಂಸ್ಕೃತಿಯ ನೆಲೆಗಳನ್ನು ಕೂಡಾ ನಾವು ಜಮಖಂಡಿ ತಾಲೂಕಿನ ಸ್ಥಳಗಳಲ್ಲಿ ಗುರುತಿಸಬಹುದು. ಬಹುಮುಖ್ಯಸ್ಥಳಗಳೆಂದರೆ ಆಸಂಗಿ, ಕಲ್ಲೊಳ್ಳಿ, ಚಿಮ್ಮಡ, ಜಗದಾಳ, ತೇರದಾಳ, ಹನಗಂಡಿ, ಹಿಪ್ಪರಗಿ, ಕೊಣ್ಣೂರ, ಶಿರಗುಪ್ಪಿ ಇವೆಲ್ಲವೂ ಕೃಷ್ಣಾ ನದಿಕೊಳ್ಳ ದಂಡೆ ಬಯಲು ಪ್ರದೇಶಗಳು.

ಡಾ॥ ಅ ಸುಂದರರವರು ಜಮಖಂಡಿ ತಾಲೂಕಿನ ತೇರದಾಳ, ಹಳಿಂಗಳಿ ಹನಗಂಡಿ ಪ್ರದೇಶಗಳಲ್ಲಿ ೩ ಪ್ರಕಾರದ ಗೋರಿಗಳನ್ನು ಗುರುತಿಸಿದ್ದಾರೆ.[೮] ಅವುಗಳೆಂದರೆ :

೧) ಹಾದಿ ಕೋಣೆ ಗೋರಿ

೨) ಚಿಕ್ಕ ಚೌಕಾದ ಗೋರಿ

೩) ವೃತ್ತ ಕಲ್ಲು ರಾಶಿಗಳನ್ನು ಹೊಂದಿರುವಂತ ಗೋರಿ.

ಹಾದಿಕೋಣೆ ಗೋರಿಯಲ್ಲಿ ಮತ್ತೆ ಮೂರು ವಿಧಗಳನ್ನು ಗುರುತಿಸಿದ್ದಾರೆ.

೧. ಗ್ರೀಕ್ ಲ್ಯಾಟಿನ್ ಮಾದರಿಯ ಅಡ್ಡಾದ ಹಾದಿ ಕೋಣೆ.

೨. ಹಾದಿಯುಳ್ಳ ವೃತ್ತಾಕಾರದ ಕೋಣೆ.

೩. ಕೊಣ್ಣೂರು ಮಾದರಿ ಹಾದಿ ಕೋಣೆ ಗೋರಿ.

ಗೋರಿಗಳಿಗೆ ಉಸುಕು ಕಲ್ಲುಗಳನ್ನು ಹೆಚ್ಚು ಬಳಸಿರುವುದು ಕಂಡುಬರುತ್ತದೆ. ಈ ಕಲ್ಲುಗಳು (ವೈಟಿಷ್ ಗ್ರೇಸ್ಟೋನ್), ಬಿಳಿ, ಬೂದು ಬಣ್ಣದಿಂದ ಕೂಡಿವೆ ಎಂದು ಹೇಳಿದ್ದಾರೆ.

ಗ್ರೀಕ್ ಲ್ಯಾಟಿನ್ ಮಾದರಿಯ ಗೋರಿಗಳಲ್ಲಿ ಬಿಳಿಯ ಬೆಣಚು ಕಲ್ಲುಗಳನ್ನು ಬಳಸಿದ್ದಾರೆ. ಅಲಂಕಾರ ರಹಿತ ಶಿಲಾಫಲಕಗಳನ್ನು ಬಳಸಿದ್ದಾರೆ. ದಖನ್ ಪ್ರಸ್ಥಭೂಮಿಯ ಶಿಲೆಯನ್ನು ಬಳಸಲಾಗಿದೆ ಎಂದಿದ್ದಾರೆ.

ಇತಿಹಾಸದ ಪೂರ್ವಕಾಲದ ಚಿತ್ರಕಲೆಯನ್ನು ಗುರುತಿಸುವ ರೇಖಾ ಚಿತ್ರಗಳು ಜಮಖಂಡಿ ತಾಲೂಕಿನಲ್ಲಿ ಕಂಡುಬಂದಿವೆ. ಕುಲ್ಲೊಳ್ಳಿಯ ಗೊಂಬಿಗುಡ್ಡದಲ್ಲಿ ಬೃಹತ್ ಶಿಲಾಯುಗದ ಸಂಸ್ಕೃತಿಗೆ ಸೇರಿದ ಗೂಳಿ, ಆಕಳು, ಜಿಂಕೆ, ಮನುಷ್ಯ ಮುಂತಾದ ಕಿರು ರೇಖಾಚಿತ್ರಗಳಿವೆ. ಅವುಗಳಲ್ಲಿ ರೇಖಾಮಂಡಲ ಚಿತ್ರ ಅಪರೂಪದ್ದಾಗಿದೆ, ಎದುರುಬದರಾಗಿ ನಿಂತಿರುವ ಗೂಳಿಗಳ ಕಿರು ರೇಖಾ ಚಿತ್ರಗಳು ಸೂಕ್ಷ್ಮವಾಗಿದ್ದು ಕೋಡುಗಳು ಮುಂದಕ್ಕೆ ಬಾಗಿವೆ. ಇದರಲ್ಲಿ ಸ್ಥೂಲಕ್ಕಿಂತ ಸೂಕ್ಷ್ಮ ಭಾವಕ್ಕೆ ಹೆಚ್ಚು ಒತ್ತು ನೀಡಿದಂತಿದೆ. ಇವು ತಾಮ್ರಯುಗ ಇಲ್ಲವೆ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿವೆ ಎಂದು ಅ. ಸುಂದರರವರು ಗುರುತಿಸಿದ್ದಾರೆ.[೧೦]

ಇತಿಹಾಸ ಕಾಲ :

ಒಂದು ನಾಡಿನ ಐತಿಹಾಸಿಕ ಹಿನ್ನಲೆಯನ್ನು ತಿಳಿಯಲು ಅಲ್ಲಿ ಸಿಗುವಂತಹ ಮಹತ್ವದ ಆಕರಗಳು ಪ್ರಮುಖ ಪಾತ್ರ ವಹಿಸುತ್ತವೆ.

ಜಮಖಂಡಿಯನ್ನು ರನ್ನನ ಅಜಿತನಾಥ ಪುರಾಣ ಕೃತಿಯಲ್ಲಿ

"ಬೆಳುಗಲಿಯ ಯ್ಯೂರರೊಳ
ಗ್ಗಳ ಮನಿಸುವ ಜಂಬೂಖಂಡಿಯಪ್ಪತ್ತರ್ಕಂ
ತಿಳಕ ಮನೆ ನೆಗಲ್ದು ಮುದುಪೊವಿಲೊಳೆ
ಪುಟ್ಟ ಸುಪುತ್ರ ನೆನೆಸಿದಂ ಕವಿರತ್ನಂ"

ಎಂದು ವರ್ಣಿಸಲಾಗಿದೆ.[೧೧]

ಇಂಥಹ ಖ್ಯಾತಿವೆತ್ತ ಗಂಡು ಮೆಟ್ಟಿದ ನಾಡು ಜಂಬೂಖಂಡಿ ಪ್ರಸಿದ್ಧ ಅಗ್ರಹಾರಗಳಲ್ಲಿ ಒಂದಾಗಿ ರಾಜರ ಔದಾರ್ಯದಿಂದ ಅಭಿವೃದ್ಧಿ ಹೊಂದುತ್ತಾ ಬಂದಿರುವುದನ್ನು ಕಾಣಬಹುದು.

ಎಪ್ಪತ್ತರ ಹಳ್ಳಿಯಲ್ಲಿ ಜಮಖಂಡಿ ತಾಲೂಕಿನ ಮಧುರಖಂಡಿ, ಹುನ್ನೂರಗಳ ಉಲ್ಲೇಖವಿದೆ.[೧೩] ಸಾಂಗಲಿ ಸಂಸ್ಥಾನದ ಪ್ರಮುಖ ಸ್ಥಳಗಳಾಗಿದ್ದ ರಬಕವಿ, ಬನಹಟ್ಟಿ ಪಟ್ಟಣಗಳೂ ಕೂಡ ಇಂದು ಜಮಖಂಡಿ ತಾಲೂಕಿನಲ್ಲಿವೆ.

ಜಮಖಂಡಿ ತಾಲೂಕು ಪ್ರಾಚೀನ ಅರಸು ಮನೆತನಗಳಾದ ನಂದ, ಮೌರ್ಯ, ಶಾತವಾಹನರಿಂದ ಮೊದಲ್ಗೊಂಡು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ದೇವಗಿರಿ ಯಾದವರು, ಕಲಚೂರಿ ಅರಸರು, ಹೊಯ್ಸಳರು, ವಿಜಾಪೂರದ ಆದಿಲ್‌ಶಾಹಿಗಳು ಮತ್ತು ಮರಾಠರ ಆಳ್ವಿಕೆಯನ್ನು ಕಂಡಿದೆ. ಈ ಮೇಲೆ ಹೇಳಿದ ಎಲ್ಲ ಅರಸರು ತಮ್ಮದೇ ಆದ ರೀತಿಯಲ್ಲಿ ಆಡಳಿತ ನಡೆಸಿ ಇತಿಹಾಸಕ್ಕೆ ಮಹತ್ವ ಪೂರ್ಣ ಕೊಡುಗೆಗಳನ್ನು ಕೊಟ್ಟಿರುವುದನ್ನು ಕಾಣಬಹುದು.

ದಕ್ಷಿಣ ಭಾರತ / ಕರ್ನಾಟಕ ಪ್ರದೇಶವನ್ನು ನಂದರು, ಮೌರ್ಯರು ಆಳಿದ್ದಾರೆ ಎಂಬುವುದು ಇತಿಹಾಸದಿಂದ ತಿಳಿದುಬರುತ್ತದೆ. ಕರ್ನಾಟಕದ ಒಂದು ಭಾಗವಾಗಿದ್ದ ಜಮಖಂಡಿಯೂ ಕೂಡಾ ಪ್ರಾಚೀನ ರಾಜಮನೆತನಗಳ ಆಡಳಿತದ ಸವಿ ಉಂಡಿರಲೂಬಹುದು.

ಮೌರ್ಯರ ನಂತರ ದಕ್ಷಿಣ ಭಾಗದ ಕರ್ನಾಟಕವನ್ನು ಆಳಿದವರೆಂದರೆ ಶಾತವಾಹನರು, ನಂತರ ಕದಂಬರು ನಂತರ ಬದಾಮಿ ಚಾಲುಕ್ಯರು, ರಾಷ್ಟ್ರಕೂಟರು ಆಡಳಿತ ಮಾಡಿದ್ದಾರೆ. ಕಲ್ಯಾಣ ಚಾಲುಕ್ಯರ, ಕಲಚೂರಿಗಳ ದೇವಗಿರಿ ಯಾದವರ ಮನೆತನದವರು ಕಟ್ಟಿಸಿದ ದೇವಾಲಯಗಳಲ್ಲಿ ಶಾಸನಗಳು ಲಭ್ಯವಿರುವದರಿಂದ ಈ ತಾಲೂಕಿನ ಸ್ಪಷ್ಟ ಚಿತ್ರಣವನ್ನು ಇವರ ಆಳ್ವಿಕೆಯಿಂದ ಕಾಣಬಹುದಾಗಿದೆ. ನಂತರ ಹೊಯ್ಸಳರು ವಿಜಯನಗರ ಅರಸರ ಕಾಲದಲ್ಲಿ ಮುಂದುವರೆದು ವಿಜಯನಗರ ಸಾಮ್ರಾಜ್ಯದ ಪತನಾ ನಂತರ ಬಹಮನಿ ಸುಲ್ತಾನರು, ವಿಜಾಪೂರ ಆದಿಲ್‌ಷಾಹಿಗಳ ಕಾಲದಲ್ಲಿ ಕೊಣ್ಣೂರು (ಕೋಣಗನೂರು) ದೇಸಾಯಿಯವರ ಒಡೆತನದಲ್ಲಿತ್ತೆಂದು ತಿಳಿದುಬರುವುದು.

ಪ್ರಾಚೀನ ಕಾಲದಲ್ಲಿ ಪೇಶ್ವೆಗಳ ಪ್ರಾಂತವಾಗಿ ಪಟವರ್ದನರ ಕಾಲದಲ್ಲಿ ಸ್ವತಂತ್ರ ಸಂಸ್ಥಾನವಾಗಿ, ೧೮೫೭ರ ಸಿಪಾಯಿದಂಗೆಯಲ್ಲಿ ಸ್ವತಂತ್ರ ಸಂಗ್ರಾಮದಲ್ಲಿ ಬಹುಮುಖ್ಯ ಪಾತ್ರವಹಿಸಿ, ಸ್ವಾತಂತ್ರ್ಯದ ನಂತರ ಭಾರತ ಸಂಯುಕ್ತ ಸಂಸ್ಥಾನಗಳಲ್ಲಿ ಸೇರಿಸಕೊಂಡ ಮೊಟ್ಟಮೊದಲ ಸಂಸ್ಥಾನವಾಗಿ ಇಂದಿನವರೆಗೂ ತನ್ನ ಮಹತ್ವವನ್ನು ಉಳಿಸಿಕೊಂಡು ಬಂದಿದೆ ಎಂದು ಹೇಳಬಹುದು.[೧೪]

<u>ನಾಮ ವಿಶೇಷ (ಹೆಸರು)</u> :

ಇಂದಿನ ತಾಲೂಕು ಕೇಂದ್ರವಾಗಿರುವ ಜಮಖಂಡಿ ಎನ್ನುವ ಹೆಸರನ್ನು ಜಮಖಂಡಿ ತಾಲೂಕಿನ ಶಾಸನಗಳಲ್ಲಿ "ಜಂಬೂಖಂಡಿ" ಎಂದು ಕರೆಯಲಾಗಿದೆ. ರನ್ನನ 'ಅಜಿತನಾಥ' ಪುರಾಣದಲ್ಲಿ ಕೂಡ 'ಜಂಬೂಖಂಡಿ' ಎಂದೇ ಗುರುತಿಸಲಾಗಿದೆ.

ಜಮಖಂಡಿ ಹೆಸರಿನ ಉತ್ಪತ್ತಿಯನ್ನು ಪಂಡಿತರ ಪಾಮರರ ಮತ್ತು ನಿಜ ನಿಷ್ಪತ್ತಿಯಿಂದಲೂ ಗುರುತಿಸಬಹುದಾಗಿದೆ.

[illegible]

[illegible]

[illegible]

[illegible]

[illegible]

[illegible]

[illegible]

[illegible]

೧. ಜಂಬೂ = ಜಂಬು ವೃಕ್ಷ (ನೀಲಮರ), ಖಂಡ = ವನಭಾಗ (ಪ್ರದೇಶ)

ನೀರಲ ಮರಗಳು ವಿಪುಲವಾಗಿ ಬೆಳೆಯುತ್ತಿದ್ದರಿಂದ ಜಂಬೂಖಂಡಿ ಎಂಬ ಹೆಸರು ಬಂದಿರಬಹುದೆಂಬ ಊಹೆಯ ಮುಖಾಂತರ ಜಮಖಂಡಿ ಎಂದು ಆಗಿರಬಹುದು.

೨. ಜಂಬೂಕ = ನರಿ, ಖಂಡಿ = ಖಂಡಿ, ಪೊದರು, ಬಿಲ.

ಈ ಭಾಗದಲ್ಲಿ ಜಂಬೂಕಗಳು (ನರಿಗಳು) ಹೆಚ್ಚಾಗಿ ವಾಸಮಾಡುತ್ತಿದ್ದರಿಂದ ಜಂಭೂಖಂಡಿಯಾಗಿದೆ ಎಂಬುದೂ ಕೂಡ ಒಂದು ತರ್ಕ. ಇದಕ್ಕೆ ಸ್ಪಷ್ಟ ಆಧಾರವಾಗಿ ಜಮಖಂಡಿಯ ಯೋಗನಾರಾಯಣ ದೇವರ ಅರ್ಚಕರಾದ ಶ್ರೀ ಕಟ್ಟಿಯವರ ಮನೆಯಲ್ಲಿದ್ದ ಹಸ್ತಲಿಖಿತ ಗ್ರಂಥದ ನಾಲ್ಕನೆ ಅಧ್ಯಾಯದ ಕೊನೆಗೆ ಈ ಕೆಳಕಂಡಂತೆ ಬರೆಯಲಾಗಿದೆ.

"ಗೋಮಾಯಶ್ಚಿವು ಗ್ರಾಮಕ್ಕೆ ಶ್ರೀನಿವಾಸಾಚಾರ್ಯ

ಜೇ ನಚೆ ಲಿಖಿತ – ಗೋಮಾಯಶ್ಚಿದ್ರ ಗ್ರಾಮಸ್ಯೆ"

ಅಂದರೆ ನರಿಯ ಛಿದ್ರದ ಊರು.[೧೫]

ಜಮಖಂಡಿಗೆ ಚತುರ್ಥ ಮಹೇಶ್ವರರ ಆಶೀರ್ವಾದ ವರವಿದೆ. ಅವರೆಂದರೆ ರಾಮೇಶ್ವರ, ಜಂಬುಕೇಶ್ವರ ನಂದಿಕೇಶ್ವರ ಹಾಗೂ ಕಾಡಸಿದ್ದೇಶ್ವರ ಈ ದೇವಾಲಯಗಳು ಜಮಖಂಡಿಯಲ್ಲಿ ಇರುವುದು ಒಂದು ವಿಶೇಷ. ಜಂಬುಕೇಶ್ವರ ಹೆಸರಿನ ಮೂಲಕ ಜಮಖಂಡಿ ಎಂದು ಬಂದಿರಲೂಬಹುದು.[೧೬]

ಇದು ತಿರುಳಗನ್ನಡ ನಾಡು, ಪೆರ್ದೊರೆ, ಗಟ್ಟಿಗೆ ಇವುಗಳ ಮಧ್ಯದ ಪ್ರದೇಶ. ಬೆಳಗಲಿ ಆಯ್ನೂರರಲ್ಲಿ ಜಂಬೂಖಂಡಿ ಅಗ್ಗಳವಾದುದು. ಜಂಬೂದ್ವೀಪ ಶಿರೋರತ್ನ ಚಾಲುಕ್ಯರಾಜ ತ್ರಿಭುವನ ಮಲ್ಲನ ಬ್ರಹ್ಮಪುರಿ, ಮಹಾಅಗ್ರಹಾರ ಜಮಖಂಡಿ ಎಪ್ಪತೊರ್ಕೆ ತಿಲಕ – ಪ್ರಾಯವಾದುದು ಮುದುವೊಳಲ್ ರನ್ನನ ಜನ್ಮಸ್ಥಾನ.[೧೭]

ಭೌಗೋಳಿಕ ಲಕ್ಷಣಗಳು :

ಯಾವುದೇ ಒಂದು ಪ್ರದೇಶದ ಇತಿಹಾಸವನ್ನು ಸಂಪೂರ್ಣವಾಗಿ ಅರ್ಥೈಸಿಕೊಳ್ಳಬೇಕಾದರೆ ಅದರ ಸರ್ವಾಂಗೀಣ ಭೌಗೋಳಿಕ ಹಿನ್ನಲೆಯು ಅವಶ್ಯಕವಾಗಿರುತ್ತದೆ. ಒಂದು ಅಧ್ಯಯನಕ್ಕೆ ಪೂರಕವಾದ ಅಂಶಗಳನ್ನು ತಿಳಿಯಲು ಭೌಗೋಳಿಕ ಪರಿಸ್ಥಿತಿಯ ಜ್ಞಾನ ಬಹು ಮುಖ್ಯವಾದುದು. ಇತಿಹಾಸ ಮತ್ತು ಭೂಗೋಳಶಾಸ್ತ್ರದ ಸಂಬಂಧವನ್ನು ಗುರುತಿಸಲು ಭೌಗೋಳಿಕ ಲಕ್ಷಣಗಳ ಅಧ್ಯಯನ ಬಹಳ ಮಹತ್ವವಾದುದು.

ಬ್ರಿಟಿಷರ ಪರತಂತ್ರದಿಂದ ಬಿಡುಗಡೆಗೊಂಡ ಸ್ವತಂತ್ರ ಭಾರತದಲ್ಲಿ ವಿಲೀನಗೊಂಡ ಮೊದಲ ಪ್ರಾಂತ ಜಮಖಂಡಿ. ಆಗಿನ ರಾಜ ಶ್ರೀಮಂತ – ಪಟವರ್ಧನರವರು ಜಮಖಂಡಿಯ ಪ್ರಜಾ ಪ್ರತಿನಿಧಿಗಳ ಸಭೆ ಕರೆದು ಭಾರತ ಸಂಯುಕ್ತ ಸಂಸ್ಥಾನದಲ್ಲಿ ಜಮಖಂಡಿ ಪ್ರಾಂತ ವಿಲೀನಗೊಳ್ಳುವ ಇಂಗಿತವನ್ನು ವ್ಯಕ್ತಪಡಿಸಿದರು. ಅಲ್ಲದೆ ಶೇ. ೬೦ ರಷ್ಟು ಕನ್ನಡ ಮಾತನಾಡುವ ಜನರಿರುವ ಈ ಪ್ರದೇಶವನ್ನು ಕರ್ನಾಟಕ ಪ್ರದೇಶಕ್ಕೆ ಸೇರಿಸಬೇಕೆಂದು ಸಹ ಹೇಳಿದ್ದರು. ಆದರೆ ಜಮಖಂಡಿ ಪ್ರಾಂತ ಕರ್ನಾಟಕಕ್ಕೆ ಸೇರದೆ

ಮರಾಠಿಗರ ಪ್ರಾಬಲ್ಯವಿರುವ ಮುಂಬಯಿ ಪ್ರಾಂತಕ್ಕೆ ಸೇರ್ಪಡೆಯಾಯಿತು. ಇದರಿಂದ ಕೊಲ್ಲಾಪೂರ, ಮುಂಬಯಿ ಪ್ರಾಂತದಲ್ಲಿರುವ ಸಾಂಗ್ಲಿ, ಕೊಲ್ಲಾಪುರ ಜಿಲ್ಲೆಗಳಾದವೇ ವಿನಃ ಜಮಖಂಡಿ ಹಾಗೆಯೇ ಉಳಿಯಿತು.[೧೮]

ವಿಜಾಪುರ ಜಿಲ್ಲಾ ವಿಂಗಡಣೆಯ ಸಂದರ್ಭದಲ್ಲಿ ಮುರಾರ್ಜಿ ದೇಸಾಯಿ, ಸರ್ದಾರ ವಲ್ಲಭಾಯಿ ಪಟೇಲ್ ಕೂಡಾ ಜಮಖಂಡಿಯನ್ನು ಜಿಲ್ಲಾ ಕೇಂದ್ರವನ್ನಾಗಿಸುವುದರ ಬಗ್ಗೆ ಬಹಿರಂಗವಾಗಿ ಒಪ್ಪಿಕೊಂಡಿದ್ದರೂ ಸಹ ೫೦ ವರ್ಷಗಳ ಹಿಂದೆಯೇ ಸಂಸ್ಥಾನವೊಂದರ ರಾಜಧಾನಿಯಾಗಿ ದಕ್ಷಿಣ ಭಾರತದಲ್ಲಿ ಹೆರುವಾಸಿಯಾಗಿದ್ದ ಜಮಖಂಡಿಯನ್ನು ಅಲಕ್ಷಿಸಿ ವಿಜಾಪೂರ ಜಿಲ್ಲೆಯಲ್ಲಿ ಸೇರಿಸಲಾಯಿತು.[೧೯]

ಆಗಸ್ಟ್ – ೧೫. ೧೯೯೩ ರಲ್ಲಿ ಆಗಿನ ಮುಖ್ಯಮಂತ್ರಿ ಜೆ. ಎಚ್, ಪಟೇಲರು ಜಿಲ್ಲಾ ಪುನರ್ ವಿಂಗಡನೆಗೆ ಮಾಡಿದಾಗಲೂ ಕೂಡ ಜಮಖಂಡಿಯನ್ನು ನಿರ್ಲಕ್ಷಿಸಿ ಬಾಗಲಕೊಟ ಜಿಲ್ಲೆಗೆ ಸೇರಿಸಿದ್ದಕ್ಕಾಗಿ ಇದು ತಾಲೂಕು ಹಾಗೂ ಉಪವಿಭಾಗವಾಗಿ ಮುಂದಿವರೆದುಕೊಂಡು ಬಂದಿದೆ.

ಈಗ ಪ್ರಮುಖ ತಾಲೂಕು ಹಾಗೂ ಉಪವಿಭಾಗವಾಗಿರುವ ಈ ತಾಲೂಕಿನ ವಿಸ್ತೀರ್ಣ ೧೧೬೯ಚ.ಕಿ.ಮೀ. ತಾಲೂಕಿನ ಒಟ್ಟು ಗ್ರಾಮಗಳ ಸಂಖ್ಯೆ - ೭೧, ನಾಡಕಾರ್ಯಾಲಯಗಳು – ೨, ಪಟ್ಟಣಗಳು – ೩, ಗ್ರಾಮ ಪಂಚಾಯತ್‌ಗಳು – ೩೭. ತಾಲೂಕಿನ ಒಟ್ಟು ಜನಸಂಖ್ಯೆ ೨೦೦೧ರ ಜನಗಣತಿಯ ಪ್ರಕಾರ - ೪,೦೮,೪೪೧. ಇದರಲ್ಲಿ ಪುರುಷರು – ೨,೦೭,೯೦೪, ಸ್ತ್ರೀಯರು – ೨,೦೦,೫೩೭. ಉತ್ತರ ಅಕ್ಷಾಂಶ ೧೬° – ೨೬° ಮತ್ತು ೧೬° – ೪೭° ಪೂರ್ವ ರೇಖಾಂಶ ೭೫° – ೭° ಮತ್ತು ೭೫° – ೩೭° ಇವುಗಳ ಮಧ್ಯ ಈ ತಾಲೂಕು ಹಬ್ಬಿದೆ. ಈ ಉಪವಿಭಾಗದಲ್ಲಿ ನೆರೆಯ ಮುಧೋಳ ಹಾಗೂ ಬೀಳಗಿ ತಾಲೂಕುಗಳು ಸೇರಿವೆ.[೨೧]

ಜಮಖಂಡಿ ತಾಲೂಕಿನ ಹೆಚ್ಚು ಪ್ರದೇಶ ಮಟ್ಟಸಭೂಮಿ. ಭೌಗೋಳಿಕವಾಗಿ ದಖನ್ ಪ್ರಸ್ಥಭೂಮಿಯ ಶುಷ್ಕ ಪ್ರದೇಶದಲ್ಲಿದೆ. ಆದರೂ ಇಲ್ಲಿ ವಾಯುಗುಣ ಸಾಮಾನ್ಯವಾಗಿ ಹಿತಕರವಾಗಿದೆ. ಡಿಸೆಂಬರ್‌ನಿಂದ ಮೇವರೆಗೆ ಅತ್ಯಂತ ಶುಷ್ಕ ಹವೆ ಇರುತ್ತದೆ. ಮುಂಗಾರು ಮಳೆಗಾಲದ ತಿಂಗಳುಗಳಲ್ಲಿ ದಟ್ಟನೆಯ ಮೋಡಗಳಿರುತ್ತವೆ. ಮಳೆಯ ಪ್ರಮಾಣ ೫೪೮.೬ ಮಿ.ಮೀ. ವಾರ್ಷಿಕ ಸರಾಸರಿ ೬೯೪.೭ ಮಿ.ಮೀ. ಇಲ್ಲಿ ನಾಲ್ಕು ವೃಷ್ಟಿಮಾಪಕ ಕೇಂದ್ರಗಳು ಕೆಲಸ ಮಾಡುತ್ತಿವೆ. ಈ ತಾಲೂಕಿನ ಬೆಟ್ಟಗಳ ಸುತ್ತಮುತ್ತ ಕೆಂಪು ಮಸಾರಿ ಭೂಮಿ ಇದ್ದರೆ ಉಳಿದ ಭಾಗ ಕರಿ ಎರೆಮಣ್ಣಿನ ಪ್ರದೇಶ.[೨೨]

ಫಲವತ್ತಾದ ಭೂಮಿ ಒಂದು ಕಡೆ, ಸುರಮ್ಯವಾದ ಗುಡ್ಡದ ಸಾಲು ಇನ್ನೊಂದೆಡೆ ತಾಲೂಕಿನ ಉತ್ತರಕ್ಕೆ ಹರಿಯುವ ಪೆರ್ದೊರೆ (ಕೃಷ್ಣಾ ನದಿ)

"ಜೋಳದ ಬೋನಕ್ಕೆ ಬೇಳೆಯ ತೊವೆಯಾಗಿ ಕಾಳೆಮ್ಮೆ ಕರೆದ ಹೈನಾಗಿ ಬೆಳವಲದ ಮೇಳ ನೋಡೆಂದ ಸರ್ವಜ್ಞ" ಎನ್ನುವ ಹಾಗೆ ಕೃಷ್ಣವೇಣಿಯ ಇಕ್ಕೆಲಗಳಲ್ಲಿ ಬೆಳೆಯುವ ಬಿಳಿ ಮುತ್ತಿನಂತಹ ಬಿಳಿಜೋಳ ಗುಡ್ಡದ ಬದಿಯ ಕೆಂಪುಮಸಾರಿಯಲ್ಲಿ ಬೆಳೆಯುವ ಅಕ್ಕಡಿ ಕಾಳುಗಳು, ಆಲಗೂರು ಮೊದಲಾದ

ಊರುಗಳಲ್ಲಿ ಕಾಳೆಮ್ಮೆಯ ಕೆನೆಮೊಸರು ಹೆರೆ ತುಪ್ಪದ ಸವಿಯನ್ನು ಸರ್ವಜ್ಞ ಮನದಣಿಯ ಉಂಡಿರಬೇಕು.[೨೩]

ಈ ತಾಲೂಕಿನ ವಾಯುವ್ಯ ಭಾಗದ ಅಂಚಿನಲ್ಲಿ ಕೃಷ್ಣಾ ನದಿ ಪ್ರವೇಶಿಸಿ ಅಥಣಿ ಜಮಖಂಡಿ ತಾಲೂಕುಗಳನ್ನು ಗಡಿಮಾಡಿಕೊಂಡು ಬೀಳಗಿ ತಾಲೂಕನ್ನು ಆಗ್ನೇಯ ಮುಖದಲ್ಲಿ ಪ್ರವೇಶಿಸಿಸುತ್ತದೆ. ಈ ನದಿ ದಂಡೆಯಲ್ಲಿರುವ ಸನಾಳ ಗ್ರಾಮದಿಂದ ಜಮಖಂಡಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗಿದೆ. ಘಟಪ್ರಭೆಯ ಎಡದಂಡೆ ಕಾಲುವೆಯಿಂದ ನೀರಾವರಿ ಸೌಕರ್ಯ ಒದಗಿಸಲಾಗಿದೆ, ಈ ತಾಲೂಕಿನಲ್ಲಿ ಕೆರೆಗಳ ಸಂಪತ್ತು ಇದೆ. ತೊದಲಬಾಗಿ, ಆಸಂಗಿ, ಜಗದಾಳ, ಜಮಖಂಡಿಗಳಲ್ಲಿ ದೊಡ್ಡ ದೊಡ್ಡ ಕೆರೆಗಳಿವೆ. ಅಂತರ್ಜಲ ಸಂಪತ್ತು ಇದೆ. ಈ ತಾಲೂಕಿನ ದಕ್ಷಿಣ ಭಾಗದಲ್ಲಿರುವ ತೇರದಾಳದಿಂದ ಪೂರ್ವಾಭಿಮುಖವಾಗಿ ಹೆಚ್ಚು ಎತ್ತರವಲ್ಲದ ಬೆಟ್ಟದ ಸಾಲು ಇದೆ. ಬೆಟ್ಟ ಪ್ರದೇಶ ಕಲಾದಗಿ ಗುಂಪಿನ ಶಿಲೆಗಳದ್ದಾಗಿದೆ.

ಈ ತಾಲೂಕಿನಲ್ಲಿ ೧೧,೪೧೦ ಹೆಕ್ಟೇರ ಅರಣ್ಯಪ್ರದೇಶವಿದೆ. ಮಳೆಯ ಅಭಾವ ಹಾಗೂ ಇದ್ದಷ್ಟು ಇರುವಷ್ಟು ಬಹುತೇಕ ಪ್ರದೇಶವನ್ನು ವ್ಯವಸಾಯಕ್ಕೆ ಬಳಸಿರುವುದು, ಅರಣ್ಯ ವಿಸ್ತೀರ್ಣ ಕಡಿಮೆಯಾಗಲು ಕಾರಣವಾಗಿದೆ. ಅರಣ್ಯ ಮೃಗಗಳ ಸಂಖ್ಯೆ ಕಡಿಮೆ ಪಕ್ಷಿಸಂಕುಲ ದಿನೇ ದಿನೇ ಕ್ಷೀಣಿಸುತ್ತಿದೆ. ಆರ್ಥಿಕವಾಗಿ ಲಾಭ ತರುವ ಖನಿಜ ಸಂಪನ್ಮೂಲಗಳಿಲ್ಲ. ಕಟ್ಟಡ ನಿರ್ಮಾಣಕ್ಕೆ ಬಳಸಬಹುದಾದ ಕೆಂಪು ಕಲ್ಲುಗಳು ಸಿಗುತ್ತವೆ. ಸುಣ್ಣ ತಯಾರಿಕೆಗೆ ಒದಗುವ ಸುಣ್ಣದ ಕಲ್ಲಿನ ಗಣಿಗಳು ಇಲ್ಲವೆ.[೨೪]

ಈ ತಾಲೂಕಿನ ದೊಡ್ಡ ಊರುಗಳಾದ ಸಾವಳಗಿ, ತುಂಗಳ, ರಬಕವಿ, ಬನಹಟ್ಟಿ, ತೇರದಾಳ ಕೇವಲ ಪ್ರಮುಖ ಊರುಗಳಲ್ಲದೆ ಐತಿಹಾಸಿಕೆ ಸ್ಥಳಗಳಾಗಿದ್ದು ಪ್ರಾಚೀನ ಇತಿಹಾಸವನ್ನು ಹೊಂದಿದ ಸ್ಥಳಗಳಾಗಿವೆ, ಇಷ್ಟೇ ಅಲ್ಲದೆ ಇದೇ ವರ್ಷ ಅಂದರೆ ೨೦೦೯ ರ ವರ್ಷದಂದು ಬನಹಟ್ಟಿ & ರಬಕವಿ ಸೇರಿಸಿ ಹೊಸ ತಾಲೂಕು ಮಾಡುವ ಗುರಿಯನ್ನು ಸರ್ಕಾರ ಹೊಂದಿದೆ.

ಮುಖ್ಯ ಉದ್ಯೋಗ ವ್ಯವಸಾಯ ಮತ್ತು ಪಶುಪಾಲನೆ, ಪಟ್ಟಣ ಪ್ರದೇಶಗಳಾದ ಜಮಖಂಡಿ, ರಬಕವಿ, ಬನಹಟ್ಟಿ, ತೇರದಾಳ, ಹುನ್ನೂರರಂತಹ ಸ್ಥಳಗಳಲ್ಲಿ ನೇಕಾರಿಕೆ ಮುಖ್ಯ ಉದ್ಯೋಗ. ಇತರೆ ನೌಕರದಾರರು ಪಟ್ಟಣ ಪ್ರದೇಶದಲ್ಲಿದ್ದಾರೆ. ವ್ಯಾಪಾರ ವ್ಯವಹಾರಗಳು ಸುಗಮವಾಗಿ ನಡೆಯುತ್ತಿವೆ.

ಅಡಿ ಟಿಪ್ಪಣಿಗಳು

೧. ಕಟ್ಟಿ ವೆಂಕಟ ರಂಗೋ : ಗ್ಯಾಜೆಟಿಯರ್, ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು, ಪು. ೫೧.

೨. ಕಂಠಿ ಹನುಮಂತರಾಯ (ಸಂ): ಬಾಗಲಕೋಟ ಜಿಲ್ಲಾ ದರ್ಶನ ಪು. ೧

೩. ಕಂಠಿ ಹನುಮಂತರಾಯ (ಸಂ) ಬಾಗಲಕೋಟ ಜಿಲ್ಲಾ ದರ್ಶನ ಪು ೨.

೪. ಕಂಠಿ ಹನುಮಂತರಾಯ (ಸಂ) ಬಾಗಲಕೋಟ ಜಿಲ್ಲಾ ದರ್ಶನ. ಪು. ೨

೫. ಬಜಂತ್ರಿ ದೊಡ್ಡಣ್ಣ (ಸಂ) ತ್ರಿದಳ ಸೌರಭ ಸ್ಮರಣ ಸಂಚಿಕೆ, ಲೇಖನ – ೩, ಪು – ೬

೬. ಮುನಿಸ್ವಾಮಿ ಆರ್ (ಪು. ಸಂ.): ಕರ್ನಾಟಕ ರಾಜ್ಯ ಗೆಜೆಟಿಯರ್ ಬಾಗಲಕೋಟ ಜಿಲ್ಲೆ ಸಹಿತ. ಪು. ೫೧.

೭. ಮುನಿಸ್ವಾಮಿ ಆರ್ (ಪು. ಸಂ.): ಕರ್ನಾಟಕ ರಾಜ್ಯ ಗೆಜೆಟಿಯರ್ ಬಾಗಲಕೋಟ ಜಿಲ್ಲೆ ಸಹಿತ. ಪು. ೫೧.

೮. ಅ. ಸುಂದರ, ದಿ ಅರ್ಲಿ ಚೇಂಬರ್ ಟೋಂಬ್ಸ ಆಫ್ ಸೌತ್ ಇಂಡಿಯಾ ಪು. ೩, ೨೮, ೨೯

೯. ಅ. ಸುಂದರ, ದಿ ಅರ್ಲಿ ಚೇಂಬರ್ ಟೋಂಬ್ಸ ಆಫ್ ಸೌತ್ ಇಂಡಿಯಾ ಪು. ೩, ೨೮, ೨೯

೧೦. ಮುನಿಸ್ವಾಮಿ ಆರ್ (ಪು.ಸಂ.) ಕರ್ನಾಟಕ ರಾಜ್ಯ ಗೆಜೆಟಿಯರ್ ಬಾಗಲಕೋಟ ಜಿಲ್ಲೆ ಸಹಿತ ಪು. ೬೪.

೧೧. ಬಜಂತ್ರಿ ದೊಡ್ಡಣ್ಣ (ಸಂ) : ತ್ರಿದಳ ಸೌರಭ ಸ್ಮರಣ ಸಂಚಿಕೆ, ಲೇಖನ ೩. ಪು. ೨.

೧೨. ಬಜಂತ್ರಿ ದೊಡ್ಡಣ್ಣ (ಸಂ) : ತ್ರಿದಳ ಸೌರಭ ಸ್ಮರಣ ಸಂಚಿಕೆ, ಲೇಖನ ೩. ಪು. ೨.

೧೩. ಕಟ್ಟಿ ವೆಂಕಟ ರಂಗೋ : ಪೂರ್ವೋಕ್ತಿ. ಪು ೫೨೩.

೧೪. ಬಾಂಗಿ ತಾತಾಸಾಹೇಬ : ಜಮಖಂಡಿ ಜಲ್ಲೆ ಏಕೆ, ಹೇಗೆ? ಪು : ೧೨.

೧೫. ಬಜಂತ್ರಿ ದೊಡ್ಡಣ್ಣ (ಸಂ) ತ್ರಿದಳ ಸೌರಭ ಸ್ಮರಣ ಸಂಚಿಕೆ ಲೇಖನ ೧, ೨. ಪು ೨.

೧೬. ಮಲ್ಲಿಕಾರ್ಜುನ ಎಂ (ಸಂ) : ಜೈ ಜಮಖಂಡಿ ಪಾಕ್ಷಿಕ ಸಂಚಿಕೆ – ೨, ಪು ೩

೧೭. ಡಾ॥ ಸಂಗಮೇಶ ಬಿರಾದಾರ ಆಧ್ಯಕ್ಷೀಯ ಭಾಷಣ ಜಮಖಂಡಿ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ.

೧೮. ಬಾಂಗಿ ತಾತಾಸಾಹೇಬ : ಜಮಖಂಡಿ ಜಿಲ್ಲೆ ಏಕೆ, ಹೇಗೆ? ಪು ೧೨

೧೯. ಬಾಂಗಿ ತಾತಾಸಾಹೇಬ : ಜಮಖಂಡಿ ಜಿಲ್ಲೆ ಏಕೆ, ಹೇಗೆ? ಪು. ೧೪

೨೦. ಬೆಳಗಲಿ ದುಂ. ನಿ. : ಜಮಖಂಡಿ ತಾಲೂಕು ದರ್ಶನ. ಪು. ೪

೩೧. ಸಂಗ್ರಹ : ಜಮಖಂಡಿ ತಾಲೂಕಿನ ಆದರ್ಶ [illegible] ತಾಲೂಕ ಕಛೇರಿ ಜಮಖಂಡಿ.

೩೨. ಬೆಳಗಲಿ ದುಂ. ನಿಂ. : ಜಮಖಂಡಿ ತಾಲೂಕು ದರ್ಶನ. ಪು. ೫.

೩೩. ಡಾ॥ ಸಂಗಮೇಶ ಬಿರಾದಾರ : ಅಧ್ಯಕ್ಷೀಯ ಭಾಷಣ – ಜಮಖಂಡಿ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ.

೩೪. ಬೆಳಗಲಿ ದುಂ. ನಿ. : ಜಮಖಂಡಿ ತಾಲೂಕು ದರ್ಶನ. ಪು. ೬.

ಅಧ್ಯಾಯ – ಮೂರು

ದೇವಾಲಯಗಳ ವೈಶಿಷ್ಟ್ಯಗಳು

ನಿಸರ್ಗದ ವೈಚಿತ್ರಗಳಿಗೆ ವಿಶಿಷ್ಠ ಶಕ್ತಿಯೇ (ದೇವರು) ಕಾರಣವೆಂದು ನಂಬುವ ಕಾಲವಿತ್ತು. ಗುಹೆಗಳಲ್ಲಿ ಮರದ ಪೊಟರೆಗಳಲ್ಲಿ ವಾಸಿಸುತ್ತಿದ್ದ ಆದಿಮಾನವ ವಾಸಕ್ಕೆ ಅನುಕೂಲವಾದ ಕಟ್ಟಡಗಳನ್ನು ಕಟ್ಟಿಕೊಳ್ಳುವುದನ್ನು ಕಲಿತಾಗ ನಾಗರಿಕತೆಯ ಜೀವನದಲ್ಲಿ ಪ್ರಗತಿಯನ್ನು ಕಂಡುಕೊಂಡನು. ಅನುಭವ ಬೆಳೆದಂತೆ ಸನ್ನಿವೇಶಗಳು ಬದಲಾದಂತೆ ಕಟ್ಟಡಗಳ ನಿರ್ಮಾಣದಲ್ಲಿ ಕೇವಲ ಉಪಯುಕ್ತತೆಯ ಜೊತೆಗೆ ಸೌಂದರ್ಯ ದೃಷ್ಠಿ ಬೆಳೆಯಿತು.[೧] ಮಾನವನ ಬುದ್ದಿವಿಕಾಸವಾದಂತೆ ವಿಶಿಷ್ಠ ಶಕ್ತಿಯನ್ನು ಮಾಹಾಪುರುಷರು ಕಂಡುಕೊಂಡರು. ಇದಕ್ಕೆ ಕಲ್ಲು, ಇಟ್ಟಿಗೆ, ಮಣ್ಣು ಬಳಸಿ ಅದಕ್ಕೊಂದು ರೂಪಕೊಟ್ಟು ದೇವರು ಎಂದು ಕರೆದರು. ಇದು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿರುವಂತಹದು. ಮೂರ್ತಿ (ದೇವರು)ಗೆ ಗಾಳಿ ಬಿಸಿಲು ತಾಗಬಾರದೆಂದು ಪುಟ್ಟ ತಾಣಗಳನ್ನು ಕಟ್ಟಲು ಪ್ರಾರಂಭಿಸಿದರು. ಮುಂದೆ ಇದುವೇ ಗರ್ಭಗೃಹವಾಗಿ ರೂಪುಗೊಂಡಿತು. ಇಂತಹ ಪ್ರವೃತ್ತಿ ನಮ್ಮ ದೇಶದಲ್ಲಿ ಬಹಳ ಹಿಂದೆಯೇ ಅಂದರೆ ಕ್ರಿ.ಪೂ.ದಲ್ಲಿಯೇ ನಡೆಯಿತು.[೨] ನಂತರ ದೇವಾಲಯಗಳ ನಿರ್ಮಾಣ ಕಾರ್ಯ ಪ್ರಾರಂಭವಾಯಿತೆನ್ನಬಹುದು.

ದೇವಾಲಯ ಸಂಸ್ಕೃತಿ – ಉತ್ಕರ್ಷ ಹೊಂದುತ್ತಿರುವ ವ್ಯಕ್ತಿಗಳ ಹಾಗೂ ಸಮುದಾಯಗಳ ಪ್ರತಿಷ್ಠೆಯ ಸಂಕೇತವಾಯಿತೆಂದೇ ಹೇಳಬಹುದು. ದೇವಾಲಯವನ್ನು ಕಲ್ಲಿನಲ್ಲಿ ಕಟ್ಟಿಸುವುದು ಹಾಗೂ ಅದಕ್ಕೊಂದು ಶಾಸನ ಹಾಕಿಸುವುದು ಇತ್ಯಾದಿ. ಭಕ್ತನೊಬ್ಬ ದೇವರಿಗೆ ಮಾಡಬಹುದಾದ ಅತೀ ಶ್ರೇಷ್ಠ ಸೇವೆ ಎಂದು ಪರಿಗಣಿಸುವಂತಾಯಿತು.[೩]

ದೇವಾಲಯಗಳ ನಿರ್ಮಾಣದಂತಹ ಘನಕಾರ್ಯದ ಹಿಂದೆ ಅನೇಕ ಉದ್ದೇಶಗಳು ಅಡಕವಾಗಿವೆ. ಇದರಿಂದ ತಮ್ಮ ವಂಶಜರಿಗೂ ಮೋಕ್ಷ ಸಿಗುತ್ತದೆ ಎಂಬ ನಂಬಿಕೆ ಬೆಳೆದಿತ್ತು.

ದೇವಾಲಯಗಳ ರಚನೆ ವೈವಿದ್ಯಮಯವಾಗಿ ಬೆಳೆಯಲು ಪ್ರಕೃತಿ ಪರಿಸರ ಕಟ್ಟಡ ಸಾಮಗ್ರಿಗಳ ಅನುಕೂಲ, ಜನರ ಅಭಿರುಚಿ, ಪ್ರಬಲವಾಗುತ್ತಿದ್ದ ಇತರೆ ಮತಗಳು ಹೊರ ದೇಶದ ಪ್ರಭಾವ, ಆಯಾ ಪ್ರದೇಶದಲ್ಲಿ ಪ್ರಚಲಿತವಿದ್ದ ವಾಸ್ತುಶಿಲ್ಪ ಶೈಲಿಗಳಲ್ಲಿ ತಮ್ಮ ವೈಶಿಷ್ಟ್ಯದ ಜೊತೆಗೆ ದೇವಾಲಯಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ.

ವಾಸ್ತುಶಿಲ್ಪವೆಂದರೆ ನಿಖರವಾದ ಆಕಾರವನ್ನೇ ವ್ಯವಸ್ಥೆಗೊಳಿಸಿ ಅದಕ್ಕೊಂದು ರೂಪ ಕೊಡುವ ಕಲೆ. ಗೋಡೆಗಳನ್ನು ಹಾಕಿ ಮೇಲ್ಛಾವಣಿಗಳನ್ನು ನಿರ್ಮಿಸಿ ಅನಂತವಾದ ಆಕಾಶವನ್ನು ಸಾಂತ್ವನಗೊಳಿಸಿ ಅದನ್ನು ಉಪಯೋಗಕ್ಕಾಗಿ ಹಿಡಿದಿಡುವುದು ಮತ್ತು ಆ ಮೂಲಕ ಸಂಪೂರ್ಣ ಹೊಸರೂಪಗಳನ್ನು ಸೃಷ್ಠಿಸುವುದು.[೪]

ದೇವಾಲಯಗಳಲ್ಲಿ ಅತ್ಯಂತ ಪ್ರಾಚೀನವಾದವುಗಳೆಂದರೆ ಕ್ರಿ.ಪೂ. ೩ನೇ ಶತಮಾನದವು ಎಂದು ಹೇಳಲಾದ ಸ್ತೂಪಗಳು, ಚೈತ್ಯಾಲಯಗಳು, ವಿಹಾರಗಳು.

ಕರ್ನಾಟಕದಲ್ಲಿ ದೇವಾಲಯಗಳ ರಚನೆಯ ಉತ್ತಮ ಪರಂಪರೆಯೇ ಇದೆ. ಕರ್ನಾಟಕದಲ್ಲಿ ಅನೇಕ ಮತಗಳನ್ನವಲಂಬಿಸಿದ ದೇವಾಲಯಗಳು ರಚನೆಯಾದದ್ದು ಕಂಡುಬಂದಿದೆ. ದೇವಾಲಯಗಳ ನಿರ್ಮಾಣದೊಂದಿಗೆ ಅವಶ್ಯಕತೆಗೆ ತಕ್ಕಂತೆ ಮುಖ ಮಂಟಪ ಹಾಗೂ ದೂರದಿಂದ ಕಾಣುವುದಕ್ಕಾಗಿ ಎತ್ತರವಾದ ಶಿಖರಗಳು ನಿರ್ಮಾಣವಾದವು. ಹೀಗೆ ನಿರ್ಮಾಣವಾದ ದೇವಾಲಯಗಳ ನಿರ್ವಹಣೆಗೆ ಅದರ ಜೀರ್ಣೋದ್ದಾರಕ್ಕೆ ಅರಸರು, ರಾಣಿಯರು, ಸಾಮಂತರು, ಸಾಮಾನ್ಯ ಜನರು ದೇವಾಲಯಗಳಿಗೆ ದಾನದತ್ತಿಗಳನ್ನು ನೀಡುವದರಲ್ಲಿ ಸಕ್ರಿಯಪಾತ್ರವಹಿಸುತ್ತಿದ್ದರೆಂದು ಜಮಖಂಡಿ ತಾಲೂಕಿನಲ್ಲಿ ದೊರೆತಿರುವ ಶಾಸನಗಳಿಂದ ತಿಳಿದುಬರುತ್ತದೆ. ಅಲ್ಲದೇ ದೇವಾಲಯಗಳು ಕೇವಲ ಪೂಜಾ ಮಂದಿರಗಳಾಗಿ ಮಾತ್ರ ಕಾರ್ಯನಿರ್ವಹಿಸದೆ ಸಾಮಾಜಿಕ ಸಂಸ್ಥೆಗಳಾಗಿಯೂ ಕಾರ್ಯನಿರ್ವಹಿಸಿರುವುದನ್ನು ಶಾಸನಗಳು ತಿಳಿಸುತ್ತವೆ. ವಾಸ್ತುಶಿಲ್ಪ ಮೂರ್ತಿ ಶಿಲ್ಪದ ಬೆಳವಣಿಗೆಗೆ ಮಾತ್ರವಲ್ಲದೆ ವಿದ್ಯಾಭ್ಯಾಸಕ್ಕೆ ಧರ್ಮಕ್ಕೆ ಸಂಗೀತ, ನೃತ್ಯ ಇತ್ಯಾದಿ ಲಲಿತ ಕಲೆಗಳಿಗೆ ಅನ್ನ ಸತ್ರ ವೈದ್ಯಕೀಯ ವ್ಯವಸ್ಥೆಗಳಿಗೆ ಜನಸಮೂಹಕ್ಕೆ ದೇವಾಲಯಗಳು ಸಲ್ಲಿಸಿರುವ ಸೇವೆ ಗಣನೀಯವಾದುದು.[3]

ದೇವಾಲಯ ಸಮಾಜದ ಅವಿಭಾಜ್ಯ ಅಂಗ ಇಂದು ಹಾಗೂ ಹಿಂದೆಯೂ ದೇವಾಲಯಗಳು ಜನತೆಯನ್ನು ವಿವಿಧ ಕಾರಣಗಳಿಂದಾಗಿ ಆಕರ್ಷಿಸಿದ್ದವು ಎಂದು ಹೇಳಬಹುದು. ಏಕೆಂದರೆ ಇಂದಿಗೂ ದೇವಾಲಯಗಳಿಲ್ಲದ ಗ್ರಾಮಗಳೇ ಇಲ್ಲ. ಕೆಲವು ಹಳ್ಳಿಗಳಲ್ಲಿ ಹತ್ತಾರು ದೇವಾಲಯಗಳನ್ನು ಕಾಣಬಹುದು. ದೇವಾಲಯಗಳಿಂದಾಗಿಯೇ ಕೆಲವು ಸ್ಥಳಗಳು ಪ್ರಸಿದ್ಧಿ ಪಡೆದಿರುತ್ತವೆ. ಜಮಖಂಡಿ ತಾಲೂಕಿನಲ್ಲಿ ರಾಮತೀರ್ಥ, ಕಲ್ಲಳ್ಳಿ, ಕಡಪಟ್ಟಿ, ಶೂರ್ಪಾಲಿ, ಕೊಣ್ಣೂರು, ಮುತ್ತೂರು ಗ್ರಾಮಗಳು ಅಲ್ಲಿಯ ದೇವರು, ದೇವಾಲಯಗಳಿಂದಲೇ ಪ್ರಸಿದ್ಧವಾಗಿರುವುದನ್ನು ಸ್ಮರಿಸಬಹುದು.

ವ್ಯಕ್ತಿ ಮತ್ತು ಸಮಾಜದ ಪರಸ್ಪರ ಒಳಿತಿಗಾಗಿ ದೇವರುಗಳನ್ನು ಪೂಜಿಸುತ್ತಿದ್ದರು ಎಂದು ಹೇಳಬಹುದು. ಅಂತೆಯೇ ವ್ಯಕ್ತಿಯ ನೆಲೆಯಿಂದ ಪ್ರತ್ಯೇಕವಾಗಿ ಸಮುದಾಯ ಸಮೂಹದ ನೆಲೆಗೆ ಬಂದಾಗ ಎಲ್ಲರೂ ಒಂದೆಡೆ ಸೇರಿ ತಮಗೆಲ್ಲ ಸಾರ್ವಜನಿಕವಾಗಿ ಒಪ್ಪಿಗೆಯಾಗುವ ದೇವತೆಗಳನ್ನು ಪೂಜಿಸುವ ಪದ್ಧತಿ ಆರಂಭವಾಗಿರಬೇಕೆಂದೆನಿಸುತ್ತದೆ. ಕ್ರಮೇಣ ಮುಂದುವರೆದಂತೆ ದೇವಾಲಯಗಳು ಸಮುದಾಯ ಪೂಜಾ ಕೇಂದ್ರಗಳಾಗಿದ್ದವು. ದೇವರ ಪ್ರತಿಮೆಗೆ ಎಲ್ಲರ ಒಳಿತಿಗಾಗಿ ಪೂಜೆ ಸಲ್ಲಿಸುತ್ತಾ "ಸರ್ವೇಜನಾಃ ಸುಖಿನೋ ಭವಂತು" ಎಂಬ ವಿಶಾಲಭಾವವನ್ನು ಬೆಳೆಸಿಕೊಂಡ ನಮ್ಮ ಪೂರ್ವಜರ ಬದುಕು ನಮಗೆ ಅನುಕರಣೀಯ ಎಂಬುದರಲ್ಲಿ ಎರಡುಮಾತಿಲ್ಲ.

ದೇವಾಲಯಗಳು ಉಗಮಗೊಂಡ ಬಗ್ಗೆ ಖಚಿತವಾಗಿ ಹೇಳಲಾಗದು. ದೇವಾಲಯಗಳು ಶಾಶ್ವತವಾಗಿ ಉಳಿಯಬೇಕೆಂಬ ಹಂಬಲಕ್ಕೆ ಸ್ಥಳ ಪುರಾಣಗಳು, ವಿಶೇಷವಾದ ಆಚರಣೆಗಳೂ ಪೋಷಕವಾಗಿವೆ. ವೈದಿಕ ಮತದ ಹಿನ್ನಲೆಯಲ್ಲಿ ಕೆಲವು ದೇವಾಲಯಗಳು ಜಾನಪದ ಹಿನ್ನೆಲೆಯಲ್ಲಿ ಕೆಲವು ದೇವಾಲಯಗಳು, ಪುರಾಣದ ಹಿನ್ನಲೆಯಲ್ಲಿ ಮತ್ತಷ್ಟು ದೇವಾಲಯಗಳು ಪ್ರಾಮುಖ್ಯತೆ ಪಡೆದಿವೆ.

ಸಾಮಾನ್ಯವಾಗಿ ದೇವಾಲಯಗಳನ್ನು ಪವಿತ್ರ ಸ್ಥಳಗಳಲ್ಲಿ ಕಟ್ಟುತ್ತಿದ್ದರು. ವಾಸ್ತುಗ್ರಂಥವಾದ ಮಾನ ಸಾರವು ೭ (ಏಳು) ರೀತಿಯ ಪವಿತ್ರ ಸ್ಥಳಗಳನ್ನು ಹೆಸರಿಸಿ ಅಲ್ಲಿಯೇ ದೇವಾಲಯ ಕಟ್ಟಬೇಕೆಂದು ಸೂಚಿಸುತ್ತದೆ. ಆ ಪ್ರಕಾರ ನದಿಗಳ ಪಾತ್ರ, ಗುಡ್ಡ-ಬೆಟ್ಟಗಳಿಗೆ ಹತ್ತಿಕೊಂಡ ಏಣಿಯ ತಂತಿನಲ್ಲಿ ಬೆಟ್ಟದ ತುದಿ, ಕೆರೆಯ ದಂಡೆಯ ಮೇಲೆ ಕೊಳಗಳ ಹತ್ತಿರ ದೇವಾಲಯ ಕಟ್ಟಲು ಯೋಗ್ಯ ಸ್ಥಳಗಳೆಂದು ಸೂಚಿಸುತ್ತದೆ.[8] ಮಾನಸಾರದ ಪ್ರಕಾರ ನೋಡುವುದಾದರೆ, ಜಮಖಂಡಿ ತಾಲೂಕಿನ ಕೃಷ್ಣಾ ನದಿ ತೀರದ ಚಿಕ್ಕ ಜಂಬಗಿಯ ಕಲ್ಮೇಶ್ವರ ದೇವಾಲಯ, ಜನವಾಡದ ದೇವಾಲಯ, ಮುತ್ತೂರಿನ ಮಹಾಲಕ್ಷ್ಮೀ ದೇವಾಲಯ, ಜಮಖಂಡಿಯ ಕಲ್ಮೇಶ್ವರ ದೇವಾಲಯ ನಂದಿಗೆಪ್ಪನ ಗುಡಿ, ರಾಮತೀರ್ಥದ ರಾಮೇಶ್ವರ ದೇವಾಲಯ, ಬೆಟ್ಟದ ತುದಿಯಲ್ಲಿರುವ ಮೇಲಗಿರಿ ಲಿಂಗಪ್ಪ ದೇವಾಲಯ, ತುಂಗಳದಲ್ಲಿ ಇತ್ತೆಂದು ಹೇಳಲಾದ ಪರಮಾನಂದ ದೇವಾಲಯ, ಕಲ್ಹಳ್ಳಿಯ ವೆಂಕಟೇಶ್ವರ ದೇವಾಲಯ, ತುಬಚಿಯ ಶಿವಲಿಂಗೇಶ್ವರ ದೇವಾಲಯ, ಸಾವಳಗಿಯ ಸೋಮನಾಥ ದೇವಾಲಯ, ಬನಹಟ್ಟಿಯ ಕಾಡಸಿದ್ದೇಶ್ವರ ದೇವಾಲಯ, ತೇರದಾಳದ ಪ್ರಭುಸ್ವಾಮಿ ದೇವಾಲಯ, ಇನ್ನೂ ಮುಂತಾದ ದೇವಾಲಯಗಳು "ಮಾನಸಾರ" ಪ್ರಕಾರವೇ ಕಟ್ಟಲ್ಪಟ್ಟಿವೆ ಎಂದು ಹೇಳಬಹುದು.

ದೇವಾಲಯಗಳ ಶೈಲಿ :

ಹಿಂದೂಗಳು ತಮ್ಮ ಮನೋಧರ್ಮ ಮತ್ತು ತಾತ್ವಿಕತೆಯನ್ನು ತಾವು ನಿರ್ಮಿಸಿದ ದೇವಾಲಯಗಳ ಮೂಲಕ ಪ್ರತಿಬಿಂಬಿಸಿದ್ದಾರೆ. ಸರ್ವೇಸಾಮಾನ್ಯವಾಗಿ ದೇವಾಲಯಗಳ ರಚನಾಕಾರ್ಯ ವಿಸ್ತಾರಗೊಂಡಂತೆ ಅಥವಾ ಪ್ರಬುದ್ಧಾವಸ್ಥೆಯನ್ನು ಕಂಡಂತೆ ಸೂಕ್ಷ್ಮ ಕೆತ್ತನೆಯಿಂದ ಹಾಗೂ ವಿವಿಧ ಭಾಗಗಳನ್ನು ರಚನೆ ಮಾಡಿಕೊಂಡು ದೇವಾಲಯಗಳನ್ನು ನಿರ್ಮಿಸಿರುವುದನ್ನು ಕಾಣುತ್ತೇವೆ. ದೇವಾಲಯದ ಭಾಗಗಳೆಂದರೆ ಮುಖಮಂಟಪ, ರಂಗಮಂಟಪ, ಅಥವಾ ನವರಂಗ, ಸುಖನಾಶಿ ಮತ್ತು ಗರ್ಭಗೃಹ. ಗರ್ಭಗೃಹದ ಮೇಲೆ ಶಿಖರ, ಕೆಲವು ಕಡೆ ಒಂದಕ್ಕಿಂತ ಹೆಚ್ಚು ಗರ್ಭಗೃಹಗಳು ಕಂಡುಬರುತ್ತವೆ. ಅವು ಕೆಳಗಿನಂತಿವೆ.

ಒಂದೇ ಗರ್ಭಗೃಹವಿದ್ದರೆ	–	ಏಕ ಕೂಟ ದೇವಾಲಯ
ಎರಡು ಗರ್ಭಗೃಹಗಳಿದ್ದರೆ	–	ದ್ವಿಕೂಟ ದೇವಾಲಯ
ಮೂರು ಗರ್ಭಗೃಹಗಳಿದ್ದರೆ	–	ತ್ರಿಕೂಟ ದೇವಾಲಯ
ನಾಲ್ಕು ಗರ್ಭಗೃಹಗಳಿದ್ದರೆ	–	ಚೌ ಕೂಟ ದೇವಾಲಯ (ಚತುರ್ಥ ಕೂಟ ದೇವಾಲಯ)
ಐದು ಗರ್ಭಗೃಹಗಳಿದ್ದರೆ	–	ಪಂಚ ಕೂಟ ದೇವಾಲಯವೆಂದು ಕರೆಯುತ್ತಾರೆ.

ಇನ್ನು ಕೆಲವು ದೇವಸ್ಥಾನದಲ್ಲಿ ಒಂದು ಗರ್ಭಗೃಹದ ಮೇಲೆ ಮತ್ತೊಂದು ಗರ್ಭಗೃಹ ಮೇಲಿನ ಗರ್ಭಗೃಹಕ್ಕೆ ಹೋಗಲು ಮೆಟ್ಟಲುಗಳು ನಿರ್ಮಾಣವಾಗಿರುವುದನ್ನು ಕಾಣುತ್ತೇವೆ. ಇವೆಲ್ಲಾ ದೇವಾಲಯದ ಒಳಭಾಗದಲ್ಲಿ ಕಂಡುಬಂದರೆ ಹೊರಭಾಗದಲ್ಲಿ ಕಂಡುಬರುವ ವೈಶಿಷ್ಟ್ಯಗಳೆಂದರೆ ದೇವಸ್ಥಾನದ ತಳ ವಿನ್ಯಾಸ ನಾಲ್ಕು ಕೋನಗಳಿಂದ ಅಥವಾ ಅಷ್ಟಕೋನಗಳಿಂದಲೂ ಅಥವಾ ನಕ್ಷತ್ರಾಕಾರದಿಂದಲೂ

ಪ್ರಾರಂಭವಾಗಿರುವುದನ್ನು ಕಾಣಬಹುದು.. ಅಲ್ಲದೇ ದೇವಾಲಯದ ಮುಂಬಾಗದಲ್ಲಿ ನಿರ್ಮಿಸಿದ್ದ ಮಹಾದ್ವಾರದ ಮೇಲ್ಭಾಗದಲ್ಲಿ ನಿರ್ಮಿಸಿದ ಗೋಪುರಗಗಳು ಮತ್ತು ಗರ್ಭ ಗೃಹಗಳ ಮೇಲೆ ನಿರ್ಮಿಸಿದ ಗೋಪುರ ನೋಡಿ ವಿನ್ಯಾಸಗಳಲ್ಲಿ ವೈವಿಧ್ಯತೆಯನ್ನು ಕಂಡುಕೊಳ್ಳುವ ಅವುಗಳನ್ನು ಶೈಲಿಗಳನ್ನಾಗಿ ಮಾರ್ಪಡಿಸಿರುವದನ್ನು ಕಾಣುತ್ತೇವೆ. ಅಷ್ಟೇ ಅಲ್ಲದೇ ಶಿಲ್ಪ ವಿಮರ್ಶಕರ ಭಾರತದ ಶಿಲ್ಪಶಾಸ್ತ್ರ ವೈಖರಿಯನ್ನು ಈ ಕೆಳಗಿನಂತೆ ನಾಲ್ಕು ಭಾಗಗಳನ್ನಾಗಿ ವಿಂಗಡಿಸಿದ್ದಾರೆ.[೭]

೧. ನಾಗರ ಶೈಲಿ

೨. ದ್ರಾವಿಡ ಶೈಲಿ.

೩. ವೇಸರ ಶೈಲಿ.

೪. ಆಧುನಿಕ ಶೈಲಿ (ಅಭಿಯಂತ ಶೈಲಿ)

ಇತ್ತೀಚಿನ ದಿನಗಳಲ್ಲಿ ನಿರ್ಮಾಣಗೊಂಡ ದೇವಾಲಯಗಳ ಶೈಲಿಯನ್ನು ಆಧುನಿಕ ಶೈಲಿ ಅಥವಾ ಅಭಿಯಂತರ ಶೈಲಿ ಎಂದು ಕರೆಯಬಹುದು.

೧. ನಾಗರ ಶೈಲಿ :

ನಾಗರ ಶೈಲಿಯನ್ನು ಉತ್ತರ ಭಾರತ ಶೈಲಿಯೆಂದು ಮತ್ತೊಂದು ಹೆಸರಿನಿಂದ ಕರೆಯುತ್ತಾರೆ. ಔತ್ತರೇಯ ಶೈಲಿ ಎಂದು ಕೂಡಾ ಕರೆಯುತ್ತಾರೆ. ಈ ಶೈಲಿಯ ಪ್ರಮುಖ ಲಕ್ಷಣವೆಂದರೆ ದೇವಾಲಯದ ಶಿಖರ ತಳಭಾಗದಿಂದ ಮೇಲ್ಭಾಗದವರೆಗೂ ಭಾಗಿದ ರೇಖೆಯ ಆಕಾರದಲ್ಲಿ ಶಿಖರದವರೆಗೂ ಕಟ್ಟಲ್ಪಟ್ಟಿರುವ ಶೃಂಗದ ಆಕಾರದ (ಬಾಗಿದ) ಕಳಸವನ್ನು ಹೊಂದಿರುತ್ತವೆ. ದೇವಾಲಯದ ಶಿಖರಗಳು ಸಾಮಾನ್ಯವಾಗಿ ಮೂಲದಿಂದ ಚತುರ್ಥಾಕಾರದಲ್ಲಿ ಇದ್ದು ಬಾಗಿದ ರೇಖೆಯ ರೂಪದಲ್ಲಿ ಕಟ್ಟಲ್ಪಟ್ಟಿರುತ್ತದೆ. ವಿಶೇಷವಾಗಿ ಈ ತರಹದ ದೇವಾಲಯಗಳನ್ನು ಉತ್ತರ ಭಾರತದ ಅರಸು ಮನೆತನದವರು ಅನುಸರಿಸುತ್ತಿದ್ದರು. ಉತ್ತರ ಭಾರತದ ಗುಪ್ತ ಮತ್ತು ಗುಪ್ತೇತರರ ಕಾಲದಲ್ಲಿ ಬೌದ್ಧ ಚೈತ್ಯಾಲಯಗಳಿಂದ ಸ್ಪೂರ್ತಿ ಪಡೆದು ದೇಗುಲಗಳ ನಿರ್ಮಾಣದ ಪ್ರಯೋಗಗಳು ನಡೆಯುತ್ತಿದ್ದ ಕಾಲದಲ್ಲಿ ದಕ್ಷಿಣದಲ್ಲಿಯೂ ಕೂಡಾ ಬದಾಮಿ ಚಾಲುಕ್ಯ ಮನೆತನದ ಅರಸರು ಸ್ವತಂತ್ರ ದೇವಾಲಯಗಳ ರಚನೆಯಲ್ಲಿ ಯಶಸ್ವಿ ಪ್ರಯೋಗಗಳನ್ನು ಮಾಡಲಾರಂಭಿಸಿದರು. ಜಮಖಂಡಿಯೂ ಕೂಡಾ ಬದಾಮಿ ಚಾಲುಕ್ಯರ ಅಂಗ ಪ್ರದೇಶವೇ ಆಗಿದ್ದರಿಂದ ಜಮಖಂಡಿಯಲ್ಲಿಯೂ ಕೂಡಾ ಪ್ರಾರಂಭಿಕ – ಹಂತದಲ್ಲಿ ಗುಹಾಲಯಗಳ ಮಾದರಿಯಲ್ಲಿ ದೇವಾಲಯಗಳು ನಿರ್ಮಾಣವಾಗಿದ್ದವೆಂದು ಹೇಳಬಹುದು. ತದನಂತರದಲ್ಲಿ ದೇವಾಲಯಗಳ ರಚನೆಯ ಕಾರ್ಯದಲ್ಲಿ ಸೂಕ್ಷ್ಮತೆ, ವಿಸ್ತರಣೆ ಬೆಳೆದು ಬಂದಂತೆ ದೇವಾಲಯಗಳ ರಚನಾ ಕಾರ್ಯದಲ್ಲಿ ಬದಲಾವಣೆಗಳನ್ನು ಕಾಣಲಾಗಿದೆ.

ನಾಗರ ಶೈಲಿಯ ದೇವಾಲಯಗಳಲ್ಲಿ ಶಿಖರಗಳು ಮೇಲೇರಿದಂತೆ ಸ್ವಲ್ಪವೇ ಸ್ವಲ್ಪ ಬಾಗಿದ ನೇರ ಸಮನಾಂತರ ಪಟ್ಟಿಕೆಗಳಿಂದ ಕೂಡಿರುತ್ತವೆ. ನಿರ್ದಿಷ್ಟ ಅಂತರದಲ್ಲಿ ಮೂರ್ತಿಗಳು ಮತ್ತು ಚಿಕ್ಕ ಚಿಕ್ಕ ಅಮಲಕಗಳನ್ನು ಇಟ್ಟಿರುವದನ್ನು ನೋಡಬಹುದು. ಮೇಲೆ ದೊಡ್ಡದಾದ ಅಮಲಕ ಮತ್ತು ಅದರ ಮೇಲೆ

ಕಳಸ ಇರುವದನ್ನು ಕಾಣುತ್ತೇವೆ. ಈ ತೆರನಾದ ದೇವಾಲಯಗಳು ವಿಶೇಷವಾಗಿ ಜಮಖಂಡಿ ತಾಲೂಕಿನಲ್ಲಿ ಕಾಣಿಸದಿದ್ದರೂ ಜಮಖಂಡಿಯನ್ನು ಆಳಿದ್ದಾರೆ ಎಂದು ಹೇಳಬಹುದಾದ ಬದಾಮಿ ಚಾಲುಕ್ಯರ ರಾಜಧಾನಿ ಪ್ರದೇಶಗಳಲ್ಲಿ ನಾಗರ ಶೈಲಿಯ ಶಿಖರಗಳನ್ನು ಕಾಣಬಹುದು.

ಇನ್ನು ಕೆಲವು ದೇವಾಲಯಗಳ ಶಿಖರಗಳು, ರೇಖಾನಾಗರ ಶೈಲಿಯಲ್ಲಿ ಬೆಳೆದು ಮೇಲೆ ವೃತ್ತಾಕಾರದ ಆಕಾರದಿಂದ ಕೂಡಿ ಅಮಲಕಗಳ ಭಾಗ ಮತ್ತು ಅದರ ಮೇಲೆ ಕಳಶ ನಿರ್ಮಿಸಿರುವುದನ್ನು ಕಾಣಬಹುದು. ಶಿಖರದ ಮೇಲ್ಭಾಗದಿಂದ ಕೆಳಭಾಗಕ್ಕೆ ಸುರಳಿ ಆಕಾರದಲ್ಲಿ ಇಳಿಬಿಟ್ಟ ಪರದೆಗಳಂತೆ ಕಾಣುವ ಉರು ಶೃಂಗಗಳನ್ನು ಕಾಣಬಹುದು.

೨. ದ್ರಾವಿಡ ಶೈಲಿ :

ದ್ರಾವಿಡ ಶೈಲಿಯ ಶಿಖರದ ದೇವಾಲಯಗಳು ವಿಶೇಷವಾಗಿ ದಕ್ಷಿಣ ಭಾರತವನ್ನಾಳಿದ ಪಲ್ಲವ, ಚೋಳ, ಪಾಂಡ್ಯ ಅರಸರ ಕಾಲದಲ್ಲಿ ನಿರ್ಮಾಣಗೊಂಡಂತಹ ಶೈಲಿ. ಇದಕ್ಕೆ ದಕ್ಷಿಣ ಶೈಲಿಯಂತಲೂ ಕರೆಯುತ್ತಾರೆ.[೮] ಈ ಶೈಲಿಯ ಪ್ರಭಾವ ನೇರವಾಗಿ ಜಮಖಂಡಿ ತಾಲೂಕಿನಲ್ಲಿ ನಿರ್ಮಾಣವಾದ ದೇವಾಲಯಗಳಲ್ಲಿ ಕಂಡುಬಂದಿದ್ದರೂ ಪಲ್ಲವ, ಚೋಳರ ನಂತರ ರಾಜ್ಯವನ್ನಾಳಿದ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕಂಡುಬರುತ್ತವೆ. ಇವರು ಜಮಖಂಡಿ ಪ್ರದೇಶದಲ್ಲಿ ದ್ರಾವಿಡ ಶೈಲಿಯ ಒಂದಿಷ್ಟು ರಚನೆಗಳನ್ನು ಅನುಸರಿಸಿದ್ದನ್ನು ಕಾಣಬಹುದು.

ವಾಸ್ತವವಾಗಿ ಹೇಳುವದಾದರೆ ದ್ರಾವಿಡ ಶೈಲಿಯ ಗೋಪುರಗಳು ತಳವಿನ್ಯಾಸದಲ್ಲಿ ೬ – ೮ ಮುಖಗಳನ್ನು ಹೊಂದಿದ್ದು ಮೂಲದಿಂದ ಮೇಲಕ್ಕೆ ಹೋದಂತೆಲ್ಲಾ, ಮೆಟ್ಟಿಲು ಮೆಟ್ಟಿಲಾಗಿ ಹೋಗುತ್ತಾ ಇನ್ನು ಮೇಲೆ ಹೋದಂತೆ ಕಿರಿದಾಗುತ್ತಾ ಹೋಗಿ ತುದಿಯಲ್ಲಿ ವೃತ್ತಾಕಾರದ ರಚನೆಯ ಮೇಲೆ ಕಳಸವನ್ನು ನಿರ್ಮಿಸಿರುವದನ್ನು ಕಾಣುತ್ತೇವೆ.

ದೇವಸ್ಥಾನದ ಒಳಭಾಗಗಳು ಈ ಮೊದಲು ಹೇಳಿಂದತೆ ಮುಖ ಮಂಟಪ ನವರಂಗ ಸುಖನಾಸಿ ಗರ್ಭಗೃಹ, ಗರ್ಭಗೃಹದ ಒಳಗಡೆ ಮೂರ್ತಿ ಇವೆಲ್ಲವನ್ನು ಒಳಗೊಂಡಿರುತ್ತದೆ.

ವಿಶೇಷವಾಗಿ ದ್ರಾವಿಡ ಶೈಲಿಯನ್ನು ಅಳವಡಿಸಿಕೊಂಡಂತಹ ದೇವಾಲಯಗಳು ಜಮಖಂಡಿ ಪ್ರದೇಶದಲ್ಲಿ ಸಿಗುವದಿಲ್ಲವಾದರೂ ಉತ್ತರ ಶೈಲಿ ಮತ್ತು ದಕ್ಷಿಣ ಶೈಲಿ ಸಮ್ಮಿಶ್ರ ಶೈಲಿ (ವೇಸರ ಶೈಲಿ) ದೇವಾಲಯಗಳು ಜಮಖಂಡಿ ಪ್ರದೇಶದಲ್ಲಿ ವಿಶೇಷವಾಗಿ ಕಂಡುಬರುತ್ತವೆ. ಪರಿಪೂರ್ಣ ದ್ರಾವಿಡ ಶೈಲಿಯ ಶಿಖರಹೊಂದಿದ ದೇವಾಲಯಗಳು ಜಮಖಂಡಿ ಪ್ರದೇಶವನ್ನಾಳಿದ ಬದಾಮಿ ಚಾಲುಕ್ಯರ ರಾಜಧಾನಿಯಲ್ಲಿ ಕಾಣುಸಿಗುತ್ತವೆ.

೨. ವೇಸರ ಶೈಲಿ :

ಉತ್ತರ ಕರ್ನಾಟಕದಲ್ಲಿ ಹೆಚ್ಚು ದೇವಾಲಯಗಳು ನಿರ್ಮಾಣಗೊಂಡಿರುವುದು ಬದಾಮಿ ಚಾಲುಕ್ಯರ ಮತ್ತು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಎಂದೇ ಹೇಳಬಹುದು. ಅದರಲ್ಲೂ ವಿಶೇಷವಾಗಿ ಜಮಖಂಡಿ ತಾಲೂಕಿನ ಗ್ರಾಮಗಳಲ್ಲಂತೂ ಹೆಚ್ಚಾಗಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ

ದೇವಾಲಯಗಳಿವೆ. ಕಲ್ಯಾಣ ಚಾಲುಕ್ಯರ ಶೈಲಿ, ವೇಸರ ಶೈಲಿಯಾಗಿತ್ತು. ಆದ್ದರಿಂದಲೇ ಕಲ್ಯಾಣಿ ಚಾಲುಕ್ಯರ ಶೈಲಿಗೆ ವೇಸರ ಶೈಲಿ ಅಥವಾ ಕಲ್ಯಾಣಿ ಚಾಲುಕ್ಯರ ಶೈಲಿ ಅಥವಾ ಕರ್ನಾಟಕ ಶೈಲಿ ಎಂದು ಕರೆಯುತ್ತಾರೆ. ವೇಸರ ಶೈಲಿಯ ಸಂಕ್ಷಿಪ್ತ ಮಾಹಿತಿ ಮಾತ್ರ ನಮಗೆ ದೊರೆಯುತ್ತದೆ.

"ಗಜ ಪ್ರಷ್ಠಾಕಾರದಂತಿರುವ ಶಿಖರದ ಮಾದರಿ ಅಥವಾ ನಾಗರ, ದ್ರಾವಿಡ, ಮಾದರಿಗಳ ಮಿಶ್ರಣ ಮಾದರಿಗೆ "ವೇಸರ ಮಾದರಿ" ಎಂದು ಕರೆಯುತ್ತಾರೆ.[೯] ಕೆಲವೊಂದು ವಾಸ್ತುಶಿಲ್ಪ ಗ್ರಂಥಗಳಲ್ಲಿ ಈ ಮಾದರಿಯನ್ನು ಕೆಳಗಿನಂತೆ ವಿವರಿಸಲಾಗಿದೆ.

೧. **ಅಜಿತಾಗಮ ಕಂಠಾತ** – ಪ್ರಭಹೃತಿ ವೃತಂಯದವೆಸರಂ ಧಾಮ ಕಥ್ಯತೆ[೧೦] ಯಾವ ದೇವಾಲಯದ ಶಿಖರ ಕಂಠದಿಂದ ಮೇಲಿನವರೆಗೆ ವೃತ್ತಾಕಾರವಾಗಿರುತ್ತದೋ ಅದು ವೇಸರ.

೨. **ಮರೀಚೆ ಸಂಹಿತಾ :** 'ತಥೆಯಿಂದ ವೃತಾ ವೇಸರ ಅಥವಾ ಪ್ರಸ್ತರಾಂತರಂ ಸಮಚಿತುರಶ್ರಂ' ತದುವಾರಿ ವ್ಯಕ್ತಗ್ರೀವಾಶಿಖರಂ-ಚ-ವೇಸರಂ"[೧೧]

ವೃತ್ತಾಕಾರ ಆರು ತಳದಿಂದ ಪ್ರಸ್ತದವರೆಗೆ ಇದು ಅದರ ಮೇಲೆ ಕಂಠ ಹಾಗೂ ಶಿಖರಗಳು ವೃತ್ತಾಕಾರದಲ್ಲಿದ್ದರೆ ವೇಸರ.

೩. **ಕಶ್ಯಪ ಶಿಲ್ಪ :** ವೃತ್ತಗ್ರೀವ ಶಿರೋಪೇಕ್ಷಂ ವೇಸರಂ ಹರ್ಮ್ಯ ಮೀರಿತಮ. ಹರ್ಮ್ಯ ಅಂತಸ್ತುಳ್ಳ ಕಟ್ಟಡದ ಖಂಡ ಹಾಗೂ ಶಿರ (ಶಿಖರ) ಗಳು ವೃತ್ತಾಕಾರದಲ್ಲಿದ್ದರೆ ವೇಸರ.[೧೨]

೪. **ಶಾಮಿ ಕಾಗಮ :** ವೇಸರ ನತು ಪ್ರಕಥ್ಯೆತೆ ವೃತ ವೃತಾಯಂ ದ್ವೈಯಶ್ರಂ ಚಾನ್ಯಕಥ್ಯೆತೆ ವೃತ್ತಾಕಾರ ಅಂಡಾಕೃತಿ ಅಥವಾ ಜಗಕೃತಿಯೇ ವೇಸರ.[೧೩]

ಈ ಮೇಲೆ ಹೇಳಿದ ಮಾದರಿಯ ದೇವಾಲಯಗಳು ಬದಾಮಿ ಚಾಲುಕ್ಯರ ಕೊನೆಯ ಕಾಲದಲ್ಲಿ ಆದರೆ ಉಚ್ಛ್ರಾಯ ಸ್ಥಿತಿ ತಲುಪಿದ್ದು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಹಾಗೂ ನಂತರದಲ್ಲಿ ಎಂದೇ ಹೇಳಬಹುದು.

೪. ಆಧುನಿಕ – ಶೈಲಿ (ಅಭಿಯಂತರ ಶೈಲಿ) :

ಇದು ೨೧ನೇ ಶತಮಾನದ ಶೈಲಿಯಾಗಿದೆ. ಇಲ್ಲಿ ಎಲ್ಲ ಶೈಲಿಗಳನ್ನು ಸೇರಿಸಿ ಸಿಮೆಂಟ ಮತ್ತು ಕಬ್ಬಿಣದ ತಂತಿಗಳಿಂದ ಮೂರ್ತಿ ಶಿಲ್ಪಗಳನ್ನು ಕಲ್ಲಿನ ಮೂರ್ತಿ ಶಿಲ್ಪಗಳಂತೆ ರಚಿಸಿರುತ್ತಾರೆ. ಅಂತಹ ಮೂರ್ತಿ ಶಿಲ್ಪ ಮತ್ತು ದೇವಾಲಯಗಳನ್ನು ಜಮಖಂಡಿ ತಾಲೂಕಿನಲ್ಲಿ ನೂತನವಾಗಿ ನಿರ್ಮಾಣವಾದ ದೇವಾಲಯದಲ್ಲಿ ಕಾಣುತ್ತೇವೆ. ಉದಾ : ಕಡಪಟ್ಟಿ ಬಸವೇಶ್ವರ ದೇವಾಲಯದ ಪ್ರವೇಶದ್ವಾರ ಮತ್ತು ಹಿಪ್ಪರಗಿ ಸಂಗಮೇಶ್ವರ ದೇವಾಲಯ ಮುಂತಾದವು.

ಈ ಮೇಲೆ ಹೇಳಿದ ಮಾದರಿಯನ್ನು ಹೋಲಬಹುದಾದ ದೇವಾಲಯಗಳನ್ನು ಹಾಗೂ ಜಮಖಂಡಿ ತಾಲೂಕಿನಲ್ಲಿ ದೊರೆತಿರುವ ಶಾಸಗಳಲ್ಲಿ ಕಂಡುಬರುವ ದೇವಾಲಯಗಳನ್ನು ಈ ಕೆಳಗಿನಂತೆ ತಿಳಿಸಲಾಗಿದೆ.

ಪ್ರಮುಖ ದೇವಾಲಯಗಳು (ಶಾಸನದಂತೆ)

: ಶೈವದೇವಾಲಯಗಳು :

ಅ. ನಂ.	ಗ್ರಾಮ	ದೇವಾಲಯದ ಹೆಸರು	ಶಾಸನದ ಕಾಲ	ಉಲ್ಲೇಖ/ನಂ.
೧	ಆಲಗೂರ	ಕಲ್ಮೇಶ್ವರ	೧೦೧೬ – ೧೮	ಎಸ್. ಆಯ್. ಆಯ್.
೨	ಆಲಗೂರ	ಮಲ್ಲಿಕಾರ್ಜುನ	೧೨೪೫	ಅದೇ ನಂ. ೧–೦೩
೩	ಕಲಬೀಳಗಿ	ಸೋಮನಾಥ	೧೧೫೪	ಅದೇ ನಂ. ೧೨೩
೪	ಕುಂಚನೂರ	ಮಲ್ಲಿಕಾರ್ಜುನ		ಅದೇ ನಂ. ೧೬೮
೫	ಕೊಣ್ಣೂರ	ಪ್ರಭಾತೇಶ್ವರ	೧೧೮೫, ೮೮, ೧೨೩೮	ಎಸ್. ಆಯ್.ಆಯ್ ೧೫, ನಂ. ೬೫, ೭೧, ೨೦೫
೬	ಚಿಕ್ಕಲಗೆ	ಕಲಿದೇವರು	೧೧೫೭	ಎಸ್. ಆಯ್. ಆಯ್. ೨೦. ನಂ. ೧೨೫
೭	ಜಮಖಂಡಿ	ಉತ್ತರೇಶ್ವರ	೧೦೮೨	ಅದೇ ನಂ. ೨೮೭
೮	ಜಮಖಂಡಿ	ಮದುರಖಂಡೇಶ್ವರ		ಅದೇ ನಂ. ೨೧೧
೯	ಕಾಜಿಬೀಳಗಿ	ಈಶ್ವರ	೧೩೦೬	ಅದೇ ನಂ. ೨೨೬
೧೦	ತುಂಗಳ	ಮಲ್ಲಯ್ಯನ ಗುಡಿ	೧೩/೧೪ ಶತಮಾನ	ಅದೇ ನಂ. ೩೬೧
೧೧	ತೊದಲಬಾಗಿ	ಸೋಮನಾಥ	೧೦೨೯	ಅದೇ ೨೧೯
ವೈಷ್ಣವ ದೇವಾಲಯಗಳು				
೧	ತುಂಗಳ	ಚೆನ್ನಕೇಶವ / ಪರಮಾನಂದ		ಎಸ್. ಆಯ್. ಆಯ್. ನಂ. ೧೬೨
೨	ಕಲ್ಹಳ್ಳಿ	ವರಹ ದೇವರು	೧೮೦೮	ಅದೇ, ನಂ. ೪೧೮
೩	ಕಲ್ಹಳ್ಳಿ	ವೆಂಕಟೇಶ್ವರ/ವರಹ	೧೮೦೮	ಅದೇ ನಂ. ೪೧೯
ಜೈನ ಬಸದಿಗಳು (ದೇವಾಲಯಗಳು)				
೧	ಆಲಗೂರ	ಆದಿನಾಥ	೧೪೪೫	ಎಸ್.ಆಯ್.ಆಯ್ ೨೦, ನಂ. ೩೮೨
೨	ತೇರದಾಳ	ಗೊಂಕಜಿನಾಲಯ (ನೇಮಿನಾಥ)	೧೧೨೫	ಕೆ.ಆಯ್. ೫, ಮಂ. ೨೧
೩	ತೇರದಾಳ	ಗೊಂಕ – ಜಿನಾಲಯ	೧೧೮೦	ಅದೇ ಸಂ. ೯೮

ಶಾಸನದಲ್ಲಿ ಉಲ್ಲೇಖಿಸಿರುವ ದೇವಸ್ಥಾನಗಳನ್ನು ಹೊರತುಪಡಿಸಿ ನೋಡುತ್ತಾ ಹೋದಾಗ ಪ್ರತಿಯೊಂದು ಗ್ರಾಮದಲ್ಲೂ ಗರ್ಭಗೃಹದಲ್ಲಿ ಶಿವಲಿಂಗವನ್ನು ಹೊಂದಿರುವ ಹಾಗೂ ಹೊರರಚನೆಯಲ್ಲಿ ವಿಭಿನ್ನ ರೀತಿಯನ್ನು ಹೊಂದಿರುವ ದೇವಾಲಯಗಳನ್ನು ಕಾಣಬಹುದಾಗಿದೆ.

ಜಮಖಂಡಿಯೊಂದರಲ್ಲಿಯೇ ಸುಮಾರು ೨೦ ದೇವಾಲಯಗಳನ್ನು ಗುರುತಿಸಬಹುದು. ಅತೀ ಮುಖ್ಯವಾದವುಗಳೆಂದರೆ, ಜಂಬುಕೇಶ್ವರ, ಮಫೆಪ್ರಭು, ಕಲ್ಮೇಶ್ವರ, ಮೇಲಗಿರಿಲಿಂಗೇಶ್ವರನ ಗುಡಿ, ವಾರಿಸಿದ್ದಪ್ಪನ ಗುಡಿ, ಕಡಪಟ್ಟಿಯ ಬಸವೇಶ್ವರ, ಸುವರ್ಣಖಂಡಿ ಈಶ್ವರ, ಜಗದೀಶ್ವರ ಗುಡಿ, ರಾಮತೀರ್ಥದ ರಾಮೇಶ್ವರ ಗುಡಿ, ಪಾರ್ವತಿ ಗುಡಿ, ದತ್ತಮಂದಿರ, ತ್ರಿಪುರ ಸುಂದರಿ, ಗಣಪತಿ ಗುಡಿ,

ವಿಠ್ಠಲ ಮಂದಿರ, ಯೋಗ ನಾರಾಯಣ ಗುಡಿ, ಕಾಳಿಕಾಂಬ ಗುಡಿ, ಜದಗದೆಲ್ಲಮ್ಮನ ಮಂದಿರ, ಹನುಮಾನ ದೇವಾಲಯ ಮುಂತಾದವುಗಳು ನಿತ್ಯ ಪೂಜಾರ್ಹ ಹಾಗೂ ಶ್ರಾವಣ ಮಾಸದಲ್ಲಿ ವಿಶೇಷ ಸಂಭ್ರಮದಿಂದ ಪೂಜೆಗಳನ್ನು ಕಂಡುಕೊಳ್ಳುವ ದೇವಾಲಯಗಳಾಗಿವೆ.

ಜಮಖಂಡಿ ತಾಲೂಕಿನ ಪ್ರತಿಗ್ರಾಮದಲ್ಲಂತೂ ದೇವಾಲಯಗಳ ವಿಚಾರವನ್ನು ಅಲ್ಲಗಳೆಯುವಂತಿಲ್ಲ. ತೇರದಾಳದ ಗೊಂಕ – ಜಿನಾಲಯ ಬೋಗಾರ ಬಸದಿ, ಅಲ್ಲಮ ಪ್ರಭು ಗದ್ದುಗೆ, ಬನಹಟ್ಟಿಯ ಕಾಡ ಸಿದ್ದೇಶ್ವರ ದೇವಾಲಯ, ಚಿಮ್ಮಡದಲ್ಲಿನ ಅಲ್ಲಮಪ್ರಭು ಗದ್ದುಗೆ, ಕಂಕನವಾಡಿ ನಡುಗಡ್ಡೆಯ ಗುಹೇಶ್ವರ, ಮುತ್ತೂರಿನ ಮಹಾಲಕ್ಷ್ಮೀ ದೇವಾಲಯ, ಕೊಣ್ಣೂರಿನ ಕರಿಸಿದ್ದ ದೇವಾಲಯ ಹುಲ್ಯಾಳದ ಸಿದ್ದೇಶ್ವರ, ಹಳಿಂಗಳಿಯ ರಾಮೇಶ್ವರ ದೇವಾಲಯ ಮತ್ತು ಜೈನ ಬಸದಿಗಳು ಆಲಗೂರ ಸನಾಳದ ಬಸದಿಗಳು, ಖಾಜಿಬೀಳಗಿಯ ಕಾಶಿಲಿಂಗನ ಗುಡಿ, ಚಿಕ್ಕ ಪಡಸಲಗಿಯ ಕೃಷ್ಣಾ ನದಿ ತಟಾಕದಲ್ಲಿರುವ ರಾಮಲಿಂಗ ದೇವಾಲಯ, ಕವಟಗಿಯ ಕಲ್ಮೇಶ್ವರ ದೇವಾಲಯ, ಚಿಕ್ಕ ಜಂಬಗಿಯ ಕಲ್ಮೇಶ್ವರ ದೇವಾಲಯ, ಬಿದರಿಯ ಕುಮಾರೇಶ್ವರ ದೇವಾಲಯ, ತುಬಚಿಯ ಶಿವಲಿಂಗೇಶ್ವರ ದೇವಾಲಯ, ತುಂಗಳದ ಮಲ್ಲಯ್ಯನ ಗುಡಿ, ಸಾವಳಗಿಯ ಸೋಮನಾಥೇಶ್ವರ ದೇವಾಲಯ, ಕಲಬೀಳಗಿಯ ಹನುಮಂತ ದೇವಾಲಯ ಮುಂತಾದವುಗಳು ಜಮಖಂಡಿ ತಾಲೂಕಿನ ಧಾರ್ಮಿಕ ಪ್ರಜ್ಞೆಯನ್ನು ದೇವರುಗಳ ಆಸ್ಥಿತ್ವನ್ನು ಸಾರುತ್ತವೆ.

ಅಡಿ ಟಿಪ್ಪಣಿಗಳು

೧. ತಿಪ್ಪೇರುದ್ರಸ್ವಾಮಿ ಎಚ್. ಕರ್ನಾಟಕ - ಸಂಸ್ಕೃತಿ - ಸಮೀಕ್ಷೆ, ಪುಟ ಸಂ.– ೫೨೪

೨. ರಾಮ ಚಂದ್ರರಾವ ಎಸ್, ಕೆ. ಭಾರತದ ದೇವಾಲಯಗಳ ನೆಲೆ ಹಿನ್ನಲೆ. ಪು ಸಂ ೨–೪

೩. ಹೆಗಡೆ ರಾಜಾರಾಮ . ಲೌಕಿಕ – ಅಲೌಕಿಕ ಪುಟ ಸಂ – ೧೩೭

೪. ತಿಪ್ಪೇರುದ್ರ ಸ್ವಾಮಿ, ಎಚ್, ಪೂರ್ವೋಕ್ತಿ. ಪು. ಸಂ. – ೫೨೫

೫. ಗೋಪಾಲರಾವ ಎಸ್.ಎಸ್. ಶಾಸನಗಳ ಹಿನ್ನಲೆಯಲ್ಲಿ ಕಲ್ಯಾಣ ಚಾಲುಕ್ಯರ ದೇವಾಲಯಗಳು ಪು.ಸಂ. – ೩

೬. ಆಚಾರ್ಯ ಪಿ.ಕೆ. ಆರ್ಕಿಟೆಕ್ಚರ್ ಆಫ್ ಮಾನಸಾರ ಪು.ಸಂ. ೧೧೦.

೭. ಪಾಲಾಕ್ಷ – ಸಮಗ್ರ ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ. ಪು. ಸಂ. – ೧೯

೮. ಪಾಲಾಕ್ಷ – ಸಮಗ್ರ ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ ಪು. ಸಂ. – ೮೯.

೯. ಕೆ. ಚನ್ನಬಸಪ್ಪ, ಜಮಖಂಡಿ ತಾಲೂಕಿನ ಶಾಸನಗಳು ಒಂದು ಸಾಂಸ್ಕೃತಿಕ ಅಧ್ಯಯನ.

೧೦. ಡಾಕಿ. ಎಂ. ಎ. ಪೂರ್ವೋಕ್ತಿ. ಪು. ಸಂ. ೨೨.

೧೧. ಡಾಕಿ. ಎಂ. ಎ. ಪೂರ್ವೋಕ್ತಿ. ಪು. ಸಂ. ೨೩

೧೨. ಡಾಕಿ. ಎಂ. ಎ. ಪೂರ್ವೋಕ್ತಿ. ಪು. ಸಂ. ೨೪

ಅಧ್ಯಾಯ - ನಾಲ್ಕು

ಸಾಮಾಜಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ ದೇವಾಲಯಗಳ ಪಾತ್ರ

ಭಾರತೀಯ ಸಂಸ್ಕೃತಿ ಗ್ರಾಮೀಣ ಸಂಸ್ಕೃತಿ. ಭಾರತ ಗ್ರಾಮಗಳ ನಾಡು, ಅಂತೆಯೇ ಕರ್ನಾಟಕವು ಕೂಡಾ ಗ್ರಾಮಗಳ ರಾಜ್ಯ, ಗ್ರಾಮೀಣ ಸಂಸ್ಕೃತಿಯೇ ಇಲ್ಲಿ ಪ್ರಧಾನವಾಗಿದೆ. ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಸಂಸ್ಕೃತಿಗೆ ನಗರ ಸಂಸ್ಕೃತಿಯ ಪ್ರಭಾವ ಬೀರುತ್ತಾ ಬಂದಿದೆ. ಆದರೂ ಮೂಲ ಸ್ವರೂಪದಲ್ಲಿ ಬದಲಾವಣೆಗಳನ್ನು ಕಾಣುವದಿಲ್ಲ. ಇಂದು ಊರಿಗೊಂದು ಕಾಡು ಅಥವಾ ವನ ಇರಬಹುದು ಅಥವಾ ಇಲ್ಲದಿರಬಹುದು. ಆದರೆ ಊರಿಗೆ ಒಂದು ಗುಡಿ ಅಥವಾ ದೇವಾಲಯ ಇದ್ದೇ ಇರುತ್ತದೆ. ಧರ್ಮ, ದೇವರು, ದೇವಾಲಯ ಇವು ಗ್ರಾಮೀಣ ಸಂಸ್ಕೃತಿಯ ಮೂಲ ತಳಹದಿಗಳಾಗಿವೆ. ಮಾನವ ಮಾಡಿದ ಪುಣ್ಯ ಕರ್ಮದ ಫಲದಿಂದ ಇಹ ಲೋಕದ ಜೀವನ ಮುಗಿಸಿದ ನಂತರ ಮತ್ತೊಂದು ಲೋಕಕ್ಕೆ ಹೋಗುತ್ತಾನೆಂಬ ನಂಬಿಕೆ ಬಲವಾಗಿದೆ. ಇದನ್ನೆ ಕೆಲವರು ಸ್ವರ್ಗ ಮತ್ತು ನರಕ ಎಂದು ಕರೆದಿದ್ದಾರೆ. ಸ್ವರ್ಗದ ಹಾದಿ ಹಿಡಿಯಬೇಕೆಂದರೆ ಜನನ ಮರಣ ಚಕ್ರದ ಮಧ್ಯ ಸಿಕ್ಕು ಪರಿಭ್ರಮಣೆಗೊಳ್ಳುತ್ತಿರುವ ಸಂದರ್ಭದಲ್ಲಿ ಮೋಕ್ಷದ ಹಾದಿ ನೆನಪಾಗುತ್ತದೆ. ಆಗಲೆ ಮಾನವನಿಗೆ ಧರ್ಮ, ದೇವರು, ದೇವಾಲಯಗಳು ನೆನಪಾಗುತ್ತವೆ. ದೇವಾಲಯಗಳೇ ಮಾನವನ ಶಾಂತಿಯ ತಾಣಗಳಾಗಿ ಬಿಡುತ್ತವೆ. ಈ ಪರಿಭ್ರಮಣೆ ಗ್ರಾಮ-ನಗರ ಎಂಬ ಬೇಧಬಾವವಿಲ್ಲದೆ ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗಗಳಾಗಿ ದೇವಾಲಯಗಳು ಉಳಿದುಕೊಂಡಿವೆ, ಮತ್ತು ಹೊಸ ಹೊಸ ಶೈಲಿಯ ದೇವಾಲಯಗಳು ನಿರ್ಮಾಣಗೊಳ್ಳುತ್ತಲಿವೆ. ಇತ್ತೀಚಿನ ದಿನಗಳಲ್ಲಂತೂ ದೇವಾಲಯಗಳನ್ನು ದೇವರ ಮೂರ್ತಿಗಳನ್ನು ನಿರ್ಮಿಸುವದರಲ್ಲಿ ಸ್ಪರ್ಧೆ ಇದೆ ಏನೋ ಎಂದು ಭಾಸವಾಗುತ್ತದೆ. ಇಂದು ಬಹುತೇಕ ನಗರಗಳಲ್ಲಿ ಮೈಸೂರು, ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ಜಮಖಂಡಿಗೆ ಹತ್ತಿರವಿರುವ ವಿಜಾಪೂರದಲ್ಲಿ ದೇವರ ದೊಡ್ಡ ದೊಡ್ಡ ಮೂರ್ತಿಗಳು ಪ್ರತಿಷ್ಠಾಪನೆಗೊಂಡಿರುವುದು. ನಮ್ಮ ಸಂಸ್ಕೃತಿಯಲ್ಲಿ ಬೇರೂರಿದ ಧರ್ಮ, ದೇವರು, ದೇವಾಲಯಗಳ ಪ್ರತೀಕವಾಗಿದೆ. ಮಾನವ ವಿದ್ಯಾವಂತನಾಗಿರಲಿ, ಅವಿದ್ಯಾವಂತನಾಗಿರಲಿ, ಸಾಕ್ಷರನಾಗಿರಲಿ, ನಿರಕ್ಷರಿಯಾಗಿರಲಿ, ಧರ್ಮ ದೇವರು ದೇವಾಲಯಗಳ ವಿಚಾರ ಬಂದಾಗ ಸಮಾನಾಗಿ ಕೈಜೋಡಿಸಿ ನಿಲ್ಲುತ್ತಾನೆ. ಒಂದು ಅರ್ಥದಲ್ಲಿ ನೋಡಿದರೆ ದೇವಾಲಯಗಳು ನಮ್ಮಲ್ಲಿ ಪ್ರಜ್ಞೆ ಮೂಡಿಸುವ ಕೇಂದ್ರಗಳಾಗಿವೆ.

ಇಂದು ಕರ್ನಾಟಕದಲ್ಲಿ ದೇವಾಲಯಗಳಿಲ್ಲದ ಗ್ರಾಮಗಳಿಲ್ಲವೆಂದೇ ಹೇಳಬಹುದು. ವಾಸ್ತುಶಿಲ್ಪದ ಪ್ರಕಾರ ದೇವಾಲಯದ ಭಾಗಗಳನ್ನು ರಚಿಸಿ ಶೈಲಿಗಳನ್ನು ಅನುಸರಿಸಿ ನಿರ್ಮಿಸಿದ ದೇವಾಲಯಗಳು ಇಲ್ಲದಿರಬಹುದು. ಆದರೆ ಪ್ರತಿಯೊಂದು ಗ್ರಾಮದಲ್ಲಿ ಪುರುಷ ದೇವನ ಮತ್ತು ಸ್ತ್ರೀ ದೇವತೆಗಳ ಹೆಸರನ್ನು ಹೆಸರಿಸುವಂತಹ ಸಣ್ಣ ಸಣ್ಣ ಗುಡಿ-ಗೋಪುರಗಳು ಪ್ರತಿಯೊಂದು ಗ್ರಾಮದಲ್ಲಿ ಇದ್ದೇ ಇರುತ್ತವೆ. ಅಂತೆಯೇ ಜಮಖಂಡಿ ನಗರ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಈ ಮೇಲೆ ಹೇಳಿದ ಅಂಶಗಳನ್ನು ಗಮನಿಸಬಹುದು. ನಗರ ಪ್ರದೇಶದಲ್ಲಿ ವಿಸ್ತಾರಗೊಂಡಂತಹ ಬಡಾವಣೆಗಳಲ್ಲಿಯ ನವೀನ

ಶೈಲಿಯ ದೇವಾಲಯಗಳನ್ನು ನಿರ್ಮಿಸಿಕೊಂಡಿರುವದು ಕಂಡುಬರುತ್ತದೆ. ಈ ಎಲ್ಲ ಸಂಗತಿಗಳನ್ನು ಗಮನಿಸಿದಾಗ ಮಾನವ ಸಂಸ್ಕೃತಿಯಲ್ಲಿ ದೇವಾಲಯಗಳ ಪಾತ್ರ ಎಷ್ಟಿರಬಹುದು ಎಂಬ ವಿಚಾರ ಕಲ್ಪನೆಗೆ ನಿಲುಕಲಾರದು ಎಂದೆನಿಸುತ್ತದೆ. ಆದಾಗ್ಯೂ ದೇವಾಲಯಗಳ ಪಾತ್ರವನ್ನು ಬಹಳ ಪ್ರಮುಖವಾಗಿ ನಾವು ಮೂರು ರೀತಿಯಲ್ಲಿ ವಿಶ್ಲೇಷಿಸಿ ನೋಡಲು ಪ್ರಯತ್ನಿಸಿದ್ದೇವೆ. ಅವುಗಳೆಂದರೆ. ೧) ಸಾಮಾಜಿಕ ಕ್ಷೇತ್ರದಲ್ಲಿ ದೇವಾಲಯಗಳ ಪಾತ್ರ. ೨) ಧಾರ್ಮಿಕ ಕ್ಷೇತ್ರದಲ್ಲಿ ದೇವಾಲಯಗಳ ಪಾತ್ರ. ೩) ಶೈಕ್ಷಣಿಕ ಕ್ಷೇತ್ರದಲ್ಲಿ ದೇವಾಲಯಗಳ ಪಾತ್ರ. ಈ ಅಂಶಗಳನ್ನು ಕೆಳಗಿನಂತೆ ವಿವರಿಸಲಾಗಿದೆ.

ಸಾಮಾಜಿಕ ಕ್ಷೇತ್ರದಲ್ಲಿ ದೇವಾಲಯಗಳ ಪಾತ್ರ :

ಮಾನವ ಸಂಸ್ಕೃತಿಯಲ್ಲಿ ಕಂಡು ಬರುವ ಪ್ರಮುಖ ಕ್ಷೇತ್ರ ಸಾಮಾಜಿಕ ಕ್ಷೇತ್ರ. ಸಮಾಜ ವ್ಯಕ್ತಿಗಳ ಸಮೂಹ, ಸಮಾಜದಲ್ಲಿ ಬೇರೆ ಬೇರೆ ವರ್ಣಗಳು, ವರ್ಗಗಳು ಇರುತ್ತವೆ. ಇದು ಪ್ರಾಚೀನ ಕಾಲದಿಂದಲೂ ಇಂದಿನವರೆಗೆ ಅನೂಚಿನವಾಗಿ ಬೆಳೆದು ಬಂದಿದೆ. ಇತ್ತೀಚಿನ ದಿನಗಳಲ್ಲಂತು ಧರ್ಮ-ಜಾತಿ, ಬಣ್ಣಗಳೇ ಪ್ರಾಮುಖ್ಯತೆ ಪಡೆಯುತ್ತಾ ಬರುತ್ತಿವೆ. ಹಿಂದೀ ಧರ್ಮ ಬೌದ್ಧ ಧರ್ಮ, ಕ್ರೈಸ್ತ ಧರ್ಮ, ಸಿಖ್ ಧರ್ಮ, ಜೈನ ಧರ್ಮ ಹೀಗೆ ಹಲವು ಬಗೆಯ ಧರ್ಮಗಳನ್ನು ಗುರುತಿಸಬಹುದಾಗಿದೆ. ಜಮಖಂಡಿ ಪ್ರದೇಶವು ಇದಕ್ಕೆ ಹೊರತಾಗಿಲ್ಲವೆಂದು ಹೇಳಬಹುದು. ಮುಸ್ಲಿಂ ಧರ್ಮದವರು ಮಸೀದಿ ನಿರ್ಮಿಸಿಕೊಳ್ಳುತ್ತಾರೆ. ಸಿಖ್ ಧರ್ಮದವರು ಪ್ರಾರ್ಥನಾ ಮಂದಿರಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಬೌದ್ಧ ಧರ್ಮಿಯರು ಚೈತ್ಯಾಲಯಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಜೈನ ಧರ್ಮಿಯರು ಬಸದಿಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಹಿಂದೂ ಧರ್ಮೀಯರು ದೇವಾಲಯಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಪ್ರಾಚೀನ ರಾಜಮನೆತನದವರ ಕಾಲದಿಂದ ಈ ಮೇಲಿನ ಸಂಗತಿಗಳು ಬೆಳೆದುಕೊಂಡು ಬಂದಿರುವುದು ಸತ್ಯದ ಸಂಗತಿ. ಆದರೆ ಆಧುನಿಕ ಯುಗದಲ್ಲಿ ಹಿಂದು ಧರ್ಮದಲ್ಲಿ ಮಾತ್ರ ದೇವಾಲಯಗಳ ನಿರ್ಮಾಣ ಕಾರ್ಯ ಬೇರೆ ಬೇರೆಯಾಗಿ ಅರ್ಥೈಸಿಕೊಂಡು ಬದಲಾವಣೆಗೊಂಡಿರುತ್ತದೆ. ಗ್ರಾಮಕ್ಕೊಂದರಂತೆ ಹತ್ತು ಹಲವು ಹೆಸರುಗಳ ದೇವಾಲಯಗಳನ್ನು ನಿರ್ಮಿಸುತ್ತ ಹೊರಟಿರುವುದು ಸೋಜಿಗದ ಸಂಗತಿ ಮತ್ತು ವಸ್ತುಸ್ಥಿತಿಯಾಗಿದೆ. ನಮ್ಮ ಪ್ರಾಚೀನ ಪರಂಪರೆಯಲ್ಲಿ ನಿರ್ಮಾಣಗೊಂಡತಹ ದೇವಾಲಯಗಳು ಸಾಮಾಜಿಕವಾಗಿ ಬಹುಮುಖ್ಯ ಪಾತ್ರವಹಿಸುತ್ತವೆ. ದೇವಾಲಯಗಳನ್ನು ನಿರ್ಮಿಸಿದವರು ವಿವಿಧ ಉದ್ದೇಶಗಳನ್ನಿಟ್ಟುಕೊಂಡು ನಿರ್ಮಿಸಿದ್ದಾರೆನೋ ಎಂಬ ಕಲ್ಪನೆ ಮೂಡುತ್ತದೆ. ದೇವಾಲಯದ ನಿರ್ಮಾಣ ಕಾರ್ಯದಲ್ಲಿ ಸಮಾಜಕ್ಕೆ ಪರಿಚಯ ಮಾಡಿಕೊಡುವ ಪ್ರಮುಖ ಅಂಶವೆಂದರೆ ಮೊದಲನೆಯದಾಗಿ ದೇವಾಲಯಗಳನ್ನು ನಿರ್ಮಿಸಿರುವ ಸ್ಥಳ, ಬಹುತೇಕ ದೇವಾಲಯಗಳು ನದಿ ದಂಡೆಯಲ್ಲಿ, ಕೆರೆಗಳ ದಡದಲ್ಲಿ ಅಥವಾ ನೀರಿನ ಶೆಲೆ ಇರುವ ಸ್ಥಳದಲ್ಲಿ, ಸುಂದರ ಪರಿಸರದಲ್ಲಿ ನಿರ್ಮಲವಾದ ವಾತಾವರಣದಲ್ಲಿ ನಿರ್ಮಿಸಿರುವುದನ್ನು ನೋಡಿದರೆ ದೇವಾಲಯಗಳ ನಿರ್ಮಾಣದ ಉದ್ದೇಶ, ಗುರಿಗಳು, ನಮಗೆ ಗೋಚರಿಸುತ್ತವೆ. ವೇದ ಮಂತ್ರಗಳಲ್ಲಿ ಉಲ್ಲೇಖಿಸಿರುವಂತೆ ಈ ಸ್ಥಳಗಳಿಗೆ ಬರುವ ಭಕ್ತರಿಗೆ ನೀರಿನ ಅನುಕೂಲತೆ, ಸುಂದರ ವಾತಾರಣದಲ್ಲಿ ಮನಸ್ಸು ಪ್ರಫುಲ್ಲಗೊಳ್ಳುವಂತೆ ಮಾಡುವ ವಾತಾವರಣ ದೇವಾಲಯಗಳಲ್ಲಿದ್ದು, ಸಮಾಜದ ವ್ಯಕ್ತಿ ವ್ಯಕ್ತಿಗಳ ನಡುವೆ ಎಷ್ಟೇ ಸಂಘರ್ಷವಿದ್ದರು ಆ ವ್ಯಕ್ತಿಗಳು

ದೇವಸ್ಥಾನ ಪ್ರವೇಶಿಸಿದರೆ ಕ್ಷಣಕಾಲವಾದರೂ ಅವರಿಗೆ ಮಾನಸಿಕ ನೆಮ್ಮದಿ ಕೊಡುವ ತಾಣಗಳು ದೇವಾಲಯಗಳಾಗಿವೆ.

ಎರಡನೆಯದಾಗಿ ದೇವಸ್ಥಾನದ ರಚನಾಕಾರ್ಯ ನೋಡಿದಾಗ ವಾಸ್ತುಪ್ರಕಾರವಾಗಿ ಕಟ್ಟಿರುವ ಸಂಗತಿ, ವೈಜ್ಞಾನಿಕ ಸತ್ಯವನ್ನು ಹೇಳುತ್ತದೆ. ದೇವಾಲಯಗಳು ಪೂರ್ವಾಭಿಮುಖವಾಗಿ ಮತ್ತು ಉತ್ತರಾಭಿಮುಖವಾಗಿ ವಾಸ್ತುವನ್ನೇ ಬಳಸಿ ನಿರ್ಮಾಣಗೊಂಡಿವೆ. ಅಂತೆಯೇ ಮಾನವ ಅಂದಿನಿಂದ ಇಂದಿನವರೆಗೂ ಕಟ್ಟಡ ನಿರ್ಮಾಣಗೊಳಿಸುವ ವಾಸ್ತುವನ್ನು ಅನುಸರಿಸುತ್ತಾ ಬಂದಿರುವುದು ಕಂಡುಬರುತ್ತದೆ. ದೇವಾಲಯಗಳ ನಿರ್ಮಾಣಕ್ಕೆ ಅನುಸರಿಸಿದ ತಂತ್ರಜ್ಞಾನ ವಿಜ್ಞಾನದ ವಿಸ್ಮಯ ಲೋಕಕ್ಕೆ ಕೊಂಡೊಯ್ಯುತ್ತದೆ. ಪೂರ್ವಾಭಿಮುಖವಾಗಿ ನಿರ್ಮಾಣಗೊಂಡ ದೇವಾಲಯಗಳಲ್ಲಿ ಸೂರ್ಯೋದಯದ ಕಿರಣಗಳು ನೇರವಾಗಿ ಗರ್ಭಗೃಹದ ಬಾಗಿಲಿಗೆ ಬಂದು ಬೀಳುವಂತೆ ರಚಿಸಿದ ವಿನ್ಯಾಸಗಳು ಸಮಾಜದಲ್ಲಿ ಪ್ರಚಲಿತದಲ್ಲಿರುವ ವಿಜ್ಞಾನಕ್ಕೆ ಮಾದರಿಯಾಗಿವೆ.

ಮೂರನೇಯದಾಗಿ ದೇವಾಲಯಗಳಲ್ಲಿ ಸುಂದರವಾಗಿ ಕೆತ್ತಿರುವ ಕಂಬಗಳು, ಸುಂದರ ಬಿಡಿ ವಿಗ್ರಹಗಳು, ರಾಮಾಯಣ ಮಹಾಭಾರತದ ದೃಶ್ಯಗಳು, ಜಾಲಂದರಗಳು ನಮ್ಮ ಸಾಮಾಜಿಕ ಲಕ್ಷಣಗಳ ಪ್ರತಿರೂಪವನ್ನೇ ಕಣ್ಣೆದುರಿಗೆ ತಂದು ನಿಲ್ಲಿಸುತ್ತವೆ. ದೇವಸ್ಥಾನದ ಶಿಲ್ಪವನ್ನು ಕೆತ್ತಿದ ಶಿಲ್ಪಿ ಅಂದಿನ ಸಮಾಜದಲ್ಲಿ ಇದ್ದಿರಬಹುದಾಂತಹ ನೈಸರ್ಗಿಕ ಸುಂದರ ವಾತಾವರಣವನ್ನು ತಾನು ಕೇಳಿದ ಐತಿಹಾಸಿಕ ಅಭೂತಪೂರ್ವ ಯುದ್ಧದ ವರ್ಣನೆಯನ್ನು, ಪೌರಾಣಿಕ ಕಥಾ ಪ್ರಸಂಗಗಳನ್ನು ಕೆತ್ತಿರುವುದನ್ನು ನೋಡಿದರೆ, ಸಾಮಾಜಿಕ ವ್ಯವಸ್ಥೆಯ ಕಲ್ಪನೆ ನಮಗೆ ಮೂಡಿಬರುತ್ತದೆ. ನೈಸರ್ಗಿಕ ವರ್ಣನೆ ನೋಡಿದರೆ, ನಿಸರ್ಗ ಅವುಗಳ ರಚನೆ, ಅವುಗಳ ಉಪಯುಕ್ತತೆ ಅಂತಹ ವಿಚಾರಗಳು ತಿಳಿದುಬರುತ್ತವೆ. ಯುದ್ಧದ ವರ್ಣನೆ ನೋಡಿದರೆ, ಶಕ್ತಿ ಸಾಮರ್ಥ್ಯಗಳು, ದೇಶಾಭಿಮಾನ ಸಮಾಜದ ಜನರಲ್ಲಿ ಇದ್ದವು ಮತ್ತು ಇದ್ದಿರಬೇಕು ಎನ್ನುವ ಕಲ್ಪನೆ ಮೂಡುತ್ತವೆ. ಚಿತ್ರ ವಿಚಿತ್ರ ಶಿಲ್ಪಗಳನ್ನು ನೋಡಿದರೆ ಶಿಲ್ಪಗಳ ವನಪು-ವೈಯಾರಗಳು, ಹಮ್ಮು-ಬಿಮ್ಮುಗಳು ಉಡುಗೆ -ತೊಡುಗೆಗಳು, ಆಭರಣಗಳು ನೃತ್ಯಮಾಡುವ ಶಿಲ್ಪಗಳು, ವಾದ್ಯನುಡಿಸುವ ಶಿಲ್ಪಗಳು, ನೃತ್ಯಮಾಡುವ ನೃತ್ಯಗಾರ್ತಿಯರು ಇವೆಲ್ಲವುಗಳನ್ನು ನೋಡಿದರೆ ಸಮಾಜದಲ್ಲಿ ಜನರಿಗೆ ಈ ಮೇಲಿನ ಅಂಶಗಳ ಪರಿಚಯ ಅನುಕರಣೆ ಮತ್ತು ವ್ಯಾಮೋಹ ಇತ್ತೆಂಬುದನ್ನು ಸಮಕಾಲಿನ ಸಮಾಜಕ್ಕೆ ಪರಿಚಯಮಾಡಿಕೊಡುತ್ತವೆ. ದೇವಸ್ಥಾನದ ಭಾಗಗಳಲ್ಲಿ ಒಂದಾದ ನವರಂಗ, ಮುಖಮಂಟಪಗಳು ಸಮಾಜದ ಹಲವಾರು ಕಾರ್ಯಗಳಿಗೆ ಉಪಯೋಗವಾಗುತ್ತಿದ್ದವು ಎಂಬುದನ್ನು ಗುರ್ತಿಸಬಹುದಾಗಿದೆ. ದೇವಸ್ಥಾನದಲ್ಲಿ ಪೂಜೆ-ಪುನಸ್ಕಾರ, ಯಜ್ಞ-ಯಾಗಗಳು ನಡೆಯುವುದರ ಜೊತೆಗೆ ನೃತ್ಯ ನಾಟ್ಯಗಳನ್ನು ಏರ್ಪಡಿಸುತ್ತಿದ್ದರು ಎಂಬುದನ್ನು ತಿಳಿಯಬಹುದಾಗಿದೆ. ನೃತ್ಯವನ್ನು ಮಾಡಲಿಕ್ಕೆ ದೇವಾಲಯಗಳಲ್ಲಿ ದೇವದಾಸಿಯರು ಇರುತ್ತಿದ್ದರು ಎಂದು ತಿಳಿದುಬರುತ್ತದೆ. ಇದರಿಂದಾಗಿ ದೇವದಾಸಿ ಪದ್ಧತಿ ಸಮಾಜದಲ್ಲಿ ರೂಢಿಯಲ್ಲಿತ್ತು ಎಂಬುವುದು ಕೂಡಾ ತಿಳಿದುಬರುತ್ತದೆ. ದೇವಸ್ಥಾನದಲ್ಲಿ ರಂಗವೈಭವ, ಅಂಗವೈಭವ ಕಾರ್ಯಗಳು ನಡೆಯುತ್ತಿದ್ದವು ಎಂಬುದು ತಿಳಿದುಬರುತ್ತವೆ.

ದೇವದಾಸಿ ಪದ್ಧತಿಯನ್ನು ಕುರಿತು ಹೇಳುವುದಾದರೆ ವಿಜಯನಗರ ಸಾಮ್ರಾಜ್ಯದಲ್ಲಿ ದೇವದಾಸಿಯರಿಗೆ ಪರವಾನಿಗೆ ಪತ್ರವನ್ನು ನೀಡಿ ಅವರಿಂದ ತೆರಿಗೆ ವಸೂಲಿ ಮಾಡುತ್ತಿದ್ದರು. ತೆರಿಗೆ ವಸೂಲಿಯಿಂದ ಬಂದ ಹಣವನ್ನು ಅರಸರು ತಮ್ಮ ಅಂಗ ರಕ್ಷಣಾ ಪಡೆಯವರಿಗೆ ವೇತನವನ್ನಾಗಿ ಭರಿಸುತ್ತಿದ್ದರು. ಹೀಗೆ ಹತ್ತು ಹಲವು ರೀತಿಯಿಂದ ಸಾಮಾಜಿಕವಾಗಿ ದೇವಾಲಯಗಳ ಪಾತ್ರ ಬಹುಮುಖ್ಯವಾಗಿದೆ.

ಧಾರ್ಮಿಕ ಕ್ಷೇತ್ರದಲ್ಲಿ ದೇವಾಲಯಗಳ ಪಾತ್ರ :

ಸಾಮಾಜಿಕ ಕ್ಷೇತ್ರದಂತೆ ಧಾರ್ಮಿಕ ಕ್ಷೇತ್ರದಲ್ಲಿಯೂ ದೇವಾಲಯಗಳ ಪಾತ್ರ ಮಹತ್ವದ್ದಾಗಿದೆ. ಮಾನವನ ದಿನನಿತ್ಯದ ಬದುಕಿನಲ್ಲಿ ಹತ್ತು ಹಲವಾರು ಹಬ್ಬ ಹರಿದಿನಗಳನ್ನು ಆಚರಿಸುತ್ತಾ ಬರುವುದನ್ನು ಕಾಣುತ್ತೇವೆ. ಹಬ್ಬ ಹರಿದಿನಗಳ ಹೆಸರಿನಲ್ಲಿ ಜನರು ತಮ್ಮ ಊರಿನ ದೇವರ ಹೆಸರಿನ ದೇವಾಲಯಗಳಿಗೆ ಹೋಗುವ ಪದ್ಧತಿ ನಮ್ಮ ಸಂಸ್ಕೃತಿಯಲ್ಲಿದೆ. ಅಂತೆಯೇ ಜಮಖಂಡಿ ತಾಲೂಕಿನ ಪ್ರದೇಶಗಳಲ್ಲಿ ಇರುವ ದೇವಾಲಯಗಳು ಈ ಅಂಶಗಳಿಂದ ಹೊರತಾಗಿಲ್ಲವೆಂದು ಹೇಳಬಹುದು. ಉದಾಹರಣೆಗೆ ಜಮಖಂಡಿ ತಾಲೂಕಿನ ಪ್ರಮುಖ ದೇವಾಲಯಗಳಾದ ಜಂಬುಕೇಶ್ವರ ದೇವಾಲಯ, ನಂದಿಕೇಶ್ವರ ದೇವಾಲಯ, ಕಡಪಟ್ಟಿಯ ಸುವರ್ಣಖಂಡಿಯ ಈಶ್ವರ ದೇವಾಲಯ (ಬಸವೇಶ್ವರ ದೇವಾಲಯ) ಕಲ್ಲಳ್ಳಿ ವೆಂಕಟೇಶ್ವರ ದೇವಾಲಯ, ಕೊಣ್ಣೂರಿನ ಕರಿಸಿದ್ದೇಶ್ವರ ದೇವಾಲಯ, ರಾಮತೀರ್ಥದ ರಾಮೇಶ್ವರ ದೇವಾಲಯ, ಶೂರ್ಪಾಲಿಯ ಲಕ್ಷ್ಮೀ ನರಸಿಂಹ ದೇವಾಲಯ ಹೀಗೆ ಮೊದಲಾದ ದೇವಾಲಯಗಳು ಅಲ್ಲದೆ ಜಮಖಂಡಿ ನಗರದ ಬಸದಿ, ತೇರದಾಳದ ಗೊಂಕ- ಜಿನಾಲಯ, ಹಳಿಂಗಳಿ ಬಸದಿ, ತಮದಡ್ಡಿ ಬಸದಿ, ಆಲಗೂರಿನ ಬಸದಿ ಮತ್ತು ಮಸೀದಿ ಮಂದಿರಗಳು ಸಾಂಸ್ಕೃತಿಕ ನೆಲೆಯಲ್ಲಿ ಕಂಡುಬರುವ ಧಾರ್ಮಿಕ ಆಚರಣೆಗಳಿಗೆ ಕೇಂದ್ರ ಸ್ಥಾನಗಳಾಗಿ ನಿಂತಿರುವುದು ಕಂಡುಬರುತ್ತದೆ. ಸೂರ್ಯಗ್ರಹಣಕ್ಕೂ, ಚಂದ್ರಗ್ರಹಣಕ್ಕೂ ವೈಜ್ಞಾನಿಕ ಸತ್ಯ ಸಂಗತಿಗಳು ಗೊತ್ತಿದ್ದೂ ಅವರುಗಳನ್ನು ದೇವರುಗಳೆಂದು ಧರ್ಮದ ಚೌಕಟ್ಟಿನಲ್ಲಿರಿಸಿ ಸೂರ್ಯಗ್ರಹಣ ಮತ್ತು ಚಂದ್ರಗ್ರಹಣದ ದಿನದಂದು ಮೋಕ್ಷ ಕಾಲದ ನಂತರ ಸ್ನಾನ ಮಾಡಿ ದೇವಾಲಯಕ್ಕೆ ಹೋಗಿಬರುವುದನ್ನು ನೋಡಿದರೆ, ನಮ್ಮ ಸಂಸ್ಕೃತಿಯ ಧಾರ್ಮಿಕ ತಳಹದಿಯ ನೆಲೆಗಟ್ಟು ಮತ್ತು ಧಾರ್ಮಿಕ ಆಚರಣೆಯಲ್ಲಿ ದೇವಾಲಯಗಳ ಪಾತ್ರ ಎಷ್ಟಿದೆ ಎಂಬುದನ್ನು ನಾವು ಊಹಿಸಿಕೊಳ್ಳಬಹುದು. ಹಿಂದಿನಂತೆ ಬೆಳೆದು ಬಂದ ಪರಂಪರೆಯಂತೆ ಆಳ್ವಿಕೆ ಮತ್ತು ಆಳ್ವಿಕೆ ನಡೆಸುವ ರಾಜರಾಗಲಿ, ಗ್ರಾಮ ಮುಖಂಡರಾಗಲಿ, ಕುಟುಂಬದ ಯಜಮಾನರಾಗಲಿ ಸತ್ಯದ ಸಂಗತಿಯನ್ನು ಒರೆಗಲ್ಲಿಗೆ ಹಚ್ಚುವ ಸಂದರ್ಭದಲ್ಲಿ ನ್ಯಾಯ ಅನ್ಯಾಯಗಳ ಪರಿಶೀಲನೆ ಮಾಡುವ ವಿಚಾರದಲ್ಲಿ ಸತ್ಯಸಂಗತಿಗಳನ್ನು ಬಯಲಿಗೆ ಎಳೆಯಲು ಜನರನ್ನು ದೇವರ ಹೆಸರಿನಲ್ಲಿ ಪ್ರಮಾಣವಚನ ಮಾಡಿಸಿಕೊಳ್ಳುವುದಕ್ಕಾಗಿ ದೇವಾಲಯಗಳನ್ನೇ ಅವಲಂಬಿಸಿರುತ್ತಿದ್ದರು ಎಂದು ತಿಳಿದುಬರುತ್ತದೆ. ನಮ್ಮ ಸಂಸ್ಕೃತಿಯ ಪರಂಪರೆಯಲ್ಲಿ ವ್ಯಕ್ತಿ ಹುಟ್ಟಿನಿಂದ ಸಾವಿನವರೆಗೆ ೧೬ ಸಂಸ್ಕಾರಗಳನ್ನು ವಿವಿಧ ರೀತಿಯಲ್ಲಿ ಆಚರಿಸುತ್ತಾ ಬರುವುದನ್ನು ಕಾಣುತ್ತೇವೆ. ಪ್ರತಿಯೊಂದು ಸಂಸ್ಕಾರವನ್ನು ಆಚರಿಸುವಾಗ ದೇವರುಗಳ ಹೆಸರಿನಲ್ಲಿ ನೈವೇದ್ಯ ಮಾಡಿ, ನೈವೇದ್ಯವನ್ನು ದೇವಸ್ಥಾನಕ್ಕೆ ಕೊಡುವವರೆಗೆ ಸಾರ್ವಜನಿಕ ಸಹಭೋಜನವಾಗುವದಿಲ್ಲ. ಇನ್ನೂ ಕೆಲವು ಸಂಸ್ಕಾರಗಳನ್ನು ಉದಾ : ಕೇಶಮುಂಡನ ಮಾಡುವುದು,

ಉಪನಯನ ಸಂಸ್ಕಾರ (ವಿದ್ಯಾಭ್ಯಾಸ) ಮಾಡುವುದಕ್ಕೆ ದೇವಾಲಯಗಳೇ ಕೇಂದ್ರಸ್ಥಾನಗಳಾಗಿವೆ. ಇಂದು ಗ್ರಾಮೀಣ ಪ್ರದೇಶದಲ್ಲಿ ವ್ಯಕ್ತಿಯ ಕೊನೆಯ ಸಂಸ್ಕಾರವಾದ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡ ಜನರು ಸಂಸ್ಕಾರ ಮುಗಿದ ನಂತರ ಸ್ನಾನ ಮಾಡಿ ಕಡ್ಡಾಯವಾಗಿ ದೇವಸ್ಥಾನಗಳಿಗೆ ಹೋಗಿಬರುವ ಸಂಗತಿಯನ್ನು ಗಮನಿಸಿದರೆ ನಮ್ಮ ಧಾರ್ಮಿಕ ವ್ಯವಸ್ಥೆಯಲ್ಲಿ ದೇವಾಲಯಗಳ ಪಾತ್ರದ ಅರಿವಾಗುತ್ತದೆ. ದೇವಾಲಯಗಳಿಗೆ ಪ್ರಾಚೀನ ಕಾಲದಿಂದಲೂ ವಿಶೇಷ ಮಹತ್ವವಿದೆಯೆಂದು ಈಗಾಗಲೇ ಉಲ್ಲೇಖಿಸಿದ್ದೇವೆ. ಈಗಲೂ ಕೂಡ ವಿಶೇಷ ಆಚರಣೆಗಳನ್ನು ಆಚರಿಸುವುದನ್ನು ಕಾಣಬಹುದು. ಉದಾ : ಬಲಿ ಕೊಡುವ ಪದ್ಧತಿ, ಅಗ್ನಿ ಕುಂಡ ಹಾಯುವ ಪದ್ಧತಿ, ಯಜ್ಞಕುಂಡ ನಿರ್ಮಿಸಿ ಯಜ್ಞವನ್ನು ಆಚರಿಸುವ ಪದ್ಧತಿಗಳನ್ನು ಆಚರಣೆಯ ರೂಪದಲ್ಲಿ ಆಚರಿಸುತ್ತಾ ಬರುವುದು ಸತ್ಯಸಂಗತಿಯಾಗಿದೆ. ಜಾತ್ರೆ, ಉತ್ಸವ, ಮೆರವಣಿಗೆ, ರಥೋತ್ಸವ, ಓಕಳಿ, ಬಣ್ಣದೋಕಳಿ, ಕಡುಬಿನ ಕಾಳಗ ಮುಂತಾದವುಗಳನ್ನು ಆಚರಿಸುವುದು, ಈ ರೀತಿ ಎಲ್ಲ ಧಾರ್ಮಿಕ ಕಾರ್ಯಾಚರಣೆಗಳು ದೇವಾಲಯಗಳ ಮುಂಭಾಗದಲ್ಲಿ ಅಥವಾ ಆವರಣದಲ್ಲಿ ಆಚರಿಸಲ್ಪಡುತ್ತವೆ.

ವಿಶೇಷವಾಗಿ ಜಮಖಂಡಿಯಲ್ಲಿ ಬರುವಂತಹ ರಾಮತೀರ್ಥ ದೇವಾಲಯ ಪ್ರತಿ ವರ್ಷ ಶ್ರಾವಣ ಮಾಸದ ಬೆಳಗಿನ ಜಾವದಿಂದ ಹಿಡಿದು ಸಾಯಂಕಾಲದ ವರೆಗೆ ಸಾವಿರಾರು ಜನ ಭಕ್ತರು ದರ್ಶನ ಪಡೆದು ಬರುತ್ತಾರೆ. ಆ ಶ್ರಾವಣ ಮಾಸದಂದು ನಿಸರ್ಗ ದೇವತೆಯನ್ನು ಪೂಜಿಸಿದಂತೆ ರಾಮತೀರ್ಥದ ರಾಮೇಶ್ವರನನ್ನು ಪೂಜಿಸುತ್ತಾ ಬಂದಿರುವುದು ನಮ್ಮ ಸಂಸ್ಕೃತಿಯ ಧರ್ಮದ ಪರಂಪರೆಯಲ್ಲಿ ದೇವಸ್ಥಾನದ ಮಹತ್ವದ ಪಾತ್ರವನ್ನು ಕಾಣಬಹುದು. ಅದರಂತೆಯೇ ಜಮಖಂಡಿಯ ಪಕ್ಕದ ಗ್ರಾಮ ಕಡಪಟ್ಟಿಯ ಸುವರ್ಣಖಂಡಿ ಈಶ್ವರ ದೇವಾಲಯ ಕೂಡಾ ವರ್ಷದುದ್ದಕ್ಕೂ ಜನರ ಬದುಕಿನ ಅವಿಭಾಜ್ಯ ಅಂಗವಾಗಿ ಗುರುತಿಸಿಕೊಂಡು ಬಂದಿದೆ. ಅನೇಕ ಧಾರ್ಮಿಕ ಕಾರ್ಯಾಚರಣೆಗಳು ವಿಶೇಷವಾಗಿ ವಿವಾಹದ ಸಂದರ್ಭಗಳು ಅನುಭವ ಮಂಟಪವನ್ನು ನೆನಪಿಗೆ ತರುವಂತಹ ಧರ್ಮಚಿಂತನೆಗಳು, ಗೋಷ್ಠಿಗಳು, ನಡೆಯುತ್ತಲೇ ಇರುತ್ತವೆ. ಇಲ್ಲಿ ಭಾದ್ರಪದ ಅಮವಾಸ್ಯೆಯ ಮರುದಿನ ಜಾತ್ರೆ ಉತ್ಸವವನ್ನು ನಾಲ್ಕು ದಿನ ಆಚರಿಸುತ್ತಾ ಬರುತ್ತಾರೆ. ಇವೆಲ್ಲವು ಘಟನೆಗಳಿಗೆ ದೇವಸ್ಥಾನವೇ ಕೇಂದ್ರವೆಂದು ಗುರುತಿಸಿದಾಗ ದೇವಸ್ಥಾನದ ಮಹತ್ವ ತಿಳಿದುಬರುತ್ತದೆ.

ಇದೇ ರೀತಿ ಜೈನರು ನೊಂಪಿ ಹಬ್ಬವನ್ನು ಆಚರಿಸಿ ಅಂದು ಜಿನಾಲಯದಲ್ಲಿ ವಿಶೇಷ ಪೂಜೆ ಪುನಸ್ಕಾರಗಳನ್ನು ಮಾಡುತ್ತಾರೆ. ಪ್ರತಿ ವರ್ಷ ನೂಲು ಹುಣ್ಣಿಮೆಯ ದಿನ ಹೊಸ ನೂಲು ಧರಿಸುತ್ತಾರೆ. ಅದೇ ರೀತಿ ಶುಭ ಶುಕ್ರವಾರ ಕ್ರೈಸ್ತರು, ಮುಸ್ಲಿಂರು ತಮ್ಮ ತಮ್ಮ ಚರ್ಚುಗಳಿಗೆ, ಮಸೀದಿಗಳಿಗೆ ಹೋಗುತ್ತಾರೆ.

ಶೈಕ್ಷಣಿಕ ಕ್ಷೇತ್ರದಲ್ಲಿ ದೇವಾಲಯಗಳ ಪಾತ್ರ :

ಪ್ರಾಚೀನ ಕರ್ನಾಟಕದಲ್ಲಿ ಹಲವು ದೇವಸ್ಥಾನಗಳಲ್ಲಿ ಶಿಕ್ಷಣ ಕೊಡುವುದಕ್ಕೆ ಏರ್ಪಾಟವಿಟ್ಟು, ದೇವಸ್ಥಾನಗಳಲ್ಲಿ ಬಾಲ ಶಿಕ್ಷಣ, ಪ್ರೌಢಶಿಕ್ಷಣಗಳಿಗೆ ಅವಕಾಶವಿತ್ತು, ಕರ್ನಾಟಕದ ತುಂಬ ಇರುವ ದೇವಾಲಯಗಳು ಒಂದಲ್ಲ ಒಂದು ರೀತಿಯಲ್ಲಿ ಶೈಕ್ಷಣಿಕ ಕೇಂದ್ರಗಳಾಗಿದ್ದವು ಎಂದು ಹೇಳಬಹುದು.

ಏಕೆಂದರೆ ಶಾಸನಗಳೇ ಉಲ್ಲೇಖಿಸಿರುವಂತೆ "ಯಾತ್ರಾ ಸ್ಥಳಗಳಿಗೆ ಹೋಗಿ ಯಜ್ಞ-ಯಾಗಾದಿ ಮಾಡಿ ಬರುವ ಪುಣ್ಯಕ್ಕಿಂತ ವಿದ್ಯಾದಾನದಿಂದ ಬರುವ ಪುಣ್ಯವು ಕೋಟಿ ಪಟ್ಟು ಹೆಚ್ಚಾಗಿರುತ್ತದೆ." ಎಂದು ಪುರಾಣಗಳು ಕೂಡಾ ಭೂದಾನ, ವಿದ್ಯಾದಾನ ಮತ್ತು ಪುಸ್ತಕ ದಾನಗಳು ಪುಣ್ಯವನ್ನು ತರುತ್ತವೆ. ವೇದ, ಸಂಗೀತ, ನೃತ್ಯಗಳ ಉಪಾಧ್ಯಾಯರು ಸ್ವರ್ಗಕ್ಕೆ ಹೋಗುತ್ತಾರೆಂದು ಪುರಾಣಗಳೇ ಉಲ್ಲೇಖಿಸುತ್ತವೆ. ಅಂತಹ ಬಾವನೆಗಳು ಜನರಿಗೆ ಆಕರ್ಷಕವಾಗಿ ವಿದ್ಯಾಸಂಸ್ಥೆಗಳಿಗೆ ಪ್ರಾಶಸ್ತ್ಯ ಸಿಕ್ಕಿರುವುದು ಕಂಡುಬರುತ್ತದೆ.

ತಪೋವನ, ಘಟಿಕಾಸ್ಥಾನ, ಅಗ್ರಹಾರ, ಮಠ ಮತ್ತು ದೇವಸ್ಥಾನಗಳು ಉಚ್ಚ ಶಿಕ್ಷಣ ಸಂಸ್ಥೆಗಳಾಗಿದ್ದವು. ತಪೋವನಗಳು ಋಷಿಮುನಿಗಳ ಕಾಲದಲ್ಲಿ ಕಂಡುಬಂದರೆ ಘಟಿಕಾಸ್ಥಾನಗಳು, ಬ್ರಹ್ಮಪುರಿಗಳು, ಅಗ್ರಹಾರಗಳು, ಮಠಗಳು ರಾಜಮನೆತನದವರ ಕಾಲದಲ್ಲಿ ಇದ್ದವು ಎಂಬುದನ್ನು ಗಮನಿಸಬಹುದಾಗಿದೆ. ಉಚ್ಛ ಶಿಕ್ಷಣ ಸಂಸ್ಥೆಗಳಲ್ಲಿ ಘಟಿಕಾಸ್ಥಾನ ಅತ್ಯಂತ ಪ್ರಾಚೀನವಾದದ್ದೆಂದು ಹೇಳಬಹುದು. ಘಟಿಕಾಸ್ಥಾನಗಳ ಸ್ವರೂಪದ ಬಗ್ಗೆ ಅನೇಕ ವಾದ-ವಿವಾದಗಳಿದ್ದಾಗಿಯೂ ಕೆಲವು ಬಾರಿ ಇದನ್ನು ಸಭಾಗೃಹ ಎಂದು ಕರೆದಿದ್ದಾರೆ. ಇನ್ನು ಕೆಲವು ಬಾರಿ ಕೆಲವರು ದೇವಸ್ಥಾನವೆಂದು ಕರೆದಿದ್ದಾರೆ. ಇನ್ನು ಕೆಲವರು ಬ್ರಹ್ಮಪುರಿಗೆ ಹೋಲಿಸಿದ್ದಾರೆ. ಇಂತಹ ಬೇರೆ ಬೇರೆ ಅಭಿಪ್ರಾಯವಿರುವುದು ಸಹಜವಾದುದಾಗಿದೆ. ಅದರಲ್ಲಿ ಒಂದು ಸಣ್ಣ ಸಭಾಗೃಹವಿರುತ್ತಿತ್ತು, ಅದು ಬಂದು ದೇವಸ್ಥಾನಕ್ಕೆ ಹೊಂದಿಕೊಂಡಂತಿರುತ್ತಿತ್ತು. ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಉಚ್ಚ ಶಿಕ್ಷಣ ಕೇಂದ್ರವೆಂದರೆ ಕಂಚಿ, ಅದು ಕರ್ನಾಟಕ ಮತ್ತು ಆಂಧ್ರಗಳಿಗೆ ಮಾದರಿಯಾಗಿತ್ತು. ಕರ್ನಾಟಕದಲ್ಲಿ ೪ನೇ ಶತಮಾನದ ನಂತರದಲ್ಲಿ ಈ ಶಿಕ್ಷಣ ಕೇಂದ್ರಗಳನ್ನು ಗುರುತಿಸಬಹುದು. ಕದಂಬರ ಮಯೂರ ವರ್ಮ, ತನ್ನ ಗುರು ವೀರಶರ್ಮ ಹತ್ತಿರ ಗುರುಕುಲ ಶಿಕ್ಷಣ ಪಡೆದು ನಿಖಿಲ ಪ್ರವಚನ (ಎಲ್ಲ ಪವಿತ್ರ ಗ್ರಂಥಗಳ ಅಧ್ಯಯನ) ಅಧ್ಯಯನಕ್ಕಾಗಿ ಅಲ್ಲಿಗೆ ಹೋಗಿದ್ದನು ಎಂದು ಶಾಸನಗಳಿಂದ ತಿಳಿದು ಬರುವುದು. ಇವೆಲ್ಲವುವನ್ನು ನೋಡಿದಾಗ ಘಟಿಕಾ ಸ್ಥಾನದಲ್ಲಿ ವೇಳಾ ಪತ್ರಿಕೆಯಂತೆ ಕೆಲಸ ಕಾರ್ಯಗಳು ನಡೆಯುತ್ತಿದ್ದವು. ಇವುಗಳನ್ನು ನೋಡಲಿಕ್ಕೆ ಮೇಲಾಧಿಕಾರಿಗಳಿದ್ದರು. ಘಟಿಕೆಯಲ್ಲಿ ವಿದ್ಯಾಭ್ಯಾಸ ಮಾಡಿದ ನಂತರ ಪರೀಕ್ಷೆ ನಡೆಯುತ್ತಿತ್ತು. ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಘಟಿಕಾ ಸಾಹಸಿಗರೆಂದು ಬಿರುದು ಇತ್ತು. ಮುಂದೆ ಹೆಸರು ಗಳಿಸಾಹಸ, ಗಳಿಸ ಎಂದು ಆಗಿರಬಹುದು. ಏಕೆಂದರೆ ಮಹಾರಾಷ್ಟ್ರದ ಬ್ರಾಹ್ಮಣರಲ್ಲಿ ಈ ಮನೆತನದ ಅಡ್ಡ ಹೆಸರು ಸಾಮಾನ್ಯವಾಗಿರುತ್ತದೆ. ಜಮಖಂಡಿ ಪ್ರದೇಶ ಬಹು ಹಿಂದಿನಿಂದಲೂ ಮಹಾರಾಷ್ಟ್ರದ ಪ್ರಭಾವಕ್ಕೆ ಒಳಗಾದ ಪ್ರದೇಶ ಈ ಪ್ರದೇಶ ಅಂತಹ ಶಿಕ್ಷಣ ಕೊಡುವ ಪರಂಪರೆ ಬೆಳೆದು ಬಂದಿದೆ. ಅದರಂತೆ ಮಠಗಳು ಕೂಡ ಪ್ರಾಚೀನ ಕರ್ನಾಟಕದಲ್ಲಿ ರಾಜಮಹಾರಾಜರ ಕಾಲದಲ್ಲಿ ವಿಶೇಷವಾಗಿ ಕಲ್ಯಾಣ ಚಾಲುಕ್ಯರ ಕಾಲದ ನಂತರದಲ್ಲಿ ಶೈಕ್ಷಣಿಕ ಕೇಂದ್ರಗಳಾಗಿ ವಿಶೇಷ ಪಾತ್ರವಹಿಸುತ್ತಿದ್ದವು ಎಂದು ಅನೇಕ ನಿದರ್ಶನಗಳಿವೆ. ಅಂತೆಯೇ ಜಮಖಂಡಿಯ ಓಲೆಮಠ, ಮುತ್ತಿನ ಕಂತಿ ಮಠ, ಕಲ್ಯಾಣ ಮಠ, ಹಳಿಂಗಳಿಯ ಕಮರಿ ಮಠ, ಹುಲ್ಯಾಳ, ಚಿಮ್ಮಡ, ಹಿಪ್ಪರಗಿಯಂತಹ ಮೊದಲಾದ ಊರುಗಳಲ್ಲಿನ ಮಠಗಳು ಪ್ರಾಚೀನದಿಂದ ಹಿಡಿದು ಆಧುನಿಕ ಕಾಲದವರೆಗೆ ಶೈಕ್ಷಣಿಕ ಕೇಂದ್ರಗಳಾಗಿದ್ದವು ಎಂಬುದಕ್ಕೆ ನಿದರ್ಶನಗಳಿವೆ. ದೇವಸ್ಥಾನಗಳು ಜನರ ತಿಳುವಳಿಕೆಯನ್ನು ಹೆಚ್ಚಿಸುವ

ಕೇಂದ್ರಗಳಾಗಿದ್ದು ಇಂದು ಜನರ ತಿಳುವಳಿಕೆಯನ್ನು ಹೆಚ್ಚಿಸಲು ಪ್ರಾಯೋಗಿಕ ಶಿಕ್ಷಣವೆಂದು ಕರೆಯಬಹುದಾದ ರಥದ ಓಟದ ಸ್ಪರ್ಧೆ, ಟಗರು ಕಾಳಗ, ಡೊಳ್ಳು ಕುಣಿತ, ಶಹನಾಯಿ ವಾದನ, ತಮಟೆ ವಾದನ, ಕರಡಿ ಮಜಲು, ಕೋಲಾಟ, ಕಹಳೆ ವಾದನ, ಕುಸ್ತಿ, ಪಗಡೆ ಆಟ, ಭಜನೆ, ಕೀರ್ತನೆ, ಭಕ್ತಿಗೀತೆ ಮುಂತಾದಂತಹ ಶೈಕ್ಷಣಿಕ ವಿಚಾರಗಳಿಗೆ ಸಂಬಂಧಪಟ್ಟಂತಹ ಮಾಹಿತಿಗಳನ್ನು ಪ್ರಾಯೋಗಿಕವಾಗಿ ಕಲಿಸಿಕೊಡುವ ಹಾಗೂ ಪ್ರದರ್ಶನಕ್ಕಿಡುವ ಕಾರ್ಯಕ್ರಮಗಳಿಗೆ ದೇವಸ್ಥಾನಗಳೇ ಕೇಂದ್ರಬಿಂದು ಎಂದು ಹೇಳಬಹುದು.

* ಮಾಹಿತಿ ಸಂಗ್ರಹ *

- ಹಿರಿಯ ನಾಗರಿಕರ ಸಂದರ್ಶನ.
- ಮಠಗಳಲ್ಲಿನ ಮಠಾಧೀಶರ ಮೌಖಿಕ ಸಂದರ್ಶನ.
- ಹಿರಿಯ ಉಪನ್ಯಾಸಕರ ವಿಶೇಷ ಉಪನ್ಯಾಸ ಮಾಲೆಯ ಮಾಹಿತಿ ಸಂಗ್ರಹ.
- ಜೈ ಜಮಖಂಡಿ ಪಾಕ್ಷಿಕ ಪತ್ರಿಕೆ.
- ಕರ್ನಾಟಕದ ಸಂಸ್ಕೃತಿ ಮತ್ತು ಸಮೀಕ್ಷೆ – ಡಾ॥ ಎಚ್. ತಿಪ್ಪೆರುದ್ರ ಸ್ವಾಮಿ
- ಪ್ರಾಚೀನ ಕರ್ನಾಟಕದ ಶಿಕ್ಷಣ ಕ್ರಮ – ಡಾ॥ ಜಿ. ಎಸ್. ದಿಕ್ಷಿತ್

ಅಧ್ಯಾಯ – ಐದು

ಕೆಲವು ಮುಖ್ಯ ದೇವಾಲಯಗಳ ವಿಶೇಷ ಅಧ್ಯಯನ

ಜಮಖಂಡಿ ಪ್ರದೇಶದಲ್ಲಿ ಕಲ್ಯಾಣ ಚಾಲುಕ್ಯರ ಹಾಗೂ ನಂತರದ ಕಾಲದಲ್ಲಿ ದೇವಾಲಯಗಳ ರಚನಾಕಾರ್ಯ ಉಚ್ಛ್ರಾಯ ಸ್ಥಿತಿಯನ್ನು ತಲುಪಿತ್ತು ಎಂದು ಹೇಳಬಹುದು. ಏಕೆಂದರೆ ಕಲ್ಯಾಣ ಚಾಲುಕ್ಯರ ಕಾಲದ ಪೂರ್ವದ ಕಾಲದಲ್ಲಿ ನಿರ್ಮಾಣಗೊಂಡಂತಹ ದೇವಾಲಯಗಳು ಕೇವಲ ಶೈವ ದೇವಾಲಯಗಳು ಅದರಲ್ಲಿ ವಿಶೇಷವಾಗಿ ಸಣ್ಣ ಸಣ್ಣ ಗರ್ಭಗುಡಿ ಆಕಾರವನ್ನು ಹೊಂದಿದ ಲಿಂಗ ಸ್ಥಾಪನೆಯಾದ ಲಿಂಗಗಳನ್ನು ಒಳಗೊಂಡ ದೇವಾಲಯವನ್ನು ಕಾಣಬಹುದು. ಕಲ್ಯಾಣಿ ಚಾಲುಕ್ಯರ ಕಾಲದಿಂದ ಹಾಗೂ ನಂತರದಲ್ಲಿ ದೇವಾಲಯಗಳ ವಿನ್ಯಾಸ, ದೇವಾಲಯಗಳ ರಚನಾ ಕಾರ್ಯ ವಿಸ್ತೃತ ರೂಪವನ್ನು ಪಡೆದಿದೆ ಎಂದು ಹೇಳಬಹುದು. ಜಮಖಂಡಿ ಪ್ರದೇಶದಲ್ಲಿ ದೊರೆತಿರುವ ದೇವಾಲಯಗಳು ಶೈವ ದೇವಾಲಯಗಳು, ವೈಷ್ಣವ ದೇವಾಲಯಗಳು, ಜೈನ ಬಸದಿಗಳು ಎಂದು ವಿಂಗಡಿಸಬಹುದು. ಜಮಖಂಡಿ ಪ್ರದೇಶದಲ್ಲಿ ದೊರೆತಿರುವ ಶಾಸನಗಳಲ್ಲಿಯೂ ಕೂಡಾ ಈ ದೇವಾಲಯಗಳ ಉಲ್ಲೇಖವನ್ನು ಕಾಣಬಹುದು.

೧. ಶೈವ ದೇವಾಲಯಗಳು

೨. ವೈಷ್ಣವ ದೇವಾಲಯಗಳು.

೩. ಬಸದಿಗಳು

೧. ಶೈವ ದೇವಾಲಯಗಳು

ಸುವರ್ಣಖಂಡಿ ಈಶ್ವರ ದೇವಾಲಯ – ಕಡಪಟ್ಟಿ (ಬಸವೇಶ್ವರ ದೇವಾಲಯ ಕಡಪಟ್ಟಿ)

ನಿವೇಶನ	:	ಜಮಖಂಡಿ ಪಟ್ಟಣಕ್ಕೆ ಹೊಂದಿರುವ ಗ್ರಾಮ ಕಡಪಟ್ಟಿ
ದಿಕ್ಕು	:	ಉತ್ತಾರಾಭಿಮುಖ
ಅರ್ಪಣೆ	:	ಶಿವ
ಕಾಲ	:	೧೨ನೇ ಶತಮಾನ
ಅಸರು ಮನೆತನ	:	ಕಲ್ಯಾಣ ಚಾಲುಕ್ಯರು

ಜಮಖಂಡಿ ಪಟ್ಟಣಕ್ಕೆ ಹೊಂದಿಕೊಂಡಂತೆ ಜಮಖಂಡಿಯಿಂದ ಬನಹಟ್ಟಿಗೆ ಹೋಗುವ ಮಾರ್ಗದಲ್ಲಿ ಬಲಗಡೆಗೆ ಇರುವ ಗ್ರಾಮ ಕಡಪಟ್ಟಿ. ಇಲ್ಲಿಯ ಸುವರ್ಣಖಂಡಿ ಈಶ್ವರ ದೇವಾಲಯದ ಮಹಾದ್ವಾರ ನವೀಕರಣಗೊಂಡು ಎರಡು ಅಂತಸ್ಥಿನಿಂದ ಎರಡೂ ಮಗ್ಗುಲಿಗೆ ಗೋಡೆಗಳನ್ನೊಳಗೊಂಡಂತೆ ನಿರ್ಮಿಸಲ್ಪಟ್ಟಿದೆ. ಮಹಾದ್ವಾರದೊಳಗೆ ಹೋದಕೂಡಲೆ ವಿಶಾಲವಾದ ಪ್ರಾಂಗಣ, ಒಂದು ಕಡೆ ತಂಗಲು ಶ್ರಮಿಸಲು ಅನುಕೂಲವಾಗುವಂತೆ ನಿರ್ಮಿಸಿರುವ ಅಂಕಣಗಳು. ಇನ್ನೊಂದು ಕಡೆ ಶಿವಶರಣೆ

[illegible]

[illegible]

[illegible]

[illegible]

[illegible]

[illegible]

[illegible]

[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]

[illegible]

ಅಕ್ಕಮಹಾದೇವಿ. ನೀಲಾಂಬಿಕೆ, ಗಂಗಾಂಬಿಕೆ, ಮಂಟಪಗಳು ಇವೆ. ಅನುಭವ ಮಂಟಪದ ಕಲ್ಪನೆಯ ಚಿತ್ರವನ್ನು ಗೋಡೆಯಲ್ಲಿ ಚಿತ್ರಿಸಿದ್ದಾರೆ. ಮಹಾದ್ವಾರದ ಬಳಿ ದೊಡ್ಡ ದ್ವೀಪಸ್ಥಂಬವಿದೆ.

ದೇವಾಲಯದ ದ್ವಾರ ಉತ್ತರಾಭಿಮುಖವಾಗಿದೆ, ಒಳಗಡೆ ವಿಶಾಲವಾದ ನವರಂಗ ಕಂಡುಬರುತ್ತದೆ. ಸಭಾ ಮಂಟಪದ ಕಂಬಗಳ ಹೋಲಿಕೆ ಕಲ್ಯಾಣಿ ಚಾಲುಕ್ಯರ ದೇವಾಲಗಳ ಕಂಬಗಳನ್ನೇ ಹೋಲುತ್ತವೆ. ಸಭಾಮಂಟಪದಲ್ಲಿ ೨೪ ಕಂಬಗಳಿವೆ. ಚೌಕಾಕೃತಿಯಲ್ಲಿರುವ ಈ ಕಂಬಗಳಲ್ಲಿ ಹೆಚ್ಚು ಅಲಂಕಾರಗಳಿಲ್ಲ, ಸಭಾಮಂಟಪದಲ್ಲಿ ಎರಡು ಗೂಡುಗಳಿವೆ. ಒಂದರಲ್ಲಿ ವೀರಭದ್ರ ಮೂರ್ತಿ, ಇನ್ನೊಂದರಲ್ಲಿ ನಾಗಶಿಲ್ಪವಿದೆ. ಸಭಾಮಂಟಪದಲ್ಲಿ ಪೂರ್ವಾಭಿಮುಖವಾಗಿ ಒಂದು ಗರ್ಭಗೃಹವಿದೆ. ಗರ್ಭಗೃಹಲ್ಲಿ ಶಿವಲಿಂಗವಿದೆ. ಗರ್ಭಗೃಹದ ಹೊರಗೆ ಅಂತರಾಳದಲ್ಲಿ ಶಿವಲಿಂಗಕ್ಕೆ ಎದುರಾಗಿ ನಂದಿವಿಗ್ರಹವಿದೆ. ಈ ದೇವಸ್ಥಾನದ ಒಂದು ವೈಶಿಷ್ಟ್ಯವೆಂದರೆ ಪಶ್ಚಿಮಾಭಿಮುಖವಾಗಿರುವ ಮತ್ತೊಂದು ಗರ್ಭಗೃಹದಲ್ಲಿ ಒಂದೇ ಕಲ್ಲಿನಲ್ಲಿ ಕೆತ್ತಿದ ಬೃಹತ್ ಬಸವಣ್ಣನ ಶಿಲ್ಪವಿದೆ. ಗರ್ಭಗೃಹದ ಲಲಾಟಬಿಂಬದಲ್ಲಿ ಶಿಲ್ಪಗಳಿವೆ. ಆದರೆ ಗುರುತಿಸಲು ಸಾಧ್ಯವಾಗುವುದಿಲ್ಲ. ಬಾಗಿಲದ ಎಡಗೋಡೆಯ ದೇವಕೋಷ್ಠಕದಲ್ಲಿ ಸಪ್ತಮಾತ್ರಿಕೆಯರ ಮೂರ್ತಿಗಳಿವೆ. ಈಗ ಅವುಗಳ ಮೇಲೆ ಎಣ್ಣೆ, ಬಣ್ಣ ಹಚ್ಚಿರುವದರಿಂದ ಸ್ಪಷ್ಟವಾಗಿ ಛಾಯಾಚಿತ್ರಗಳು ಬರುವದಿಲ್ಲ. ಎರಡೂ ಗರ್ಭಗೃಹಗಳ ಮೇಲೆ ಶಿಖರಗಳನ್ನು ನಿರ್ಮಿಸಿದ್ದಾರೆ.

ಪ್ರತಿವರ್ಷ ಶ್ರಾವಣ ಮಾಸದಲ್ಲಿ ಪ್ರತಿನಿತ್ಯ ಪೂಜೆಗಾಗಿ ಸಾವಿರಾರು ಭಕ್ತಾಧಿಗಳು ಸಂದರ್ಶಿಸುತ್ತಾರೆ. ಇದಕ್ಕೆ ರೂಢಿಯಲ್ಲಿ "ದೊಡ್ಡ ಬಸವಣ್ಣನ ಗುಡಿ" ಎಂದು ಕರೆಯುತ್ತಾರೆ. ಪ್ರತಿವರ್ಷ ಭಾದ್ರಪದ ಚೌತಿ ಅಮವಾಸೆಯ ಮರುದಿನ ರಥೋತ್ಸವ ಜರುಗುತ್ತದೆ. ದೇವಸ್ಥಾನಕ್ಕೆ ಸುಣ್ಣ - ಬಣ್ಣ ಬಳಿಯುತ್ತಾ ಬಂದಿರುವದರಿಂದ ಪ್ರಾಚೀನ ಅಲಂಕಾರವನ್ನು ಗುರುತಿಸಲಾಗುವದಿಲ್ಲ.[7]

ಕೊಣ್ಣೂರಿನ ದೇವಾಲಯಗಳು :

ಕೊಣ್ಣೂರು ಜಮಖಂಡಿಯಿಂದ ದಕ್ಷಿಣಕ್ಕೆ, ಬೀಳಗಿ ರಸ್ತೆಯಲ್ಲಿ ೧೪ ಕಿ.ಮಿ. ಅಂತರದಲ್ಲಿದೆ. ಸುಮಾರು ೬೦೦೦ ಜನಸಂಖ್ಯೆಯನ್ನು ಹೊಂದಿದೆ. ಈ ಗ್ರಾಮದಲ್ಲಿ ಇತಿಹಾಸವನ್ನು ಸಾರಿಹೇಳುವ ೮ ಶಾಸನಗಳು ದೊರೆತಿವೆ. ಶಾಸನದಲ್ಲಿ ಕೋಣಗನೂರ ಎಂಬ ಹೆಸರಿದೆ. ಈ ಹೆಸರಿಗೆ ಸ್ಥಳೀಕರು ಪೌರಾಣಿಕ ಕಥೆಯನ್ನು ಹೇಳುತ್ತಾರೆ. ಅದೇನೆಂದರೆ, ಕೋಣಾಸುರ ಎಂಬ ದೈತ್ಯನು ಇಲ್ಲಿಯ ಜನರಿಗೆ ಬಹಳ ತೊಂದರೆ ಕೊಡುತ್ತಿದ್ದನು. ಆದ್ದರಿಂದ ಇಲ್ಲಿಯ ಜನತೆ ಶಿವನಿಗೆ ಮೊರೆಹೋದರು. ಜನತೆಯ ಬೇಡಿಕೆಯಂತೆ ಶಿವನು ಸಿದ್ದೇಶ್ವರ ಅವತಾರವೆತ್ತಿ ಕೋಣಾಸುರನನ್ನು ಸಂಹರಿಸಿದ್ದಕ್ಕಾಗಿ ಇದು ಕೋಣನೂರು ಎಂದಾಗಿದೆ. ನಂತರ ಕೊಣ್ಣೂರ ಎಂದಾಗಿದೆ. ಸಿದ್ದೇಶ್ವರ, ಸಿದ್ದೇಶ್ವರನ ಪವಾಡಗಳು ನಿಜವಾಗಿ ನಡೆದದ್ದರಿಂದ ಗ್ರಾಮ್ಯ ಭಾಷೆಯಲ್ಲಿ ಕರೇಸಿದ್ದೇಶ್ವರ ಆಗಿ, ಈಗ ರೂಢಿಯಲ್ಲಿ ಕರಿಸಿದ್ದೇಶ್ವರ ಎಂದು ಕರೆಯಲ್ಪಡುತ್ತಿದೆ. ಎಂಬ ನಂಬಿಕೆ ಇದಕ್ಕೆ ನಿದರ್ಶನ ಕರಿಸಿದ್ದೇಶ್ವರ ಎಂಬ ಗುಡಿ ಸುತ್ತಮುತ್ತಲೂ ಕೊಣ್ಣೂರ ಕರಿಸಿದ್ದ ಎಂಬ ಹೆಸರಿನಿಂದ ಪ್ರಸಿದ್ಧಿಹೊಂದಿದೆ.

[illegible]

ಈ ಗ್ರಾಮದಲ್ಲಿ ಶಾನಗಳಲ್ಲದೆ ಪ್ರಾಚೀನ ದೇವಾಲಯಗಳಾದ ಪರಮಾನಂದ (ಪ್ರಭಾಶೇಶ್ವರ) ಕಲಾಲಿಂಗೇಶ್ವರ, ಮಲ್ಲಿಕಾರ್ಜುನ, ಕರಿಸಿದ್ದೇಶ್ವರ, ಹನುಮಂತ, ಗುಡಿಗಳು, ಮೂರ್ತಿ ಶಿಲ್ಪಗಳು ಕೂಡ ಇಲ್ಲಿ ಕಂಡುಬರುತ್ತವೆ.

ಕರಿಸಿದ್ದ ದೇವಾಲಯ ಕೊಣ್ಣೂರು :

ನಿವೇಶನ	:	ಗ್ರಾಮದಲ್ಲಿ
ದಿಕ್ಕು	:	ಪೂರ್ವಾಭಿಮುಖ
ಅರ್ಪಣೆ	:	ಶಿವ
ಕಾಲ	:	೧೨ನೇ ಶತಮಾನ
ಅರಸು ಮನೆತನ	:	ಕಲ್ಯಾಣಿ ಚಾಲುಕ್ಯರು
ಮಾದರಿ	:	ಆಧುನಿಕ ಶೈಲಿ (ನವೀಕರಣಗೊಂಡದ್ದು)

ಇತ್ತೀಚಿನ ದಿನಗಳಲ್ಲಿಯೇ ಬಹಳ ಪ್ರಸಿದ್ಧಿ ಹೊಂದಿದ ದೇವಾಲಯ, ಈ ದೇವಾಲಯಕ್ಕೆ ಮೊದಲು ಬೀರದೇವರ ಗುಡಿ ಎಂದು ಕರೆಯುತ್ತಿದ್ದರು. ಶಾಸನ[೮]ಗಳಲ್ಲಿಯೂ ಕೂಡ ಬೀರಣ ದೇವರು ಎಂಬ ಉಲ್ಲೇಖ ಕಂಡುಬರುತ್ತದೆ.

ಸ್ಥಳೀಯರ ಅಭಿಪ್ರಾಯದಂತೆ ಮತ್ತೊಂದು ಐತಿಹ್ಯವಿದೆ. "ಒಂದಾನೊಂದು ಕಾಲಕ್ಕೆ ದೇವಾನುದೇವತೆಗಳೆಲ್ಲ ಸೇರಿಕೊಂಡು ಶಿವನಿಗೆ ಪಟ್ಟ ಕಟ್ಟುವ ಕಾಲಕ್ಕೆ ಗುಗ್ಗಳ, ಹೋಮ ಮಾಡುತ್ತಿರಲು ಆ ಹೋಮದಲ್ಲಿ ಗಂಡು ಕೂಸೊಂದು ಉದ್ಭವವಾಯಿತು. ಹೀಗೆ ಉದ್ಭವವಾದ ಕೂಸು ಸಮುದ್ರ ದಂಡೆಯ ಮೇಲೆ ಕುಳಿತುಕೊಂಡು ಸೃಷ್ಠಿಯೊಳಗಿರುವ ಪ್ರಾಣಿಗಳಿಗೆಲ್ಲ ಆಹಾರವನ್ನು ಬೀರುತ್ತಿದ್ದನು. ಈ ಕಾರಣದಿಂದ ಮಗುವಿಗೆ ಬೀರಪ್ಪ ಎಂದು ಹೆಸರು ಪ್ರಾಪ್ತವಾಯಿತು. ಮುಂದೆ ಇದೆ ಬೀರೇಶ್ವರ ಕೋಣಾಸುರನೆಂಬ ದೈತ್ಯನನ್ನು ನಾಶ ಮಾಡಿ, ದೈತ್ಯನ ಹೆಸರಿನ ಮೇಲೆ ಕೋಣನೂರು ಎಂಬ ಗ್ರಾಮವನ್ನು ಸ್ಥಾಪಿಸಿ ಕೊಣ್ಣೂರಿನ ನಿಜಸಿದ್ಧ (ಕರೆಸಿದ್ಧ ಬೀರೇಶ್ವರ) ಎಂಬ ಹೆಸರಿನಿಂದ ಪ್ರಸಿದ್ಧಿ ಹೊಂದಿದನು ಎಂಬ ಐತಿಹ್ಯವಿದೆ. ಇದು ಸ್ಥಳೀಯರ ಬಾಯಲ್ಲಿ ಇಂದಿಗೂ ಉಳಿದುಕೊಂಡು ಬಂದಿದೆ. ಈ ದೇವಾಲಯವು ಪೂರ್ವಾಭಿಮುವಾಗಿ, ಊರಿನ ಪಶ್ಚಿಮಕ್ಕಿದೆ. ಮುಖ್ಯ ದ್ವಾರದ ಮೇಲೆ ಮಹಡಿ ಕಟ್ಟಿಸಿರುವದರಿಂದ ಊರ ಹೊರಗೆ ಬಹುದೂರವರೆಗೆ ಕಾಣಿಸುತ್ತದೆ. ಮುಖ್ಯದ್ವಾರ ಪ್ರಕಾರದಲ್ಲಿರುವ ಕೋಣೆಗಳು ನಂತರದ ನಿರ್ಮಾಣಗೊಂಡಂತವುಗಳು, ಗರ್ಭಗುಡಿ ಹುಟ್ಟಿಕೊಂಡು ಸಾವಿರ ವರ್ಷಗಳಾಗಿರಬಹುದೆಂದು ಸ್ಥಳೀಯರು ಹೇಳುತ್ತಾರೆ.

ಗರ್ಭಗುಡಿಯಲ್ಲಿ ಕುಳಿತ ಭಂಗಿಯಲ್ಲಿರುವ ಕರಿಸಿದ್ದೇಶ್ವರನ ಕಲ್ಲಿನ ಮೂರ್ತಿಯಿದೆ. ಕಾಲ ಕ್ರಮೇಣ ಒಂದೇ ಮೂರ್ತಿ ಬೇಡವೆಂಬ ಹಿನ್ನೆಲೆಯಲ್ಲಿ ಇನ್ನೊಂದು ನಿಂತ ಭಂಗಿಯಲ್ಲಿರುವ ಮೂರ್ತಿಯನ್ನು ನಿಲ್ಲಿಸಲಾಗಿದೆ. ಮುಂಚೆ ಕುಳಿತ ಭಂಗಿಯ ಮೂರ್ತಿಗೆ 'ಕುಂತಿರಪ್ಪ' ಎಂದು, ನಿಂತಿರುವ ಮೂರ್ತಿಗೆ 'ನಿಂತಿರಪ್ಪ' ಎಂದು ಕರೆಯುತ್ತಾರೆ. ದೇವಸ್ಥಾನದ ಪ್ರಭಾವ ಹೆಚ್ಚಾದಂತೆ ಈ ಮೂರ್ತಿಗಳನ್ನು

[illegible]

ಮರೆಮಾಡಿ ಮುಂದೆ ಬೆಳ್ಳಿಯ ದೇವರ ಮುಖಗಳನ್ನು ಇಡುವುದು ಪ್ರಾರಂಭವಾಗಿದೆ. ಇದರಿಂದಾಗಿ ಈಗಿನ ಭಕ್ತರುಗಳಿಗೆ ಮೂರ್ತಿಗಳ ದರ್ಶನವಾಗುವುದಿಲ್ಲ.

ಗುಡಿಯ ಪ್ರಾಂಗಣದಲ್ಲಿ ಕೋಣಾಸುರನ ವಧೆಯ ಸಂಕೇತವಾಗಿ ಎರಡು ಮೂಲಗಂಬಗಳಿವೆ. ಮೊದಲನೆಯ ಕರಿಯ ಕಲ್ಲಿನ ಮೂಲಗಂಬ, ಎರಡನೆಯದು ಬಿಳಿಯ ಕಲ್ಲಿನ ಮೂಲಗಂಬ, ಗರ್ಭಗುಡಿಯ ಸಭಾಮಂಟಪದ ಎದುರು ಎಡ-ಬಲ ಎರಡು ಶಾಸನಗಳಿವೆ ಹಾಗೂ ನಾಗಶಿಲ್ಪ ಮತ್ತು ಹುಲಿಯ ಶಿಲ್ಪಗಳನ್ನು ಕಾಣಬಹುದು. ಯುಗಾದಿ, ಶ್ರಾವಣ ಸೋಮವಾರಗಳಲ್ಲಿ ಸಾಕಷ್ಟು ಜನ ಬಂದು ಸೇರುತ್ತಾರೆ. ಪ್ರತಿ ವರ್ಷ ದೀಪಾವಳಿಗೆ ನರಕಾಸುರನ ಬಲಿ ಪಾಡ್ಯಮಿ ಎನ್ನುವಂತೆ ಕೋಣಾಸುರನ ಸಂಹಾರದ ದಿನ ಎಂಬ ಸಂಪ್ರದಾಯದಂತೆ ಅನೇಕ ದೈವಿ ಆಚರಣೆಗಳನ್ನೊಳಗೊಂಡಂತೆ ಬೃಹತ್ ಪ್ರಮಾಣದಲ್ಲಿ ಜಾತ್ರೆ ನಡೆಯುತ್ತದೆ.[೨]

ಪರಮಾನಂದ ದೇವಾಲಯ

ನಿವೇಶನ	:	ಗ್ರಾಮದಲ್ಲಿ
ದಿಕ್ಕು	:	ಪೂರ್ವಾಭಿಮುಖವಾಗಿ
ಕಾಲ	:	೧೨ನೇ ಶತಮಾನ
ಮಾದರಿ	:	ವೇಸರ ಶೈಲಿ
ಅರಸು ಮನೆತನ	:	ಕಲ್ಯಾಣದ ಚಾಲುಕ್ಯರು

ಪೂರ್ವಾಭಿಮುಕವಾಗಿ ನಿರ್ಮಿತವಾಗಿರುವ ಈ ದೇವಾಲಯ ಈಗ ಊರ ಹೊರಗೆ ಈಶಾನ್ಯ ದಿಕ್ಕಿನಲ್ಲಿದೆ, ಇದನ್ನು ಪ್ರಾಚೀನ ದೇವಾಲಯವೆಂದು ಗುರುತಿಸಬಹುದು.

ತ್ರಿಕೂಟೇಶ್ವರ ಮಾದರಿಯಂತಿರುವ ಈ ದೇವಾಲಯ ಮೂರು ಗರ್ಭ ಗೃಹಗಳು, ಮೂರು ಅಂತರಾಳಗಳು ಹಾಗೂ ಒಂದು ಸಭಾಮಂಟಪವನ್ನು ಹೊಂದಿದೆ. ದೇವಾಲಯದ ಒಟ್ಟು ತಳವಿನ್ಯಾಸ ಉದ್ದ - ೨೦ ಮೀ. ಅಗಲ - ೨೨ ಮೀ. ನಷ್ಟು ಇದೆ.

ದೇವಾಲಯದ ಅಧಿಷ್ಠಾನವನ್ನು ಸ್ಥಳೀಯವಾಗಿ ಲಭ್ಯವಿರುವ ಕೆಂಪು ಮತ್ತು ಬಿಳಿಯ ಹಾಸುಗಲ್ಲಿನಿಂದ ಕಟ್ಟಲಾಗಿದೆ. ಅಧಿಷ್ಠಾನದಲ್ಲಿ ಮೂರು ಪಟ್ಟಿಕೆಗಳಿವೆ. ಅದಿಷ್ಠಾನದಲ್ಲಿ ಹೂವಿನ ಚಿತ್ರ ಮತ್ತು ಗಣಪತಿ ಶಿಲ್ಪವನ್ನು ಕೆತ್ತಲಾಗಿದೆ.

ದೇವಾಲಯಕ್ಕೆ ತೆರೆದ ಮುಖಮಂಟಪ ಇದ್ದಿರಬಹುದು, ಈಗ ಬಿದ್ದು ಹೋಗಿದೆ. ಮುಂದುಗಡೆ ಕಪ್ಪು ಶಿಲೆಯ ಎರಡು ಅರ್ಧಕಂಬಗಳಿವೆ. ದ್ವಾರಬಾಗಿಲು ಕರಿಕಲ್ಲಿನಿಂದ ನಿರ್ಮಿತವಾಗಿದ್ದು, ದೊಡ್ಡದಾದ ಹೊಸ್ತಿಲನ್ನು ಹೊಂದಿದೆ. ಕಲ್ಲಿನಲ್ಲಿನ ಕೆತ್ತನೆ ತೃಟಿತವಾಗಿರುವದರಿಂದ ಯಾವುದೇ ಶಿಲ್ಪವನ್ನಾಗಲೀ, ಅಲಂಕಾರಿಕೆಯನ್ನಾಗಲೀ ಗುರುತಿಸಲು ಸಾಧ್ಯವಾಗುವದಿಲ್ಲ.

ಒಳಗಡೆಗೆ ವಿಶಾಲ ಸಭಾಮಂಟಪದ ನಡುವೆ ನಾಲ್ಕು ಕಂಬಗಳಿವೆ. ಅವುಗಳನ್ನು ಕರಿಯ ಕಲ್ಲಿನಲ್ಲಿ ಸುಂದರವಾಗಿ ಚೌಕ ಮತ್ತು ದುಂಡಾಕೃತಿಯಲ್ಲಿ ನಿರ್ಮಿಸಿದ್ದಾರೆ. ಇವುಗಳ ಎತ್ತರ ಸುಮಾರು ೧೧ ಮೀ. ಸಭಾಮಂಟಪದ ಛೆತ್ತಿನ ಭಾಗದಲ್ಲಿ ನಕ್ಷತ್ರಾಕಾರದ ಚೌಕಾಕೃತಿಯ ವಿನ್ಯಾಸದ ಚಿತ್ರವನ್ನು ಕೆತ್ತಲಾಗಿದೆ. ಸಭಾಮಂಟಪದಲ್ಲಿ ಪಶ್ಚಿಮಾಭಿಮುಖವಾಗಿ ನಂದಿ ವಿಗ್ರಹವಿದೆ. ಸಭಾಮಂಟಪದ ಗೋಡೆಯಲ್ಲಿ ೮ ದೇವಕೋಷ್ಠಕಗಳನ್ನು ಕೆತ್ತಲಾಗಿದೆ. ಈ ದೇವಾಲಯದ ಪಶ್ಚಿಮ, ಉತ್ತರ, ದಕ್ಷಿಣ ದಿಕ್ಕಿನಲ್ಲಿರುವ ಎರಡು ಗರ್ಭಗೃಹಗಳಿವೆ.

ಪಶ್ಚಿಮ ಗರ್ಭಗೃಹ :

ಶಿವಲಿಂಗವನ್ನು ಹೊಂದಿರುವ ಈ ಗರ್ಭಗೃಹ ಚೌಕಾಕಾರವಾಗಿದ್ದು. ಕಲ್ಲಿನ ಮೇಲ್ಛಾವಣಿಯನ್ನು ಹೊಂದಿದೆ. ಛತ್ತಿನಲ್ಲಿ ದುಂಡಾಕೃತಿಯ ಬಳೆಯ ಆಕಾರದ ಸುತ್ತುಗಳನ್ನು ಹಾಗೂ ಚೌಕಾಕೃತಿಯ ಚಿತ್ರಗಳನ್ನು ಗುರುತಿಸಬಹುದು. ಗರ್ಭಗೃಹದ ಬಾಗಿಲು ಅಲಂಕಾರದ ಕೆತ್ತನೆಯಿಂದ ಕೂಡಿದೆ. ಬಾಗಿಲದ ಎಡ ಮತ್ತು ಬಲ ಭಾಗದ ಗೋಡೆಯಲ್ಲಿ ಎರಡು ಸಣ್ಣ ಕಂಬಗಳನ್ನು ಕೆತ್ತಲಾಗಿದೆ. ಗರ್ಭಗೃಹದ ನಾಲ್ಕು ಮೂಲೆಗಳಲ್ಲೂ ಕಂಬಗಳಿದ್ದು ಈ ಕಂಬಗಳು ಚಿಳಿ ಹಾಸುಗಲ್ಲುಗಳಿಂದ ನಿರ್ಮಿತವಾದಂತವುಗಳು ಅಲ್ಲದೆ ಗರ್ಭಗೃಹದ ಹಿಂದಿನ ಗೋಡೆಯಲ್ಲಿ ಹಾಗೂ ಶಿವಲಿಂಗದ ಎಡಭಾಗದ ಗೋಡೆಯಲ್ಲಿ ಬಹುಶಃ ದೀಪಗಳನ್ನು ಇಡಲು ಸುಮಾರು ಒಂದು ಮೀಟರ ಎತ್ತರದ ಚಿಳಿಯ ಹಾಸುಗಲ್ಲುಗಳು ಇವೆ. ಗರ್ಭಗೃಹದ ಮುಂದಿನ ಭಾಗದ ಅಂತರಾಳದಲ್ಲಿ ಎಡ ಮತ್ತು ಬಲ ಭಾಗದ ಗೋಡೆಗಳಲ್ಲಿ ದೇವಕೋಷ್ಠಕಗಳಿವೆ. ಅಂತರಾಳದ ಉದ್ದ – ೧.೨೦ ಮೀ. ಅಗಲ – ೨.೨೦ ಮೀ. ಇದೆ.

ಉತ್ತರ ಗರ್ಭಗೃಹ :

ಪೀಠದ ಮೇಲೆ ಸಮಭಂಗಿಯಲ್ಲಿ ಹರಿಹರನ ಮೂರ್ತಿಯಿದೆ. ಈ ಗರ್ಭಗೃಹವು ಚೌಕಾಕಾರವಾಗಿದೆ. ಛತ್ತಿನ ಭಾಗ ಬಿದ್ದುಹೋಗಿದೆ. ಗರ್ಭಗೃಹದ ಗೋಡೆಯ ನಾಲ್ಕು ಮೂಲೆಗಳಲ್ಲಿ ೨ ಮೀ. ಎತ್ತರದ ಕಂಬಗಳಿವೆ. ಗರ್ಭಗೃಹ ೨.೨೫ ಮೀ. ಉದ್ದ, ೨.೪೦ ಮೀ. ಅಗಲ ಅಳತೆಯಲ್ಲಿ ನಿರ್ಮಾಣಗೊಂಡಿದೆ. ಅಂತರಾಳದ ಛತ್ತಿನ ಭಾಗವು ಬಿದ್ದುಹೋಗಿದೆ. ೨.೬೦ ಮೀ. ಉದ್ದ ಮತ್ತು ೨.೩೦ ಮೀ. ಅಗಲವಿರುವ ಈ ಅಂತರಾಳದಲ್ಲಿ ಎರಡು ದೇವಕೋಷ್ಠಕಗಳು ಕಂಡುಬರುತ್ತವೆ.

ದಕ್ಷಿಣ ಗರ್ಭಗೃಹ :

ಲಕ್ಷ್ಮೀ ನಾರಾಯಣ ವಿಗ್ರಹವನ್ನು ಹೊಂದಿರುವ ಈ ಗರ್ಭಗೃಹವು ಚೌಕಾಕಾರವಾಗಿದೆ. ಇಲ್ಲಿಯೂ ಗರ್ಭಗೃಹದ ೪ ಮೂಲೆಗಳಲ್ಲಿ ೨ ಮೀ. ಎತ್ತರ ಚಿಳಿಯ ಹಾಸುಗಲ್ಲುಗಳಿಂದ ನಿರ್ಮಿತವಾದಂತಹ ಕಂಬಗಳಿವೆ. ಅಂತರಾಳದಲ್ಲಿ ಎರಡು ಕಡೆ ಗೋಡೆಯಲ್ಲಿ ದೇವಕೋಷ್ಠಕಗಳಿವೆ. ಅಂತರಾಳದ ಉದ್ದ ೨.೧೦ ಮೀ. ಅಗಲ ೨.೨೦ ಮೀ. ಇದೆ.

ಈ ದೇವಾಲಯಕ್ಕೆ ಮೊದಲು ೩ ಶಿಖರಗಳು ಇದ್ದವು ಎಂದು ಇಲ್ಲಿಯ ಹಿರಿಯರು ಹೇಳುತ್ತಾರೆ. ಈಗ ಉತ್ತರ ದಿಕ್ಕಿನ ಗರ್ಭಗೃಹದ ಮೇಲಿನ ಶಿಖರವು ಬಿದ್ದುಹೋಗಿದೆ. ರೇಖಾಪ್ರಸಾರ ಶೈಲಿಯಲ್ಲಿ ಕಟ್ಟಲಾದ ಇನ್ನುಳಿದ ಎರಡು ಶಿಖರಗಳು ಚೌಕಾಕಾರವಾಗಿವೆ.

ಈ ದೇವಾಲಯವನ್ನು ಬಿಳಿ ಹಾಸುಗಲ್ಲು, ಕರಿ ಕಲ್ಲು, ಗಚ್ಚು-ಘಾರೆ ಉಪಯೋಗಿಸಿ ಕಟ್ಟಿದ್ದಾರೆ. ಮೂರ್ತಿ ಶಿಲ್ಪಗಳಿಗೆ ಮತ್ತು ಸಭಾಮಂಟಪಕ್ಕೆ ಕರಿಯ ಕಲ್ಲನ್ನು ಬಳಸಿದ್ದಾರೆ. ಇನ್ನುಳಿದ ದೇವಾಲಯದ ಭಾಗಕ್ಕೆ ಬಿಳಿಯ ಹಾಸುಗಲ್ಲನ್ನು ಬಳಸಿರುವುದು ಕಂಡುಬರುತ್ತದೆ.

ಈಗ ಈ ದೇವಾಲಯ ಬಹಳ ಶಿಥಿಲಗೊಂಡಿದೆ. ವಾಸ್ತುಶಿಲ್ಪಕ್ಕೆ ಹೆಸರಾದ ಈ ಗುಡಿ ಇಂದು ಶೋಚನೀಯ ಸ್ಥಿತಿಯಲ್ಲಿದೆ. ವರ್ಷದ ವಿಶೇಷ ದಿನಗಳಲ್ಲಿ ಮಾತ್ರ ಪೂಜೆಗಳು ನಡೆಯುತ್ತವೆ. ಇನ್ನೂಳಿದ ದಿನಗಳಲ್ಲಿ ನಿರ್ಜನ ಹಾಗೂ ಅಲಕ್ಷಿತ ಪರಿಸರದ ಭಾಗವಾಗಿ ಬಿಡುವ ಈ ದೇವಾಲಯದ ಬಗ್ಗೆ ಸರಕಾರ ಮತ್ತು ಪ್ರಾಚ್ಯವಸ್ತು ಇಲಾಖೆಯವರು ಆಸಕ್ತಿ ವಹಿಸಿ ಸೂಕ್ತ ರಕ್ಷಣೆ ಒದಗಿಸಿ ಇನ್ನಷ್ಟು ಸಂಶೋಧನೆ ನಡೆಸಿದರೆ ಇನ್ನಷ್ಟು ಐತಿಹಾಸಿಕ ಸಂಗತಿಗಳು ಬೆಳಕಿಗೆ ಬರುವುದರಲ್ಲಿ ಸಂಶಯವಿಲ್ಲ.[೩]

ರಾಮಲಿಂಗೇಶ್ವರ ದೇವಾಲಯ – ಹಳಿಂಗಳ :

ಸ್ಥಳ	:	ಹಳಿಂಗಳಿ
ಹೆಸರು	:	ರಾಮೇಶ್ವರ ದೇವಾಲಯ
ನಿವೇಶನ	:	ಗ್ರಾಮದ ಮಧ್ಯದಲ್ಲಿ
ದಿಕ್ಕು	:	ಪೂರ್ವಾಭಿಮುಖ
ಅರ್ಪಣೆ	:	ಶಿವ
ಕಾಲ	:	೧೨ನೇ ಶತಮಾನ
ಅರಸು ಮನೆತನ	:	ಕಲ್ಯಾಣದ ಚಾಲುಕ್ಯರು
ಮದರಿ	:	ವೇಸರ ಶೈಲಿ

ಹಳಿಂಗಳಿ ಗ್ರಾಮ ಜಮಖಂಡಿಯಿಂದ ಪಶ್ಚಿಮ ದಿಕ್ಕಿನಲ್ಲಿ ಬನಹಟ್ಟಿ ಮಾರ್ಗವಾಗಿ ಸಂಚರಿಸಿದರೆ ೨೦ ಕಿ.ಮೀ. ಅಂತರದಲ್ಲಿ ಸಿಗುವ ಜಮಖಂಡಿ ತಾಲೂಕಿನ ಒಂದು ಗ್ರಾಮ. ಇಲ್ಲಿ ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ಕುರುಹುಗಳು ಸಿಗುತ್ತವೆ. ಇಲ್ಲಿ ಗತಕಾಲದ ಸಮಾಧಿಗಳು, ನಿಶಿಧಿಗಲ್ಲುಗಳು, ಜೈನ ಬಸದಿಗಳು, ಆಂಜನೇಯ ಗುಡಿಗಳು ಕಂಡುಬರುತ್ತವೆ. ಪ್ರಮುಖ ಐತಿಹಾಸಿಕ ದೇವಾಲಯವೆಂದರೆ ರಾಮಲಿಂಗೇಶ್ವರ ದೇವಾಲಯ.

ಈ ದೇವಾಲಯ ಗ್ರಾಮದ ಮಧ್ಯದಲ್ಲಿಯೇ ಇದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವನ್ನು ಗ್ರಾಮಸ್ಥರೇ ನವೀಕರಣ ಮಾಡಿಕೊಂಡಿದ್ದಾರೆ. ದೇವಾಲಯದ ಗರ್ಭಗೃಹ ಮತ್ತು ಅದರ

ಮೇಲಿನ ಶಿಖರಗಳು ಪ್ರಾಚೀನತೆಯ ಕುರುಹುವಾಗಿ ಉಳಿದುಕೊಂಡಿವೆ. ಒಟ್ಟಾರೆ ದೇವಾಲಯವನ್ನು ವೀಕ್ಷಿಸಿದಾಗ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯವೆಂದು ಹೇಳುಬಹುದು.

ಈಗ ಉಳಿದಿರುವ ಪ್ರಾಚೀನ ದೇವಾಲಯದ ಭಾಗವೆಂದರೆ ನವರಂಗ, ಸುಖನಾಶಿ, ಗರ್ಭಗೃಹ ಉಳಿದ ಭಾಗ ಹಾಳಾಗಿರುವದಕ್ಕೆ ಗ್ರಾಮಸ್ಥರೇ ಕೆಡವಿ ನವೀಕರಣ ಮಾಡಿಕೊಂಡಿದ್ದಾರೆ. "ನವೀಕರಣ ಮಾಡುವಾಗ ದೊರೆತ ಪಾದಪೀಠ ಹಾಗೂ ಜೈನ ಶಿಲ್ಪಗಳನ್ನು ಜೈನ ಬಸದಿಗೆ ಹಾಕಿಕೊಂಡಿದ್ದೇವೆ" ಎಂಬುವುದು ಗ್ರಾಮಸ್ಥರ ಹೇಳಿಕೆ.

ಗರ್ಭಗೃಹವು ಚೌಕಾಕಾರವಾಗಿದ್ದು ಶಿವಲಿಂಗವನ್ನು ಹೊಂದಿದೆ. ಗರ್ಭಗೃಹದ ಬಾಗಿಲು ಚಿಕ್ಕದಾಗಿದ್ದರೂ ಪ್ರತಿ ಯುಗಾದಿ ಪಾಡ್ಯದ ದಿನ ಬೆಳಿಗ್ಗೆ ಸೂರ್ಯ ಕಿರಣ ನೇರವಾಗಿ ಶಿವಲಿಂಗದ ಮೇಲೆ ಬೀಳುತ್ತದೆ ಎಂದು ಗ್ರಾಮಸ್ಥರು ಹೇಳುತ್ತಾರೆ. ಗರ್ಭಗೃಹದಲ್ಲಿ ಚತುರ್ಭುಜದ ಗಣೇಶನ ವಿಗ್ರಹವಿದೆ. ಮೇಲಿನ ಕೈಗಳಲ್ಲಿ ಅಂಕುಶ, ಅಭಯ ಹಸ್ತ. ಕೆಳಗಿನ ಕೈಗಳಲ್ಲಿ ತ್ರಿಶೂಲ, ಮೋದಕ ತಟ್ಟೆಯಿದೆ.

ಸುಕನಾಶಿಯ ಭಾಗದಲ್ಲಾಗಲಿ, ನವರಂಗದಲ್ಲಾಗಲಿ ಇತರೆ ವಿಗ್ರಹಗಳು ಕಂಡುಬರುವುದಿಲ್ಲ. ನವರಂಗದಲ್ಲಿ ಕರಿಯ ಶಿಲೆಯ ಕಂಬಗಳಿವೆ. ಕೆಲವು ಕಂಬಗಳು ಗೋಡೆಯ ಮಧ್ಯದಲ್ಲಿಯೇ ಕಂಡುಬರುವವು. ಕಂಬಗಳಲ್ಲಿ ಪೀಠ, ಖಂಡಭಾಗ, ಮೂಲಸ್ಥಾನ ಕಂಬ, ಕಲಶ, ಪದ್ಮ, ಫಲಕ, ಬೋದಿಗೆ ಎಂಬ ಭಾಗಗಳನ್ನು ಗುರುತಿಸಬಹುದು. ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಜಾತ್ರೆಯನ್ನು ಆಚರಿಸುವ ನಿಮಿತ್ಯವಾಗಿ ಸುಣ್ಣವನ್ನು ಬಳಿಯುತ್ತಾ ಬಂದಿರುವುದರಿಂದ ಅಲಂಕಾರಿಕೆ ಮತ್ತು ಕುಸುರಿ ಕೆತ್ತನೆಯನ್ನು ಗುರುತಿಸಲಾಗುವುದಿಲ್ಲ.

ದೇವಾಲಯದ ಆವರಣದಲ್ಲಿ ಗೋಡೆಯ ಹಿಂಬದಿಗೆ ಹಚ್ಚಿ ನಿಂತಿರುವಂತೆ ಕಾಣುವ ಆಂಜನೆಯ ವಿಗ್ರಹವಿದೆ. ಗರ್ಭಗೃಹದ ಮೇಲೆ ಶಿಖರ ತಳಭಾಗದಿಂದ ಚತುರಾಕಾರದಲ್ಲಿ ಕಟ್ಟಲ್ಪಟ್ಟಿದ್ದು, ಕ್ರಮೇಣ ಮೇಲಕ್ಕೆ ಹೋದಂತೆ ವೃತ್ತಾಕಾರವಾಗಿ ಕೊನೆಗೊಂಡಿದೆ. ಶಿಖರದ ಮೇಲೆ ಕಳಸವನ್ನಿರಿಸಲಾಗಿದೆ. ಶಿಖರದ ಹೊರಮೈಗೆ ಪೂರ್ತಿ ಸುಣ್ಣ ಬಳಿಯುತ್ತಾ ಬಂದಿರುವದರಿಂದ ಶಿಖರದಲ್ಲಿ ಕೆತ್ತಿರುವ ಶಿಲ್ಪಗಳನ್ನಾಗಲಿ, ಇತರೆ ಕುಸುರಿ ಕೆತ್ತನೆಗಳನ್ನಾಗಲಿ ಗುರುತಿಸುವುದು ಸಾಧ್ಯವಾಗುವುದಿಲ್ಲ. ಶಿಖರ ವೇಸರ ಶೈಲಿಯದಾಗಿದೆ ಎಂಬ ಆಧಾರದ ಮೇರೆಗೆ ಇದನ್ನು ಕಲ್ಯಾಣಿ ಚಾಲುಕ್ಯರ ಕಾಲದೆಂದು ಗುರುತಿಸಬಹುದಾಗಿದೆ.[೪]

ಸೋಮನಾಥ ದೇವಾಲಯ – ಸಾವಳಗಿ :

ಜಮಖಂಡಿ ತಾಲೂಕಿನ ಕಂದಾಯ ವಿಭಾಗ ಹಾಗೂ ಮಂಡಲ ಪಂಚಾಯ್ತಿಯ ಕೇಂದ್ರ, ಜಮಖಂಡಿಯಿಂದ ಬಿಜಾಪೂರಕ್ಕೆ ಹೋಗುವ ಮಾರ್ಗದಲ್ಲಿ ೧೫ ಕಿ.ಮೀ. ಅಂತರದ ಚಿಕ್ಕಪಡಸಲಗಿಯಿಂದ ಉತ್ತರ ದಿಕ್ಕಿಗೆ ೧೦ ಕಿ.ಮೀ. ಅಂತರದಲ್ಲಿ ಸಾಗಿದರೆ ಸಿಗುವ ದೊಡ್ಡ ಗ್ರಾಮವೇ ಸಾವಳಗಿ. ೧೨ & ೧೪ ನೇ ಶತಮಾನದೆಂದು ಗುರುತಿಸಬಹುದಾದ ಒಂದು ಶಾಸನ ದೊರೆಯುತ್ತದೆ.

ನಿವೇಶನ	:	ಗ್ರಾಮದ ಮಧ್ಯದಲ್ಲಿ
ದಿಕ್ಕು	:	ಪೂರ್ವಾಭಿಮುಖ
ಅರ್ಪಣೆ	:	ಶಿವ
ಕಾಲ	:	೧೨ & ೧೪ ನೇ ಶತಮಾನ
ಅರಸು ಮನೆತನ	:	ದೇವಗಿರಿ ಯಾದವರು
ಮಾದರಿ	:	ವೇಸರ ಶೈಲಿ

ಈ ದೇವಾಲಯವನ್ನು ಪ್ರಾಚೀನ ದೇವಾಲಯವೆಂದೇ ಗುರುತಿಸಬಹುದು. ನವರಂಗ, ಸುಖನಾಸಿ, ಮತ್ತು ಗರ್ಭಗೃಹಗಳನ್ನೊಳಗೊಂಡ ಈ ದೇವಾಲಯ ಪೂರ್ವಾಭಿಮುಖವಾಗಿ ಎತ್ತರವಾದ ಜಗಲಿಯ ಮೇಲೆ ಕಟ್ಟಲ್ಪಟ್ಟಿವೆ. ಈ ದೇವಾಲಯದ ವಿಶೇಷತೆ ಏನೆಂದರೆ ರಂಗಮಂಟಪ (ನವರಂಗ) ಎಂದು ಕರೆಯಬಹುದಾದ ಭಾಗದಲ್ಲಿಯೂ ಒಂದು ಬೃಹತ್ ಲಿಂಗ ನಿರ್ಮಿಸಿದ್ದಾರೆ. ಗರ್ಭಗೃಹದಲ್ಲೊಂದು ಶಿವಲಿಂಗ, ಗರ್ಭಗೃಹದ ಬಾಗಿಲು ಚಿಕ್ಕದಾಗಿದ್ದು, ಗರ್ಭಗೃಹದ ಮುಂದೆ ಸುಖನಾಸಿಯ ಎರಡು ಪಕ್ಕದಲ್ಲಿ ಅಲಕೃತಗೊಂಡ ಕಂಬಗಳು ನವರಂಗಲದಲ್ಲಿಯೂ ಕರಿಕಲ್ಲಿನ ಕಂಬಗಳು ಇವೆ. ನವರಂಗದಲ್ಲಿನ ಇನ್ನೊಂದು ವಿಶೇಷತೆಯೆಂದರೆ ನವರಂಗದ ಎರಡೂ ಕಡೆಯ ಗೋಡೆಗಳಲ್ಲಿ ಸಣ್ಣ ಸಣ್ಣ ದೇವರುಗಳ ವಿಗ್ರಹ ಇಡಲಿಕ್ಕೆ ಅನುಕೂಲವಾಗುವಂತಹ ದೇವಕೋಷ್ಟಕಗಳು ಹಾಗೂ ದೇವರುಗಳನ್ನು ತೊಳೆದಾಗ ನೀರು ಹರಿದು ಕೆಳಗೆ ಬೀಳುವಂತೆ ಮಾಡಲಾದ ಕಲ್ಲಿನ ಜಲವಾನಿಗಳು ಕಂಡುಬರುತ್ತವೆ. ದೇವಕೋಷ್ಟಕಗಳಲ್ಲಿ ತುಂಬಾ ಪ್ರಾಚೀನವಾದ ಗಣಪತಿ ವಿಗ್ರಹ, ಸಪ್ತಮಾತ್ರಿಕೆಗಳ ಚಿತ್ರವಿರುವ ಕಲ್ಲಿನ ಉಬ್ಬು ಶಿಲ್ಪಗಳು ಕಂಡುಬರುತ್ತವೆ. ನವರಂಗದ ಛತ್ತು ಕೂಡಾ ಕಲ್ಲಿನಿಂದ ಚೌಕಾಕಾರವಾಗಿ ನಿರ್ಮಿಸಿಲ್ಪಟ್ಟಿದ್ದು ನಡುವೆ ಪದ್ಮವನ್ನು ಕೆತ್ತಲಾಗಿದೆ. ಚೌಕಾಕಾರವಾಗಿರುವ ಗರ್ಭಗೃಹದಲ್ಲಿ ಶಿವಲಿಂಗವಿದೆ. ಗರ್ಭಗೃಹದ ಮೇಲೆ ಶಿಖರವಿದೆ. ಶಿಖರ ಶಿಥಿಲಗೊಳ್ಳುತ್ತಿದೆ. ಶಿಖರ ತಲವಿನ್ಯಾಸದಲ್ಲಿ ಚೌಕಾಕೃತಿಯಿಂದ ಕಟ್ಟಲ್ಪಟ್ಟಿದ್ದು, ಮೇಲಕ್ಕೆ ಹೋದಂತೆ ಚತುರಾಕಾರ ಮತ್ತು ವೃತ್ತಾಕಾರಗಳಿಂದ ನಿರ್ಮಿತಗೊಂಡಿದ್ದು ಮೇಲೆ ಕಳಸವಿದೆ.

ಒಟ್ಟಾರೆ ದೇವಾಲಯದಲ್ಲಿನ ಅಲಂಕಾರಿಕೆಗಳನ್ನಾಗಲೀ, ಕುಸುರಿ ಕೆತ್ತನೆಯನ್ನಾಗಲಿ ಗುರುತಿಸಲು ಸಾಧ್ಯವಾಗುವುದಿಲ್ಲ. ದೇವಾಲಯಕ್ಕೆ ಸುಣ್ಣ ಬಳಿದು ಪ್ರತಿ ಶ್ರಾವಣ ಮಾಸದಲ್ಲಿ ಉತ್ಸವಗಳನ್ನು ಆಚರಿಸುವ ಇಲ್ಲಿಯ ಜನ ಈ ದೇವಾಲಯವನ್ನು ಕುರಿತಂತೆ ವಿಶೇಷ ನಂಬಿಕೆಗಳನ್ನು ಬೆಳೆಸಿಕೊಂಡಿದ್ದಾರೆ. ಇಲ್ಲಿಯ ಪೂಜಾರಿ ಗುರವ ವಂಶದ ಸೋಮನಾಥ ಪೂಜಾರಿ ಹೇಳುವಂತೆ ಈ ದೇವಾಲಯದಲ್ಲಿ ರಾತ್ರಿ ಯಾರೂ ತಂಗುವದಿಲ್ಲ, ಏಕೆಂದರೆ ಭಯಂಕರ ಸರ್ಪವೊಂದು ಈ ದೇವಸ್ಥಾನವನ್ನು ಕಾಯುತ್ತದೆ. ನವರಂಗದ ಕೆಳಭಾಗದಲ್ಲಿ ಬಾವಿ ಇದ್ದಿರಬಹುದೆಂದು, ಸುಖನಾಸಿಯ ಕೆಳಭಾಗದಲ್ಲಿ ನಿಧಿಯಿದೆಯೆಂದು ಹೇಳುತ್ತಾರೆ. ಅಲ್ಲದೆ ರಾತ್ರಿ ವೇಳೆಯಲ್ಲಿ ಈ ದೇವಾಲಯದ ತುಂಬಾ ಸುವಾಸನೆಯಿಂದ ಕೂಡಿರುತ್ತದೆ ಎಂದು ಹೇಳುತ್ತಾನೆ. ನವರಂಗದ ಮುಂದಿನ ಭಾಗದಲ್ಲಿ ಹಾಳಾದ

ಮೆಟ್ಟಿಲುಗಳಿವೆ. ಈ ಭಾಗವೆ ದೇವಸ್ಥಾನದ ದ್ವಾರಬಾಗಿಲೇನೋ ಎಂದೆನಿಸುತ್ತದೆ. ಗೋಡೆಗಳಲ್ಲಿ ಬರಹಗಳಿವೆ ಎಂದು ಸ್ಥಳೀಯರು ಹೇಳುತ್ತಾರೆ ಆದರೆ ಸುಣ್ಣ ಬಳಿದಿರುವುದರಿಂದ ಏನು ಗೊತ್ತಾಗುವದಿಲ್ಲ.

ಈ ದೇವಸ್ಥಾನವನ್ನು ಪುನರ್ ನವೀಕರಿಸಿದರೆ ಬಹುಶಃ ಇಲ್ಲಿ ಅಡಗಿರುವ ವಿಶೇಷ ಸಂಗತಿಗಳು ಹೊರಬರಬಹುದು. ಈ ದಿಶೆಯಲ್ಲಿ ಸರಕಾರ ಮತ್ತು ಪ್ರಾಚ್ಯವಸ್ತು ಇಲಾಖೆ ಕ್ರಮ ಕೈಗೊಳ್ಳಬೇಕೆಂಬುವದೆ ನಮ್ಮ ಆಶಯ."

ಕಲ್ಲಿನಾಥ ದೇವಾಲಯ ಖಾಜಿಬೀಳಗಿ :

ಇದು ಕೂಡಾ ಜಮಖಂಡಿಯಿಂದ ವಿಜಾಪೂರಕ್ಕೆ ಹೋಗುವ ಮುಖ್ಯ ಮಾರ್ಗದಲ್ಲಿ ೧೫ ಕಿ.ಮೀ. ದೂರದಲ್ಲಿರುವ ಚಿಕ್ಕಪಡಸಲಗಿವರೆಗೆ ಪ್ರಯಾಣಿಸಿದ ನಂತರ ಚಿಕ್ಕಪಡಸಲಗಿಯಿಂದ ಉತ್ತರಕ್ಕೆ ಹತ್ತಾರು ಕಿ.ಮೀ. ದೂರದ ಅಂತರದಲ್ಲಿರುವ ಗ್ರಾಮ. ಜಮಖಂಡಿ ತಾಲೂಕಿನ ಗಡಿ ಭಾಗವೆಂದೆ ಗುರುತಿಸಬಹುದು. ಇಲ್ಲಿ ಕ್ರಿ.ಶ. ೧೨೦೩ ರ ಕಾಲದ್ದೆಂದು ಗುರುತಿಸಲಾದ ಶಾಸನ ದೊರೆಯುತ್ತದೆ.

ನಿವೇಶನ	:	ಗ್ರಾಮದ ಹೊರಗೆ
ದಿಕ್ಕು	:	ಉತ್ತರಾಭಿಮುಖ
ಅರ್ಪಣೆ	:	ಶಿವ
ಕಾಲ	:	ಕ್ರಿ.ಶ. ೧೩ನೇ ಶತಮಾನ
ಅರಸು ಮನೆತನ	:	ದೇವಗಿರಿ ಯಾದವರು
ಮಾದರಿ	:	ವೇಸರ ಶೈಲಿ

ಈ ದೇವಾಲಯ ಅತಿ ಪ್ರಾಚೀನ ದೇವಾಲಯಗಳಲ್ಲಿ ಒಂದು. ಈಗ ಪೂರ್ಣ ಶಿಥಿಲಗೊಂಡಿದೆ. ಸ್ಥಳೀಯರು ಜೀರ್ಣೋದ್ಧಾರಕ್ಕಾಗಿ ಪ್ರಯತ್ನ ನಡೆಸಿದ್ದಾರೆ. ಶಿಖರ ಬಿದ್ದು ಹೋಗಿದೆ. ಮೂಲ ಗರ್ಭಗೃಹದಲ್ಲಿ ಶಿವಲಿಂಗವಿದೆ. ಶಿವಲಿಂಗದ ಎದುರಿಗೆ ನಂದಿ ಸುಖನಾಸಿಯ ಭಾಗದಲ್ಲಿದೆ. ಕೆಂಪು ಕಲ್ಲಿನಿಂದ ನಿರ್ಮಿತವಾದ ನವರಂಗದ ಭಾಗ ಉಳಿದುಕೊಂಡಿದೆ. ನವರಂಗದ ಛತ್ತಿನಲ್ಲಿ ಚೌಕಾಕೃತಿ ಕೆತ್ತನೆ ಅದರೊಳಗೆ ದುಂಡಾಕೃತಿಯ ಪದ್ಮವನ್ನು ಕೆತ್ತಿದ್ದಾರೆ. ಈ ದೇವಾಲಯವು ಕೂಡಾ ಎತ್ತರದ ಜಗಲಿಯ ಮೇಲೆ ನಿರ್ಮಿತವಾಗಿದೆ. ದೇವಾಲಯ ಶಿಥಿಗೊಂಡಿರುವದರಿಂದ ಕಲಾತ್ಮಕ ಕೆತ್ತನೆಯನ್ನು, ಕುಸುರಿ ಕೆತ್ತನೆಯನ್ನು, ದೇವಸ್ಥಾನದ ಭಾಗಗಳ ವರ್ಣನೆಯನ್ನು ಬಣ್ಣಿಸಲು ಸಾಧ್ಯವಾಗುವುದಿಲ್ಲ. ದೇವಗಿರಿ ಯಾದವರ ಮಹಾಪ್ರಧಾನ ಸರ್ವಾಧಿಕಾರಿ ರಂಗನಾಥನ ಆಜ್ಞೆಯ ಮೇರೆಗೆ ಇಲ್ಲಿಯ ಗೌಡ ಮತ್ತು ಇತರೆ ಜನರಿಂದ ಮೂಲ ಸ್ಥಾನ ಕಲ್ಲಿನಾಥ ದೇವರಿಗೆ ರಂಗಭೋಗಕ್ಕಾಗಿ, ಅಂಗಭೋಗಕ್ಕಾಗಿ ದೇವಸ್ಥಾನದ ಪೂಜೆಗಳು ನಡೆಯಲಿಕ್ಕೆಂದು ಭೂದಾನ ಕೊಟ್ಟ ಉಲ್ಲೇಖವಿದೆ. ಅಂತೆಯೇ ದೇವಸ್ಥಾನಕ್ಕೆ ಈಗಲೂ ನಿತ್ಯ ಪೂಜೆ ನಡೆಯುತ್ತದೆ. ಇದು ದೇವಸ್ಥಾನದ ಭೂಮಿ ಇದೆ ಎಂದು ಇಲ್ಲಿಯ ಸ್ಥಳೀಯ ನಿವಾಸಿ ಪಾಟೀಲರು ಹೇಳುತ್ತಾರೆ.

ಕಾಶಿಲಿಂಗನ ಗುಡಿ ಖಾಜಿಬೀಳಗಿ :

ಖಾಜಿಬೀಳಗಿಯ ಊರ ಹೊರಗಡೆ ನಿಸರ್ಗದ ಮಡಿಲಲ್ಲಿ ಜಾಗೃತ ಸ್ಥಾನವೆಂದು ಕರೆದುಕೊಂಡ ಈಗಲೂ ವಿಜೃಂಭಿಸುತ್ತಿರುವ ದೇವಾಲಯವೆಂದರೆ ಕಾಶಿಲಿಂಗೇಶ್ವರ ದೇವಾಲಯ.

ದೇವಾಲಯ ಪೂರ್ವಾಭಿಮುಖವಾಗಿದೆ. ಸುತ್ತಲೂ ಗುಡ್ಡಗಳ ಸಾಲು, ಗುಡ್ಡಗಳ ನಡುವೆ ಸದಾ ಹರಿಯುತ್ತಿರುವ ಹಳ್ಳ (ಝುರಿ) ದೇವಾಲಯವು ಬಹಳ ಪುರಾತನ ಕಾಲದ್ದೆಂದು ನಂಬಿಕೆಯಿದೆ. ಈ ದೇವಾಲಯದ ಪೂಜಾರಿಗಳು ಹಾಲು ಮತದ ಕುರುಬ ಜನಾಂಗದವರು.

ಸುತ್ತಲೂ ಗುಡ್ಡಗಳ ಸಾಲಿನಲ್ಲಿ ಈಶಾನ್ಯ ದಿಕ್ಕಿನಿಂದ ಹರಿದು ಬಂದ ಹಳ್ಳ ದಕ್ಷಿಣಾಭಿಮುಖವಾಗಿ ಸಾಗಿ ಬಂದು ದೇವಾಲಯದ ಮುಂಭಾಗದಲ್ಲಿ ಪೂರ್ವಾಮುಖವಾಗಿ ಹರಿದುಹೋಗುತ್ತದೆ. ಈ ದೇವಾಲಯ ಪವಾಡ ಸದೃಶ್ಯಗಳಿಂದ ಕೂಡಿದೆ. ಇಲ್ಲಿ ಹರಿಯುವ ಹಳ್ಳದ ನೀರಿನಿಂದಲೆ ಕಾಶಿಲಿಂಗನ ಪೂಜೆ ವರ್ಷದ ೧೨ ತಿಂಗಳೂ ನಡೆಯತ್ತದೆ. ಇಲ್ಲಿನ ಆಲದ ಮರದ ಮೂಲ ಯಾವುದು ಎಂದು ತಿಳಿಯುವುದಿಲ್ಲ. ಪ್ರತಿ ವರ್ಷ ಹೊಸ ಚಿಗುರಿನಿಂದ ಕೂಡಿದ ಗಿಡವಾಗಿಯೇ ಕಾಣುತ್ತದೆ ಎಂದು ಅಲ್ಲಿಯ ಗುಡಿಯ ಪೂಜಾರಿ ನಿಂಗಪ್ಪಾ ಪೂಜಾರಿ ಹೇಳುತ್ತಾರೆ.

ಗರ್ಭಗೃಹ ಪ್ರಾಚೀನವಾದದ್ದೆಂದು ಗುರುತಿಸಬಹುದಾಗಿದ್ದು, ಈಗ ನವೀಕರಣಗೊಂಡಿದೆ. ಗರ್ಭಗೃಹದ ಬಾಗಿಲು ಬಹಳೇ ಚಿಕ್ಕದಾಗಿರುತ್ತದೆ. ಗರ್ಭಗೃಹದಲ್ಲಿ ಎತ್ತರದ ಜಗುಲಿಯ ಮೇಲೆ ಶಿವಲಿಂಗದ ಹಿಂಭಾಗದಲ್ಲಿ ಐದು ಪದ್ಮಗಳಿವೆ. ಪ್ರತಿ ಮೂರು ವರ್ಷಕ್ಕೊಮ್ಮೆ ಇಲ್ಲಿ ಜಾತ್ರೆ, ಉತ್ಸವಗಳು ಜರುಗುತ್ತವೆ. ಪ್ರತಿ ಯುಗಾದಿ ಪಾಡ್ಯದ ದಿನ ಮುಂಜಾನೆ ಸೂರ್ಯನ ಕಿರಣ ಶಿವಲಿಂಗದ ಮೇಲೆ ಬೀಳುತ್ತದೆ.

ಹಳ್ಳದ ದಂಡೆಗೆ ಈ ದೇವಾಲಯವಿದೆ. ಹಳ್ಳದ ಈಚೆಗಿನ ದಡಕ್ಕೆ ಸೇರಲು ಹಳ್ಳಕ್ಕೆ ಸೇತುವೆ ನಿರ್ಮಿಸಿದ್ದಾರೆ. ಈಚೆಗಿನ ಭಾಗದಲ್ಲಿ ಪ್ರಾಂಗಣವನ್ನು ನಿರ್ಮಿಸಿದ್ದಾರೆ. ಪ್ರಾಂಗಣದಲ್ಲಿ ತಂಗಲು ವಿಶ್ರಾಂತಿ ಗೃಹಗಳನ್ನು ಕಲ್ಲಿನಿಂದಲೇ ಕಮಾನಿನಾಕಾರದಲ್ಲಿ ನಿರ್ಮಿಸಿದ್ದಾರೆ. ಈ ದೇವಸ್ಥಾನವನ್ನು ಡೆಂಗಿ ದೇವರ ಗುಡಿ ಎಂದು ಕರೆಯುತ್ತಾರೆ. ಈ ದೇವಾಲಯಕ್ಕೆ ಎಣ್ಣೆ ಹೊಲಗಳೆಂದು ಕರೆಯುವ ದೇವಸ್ಥಾನದ ಹೊಲಗಳು ಇವೆ. ಆದರ ಉತ್ಪನ್ನವನ್ನು ದೇವರ ಪೂಜೆಗೆ ಮತ್ತು ದೇವಾಲಯಕ್ಕೆ ಬಳಸುತ್ತಾರೆ. ಇತ್ತೀಚೀಗೆ ಊರ ಪ್ರಮುಖರು ದೇವಸ್ಥಾನಕ್ಕೆ ಸುಂದರವಾದ ದ್ವಾರಬಾಗಿಲನ್ನು, ಎತ್ತರದ ಗೋಡೆಯನ್ನು ನಿರ್ಮಿಸಿದ್ದಾರೆ. ನಿಸರ್ಗದ ಮಡಿಲಲ್ಲಿ ಶಾಂತ ವಾತಾವರಣದಲ್ಲಿರುವ ಈ ದೇವಾಲಯದ ಪರಿಸರ ಪ್ರವಾಸಿಗರ ತಾಣವಾಗಲಿಕ್ಕೆ ತುಂಬಾ ಅನುಕೂಲವಾಗಿದೆ ಎಂದೆನಿಸುತ್ತದೆ.[೬]

ಕಾಡಸಿದ್ದೇಶ್ವರ ದೇವಾಲಯ ಬನಹಟ್ಟಿ :

ಮೂಲ ಕಾಡಸಿದ್ದೇಶ್ವರರು ೧೪ ನೇ ಶತಮಾನದಲ್ಲಿ ಇದ್ದರು. ಇವರು ಅಥಣಿ ತಾಲೂಕಿನ ಶೇಗುಣಸಿ ಗ್ರಾಮದ ಗೌಡರ ಮನೆಯಲ್ಲಿ ಜನ್ಮ ತಾಳಿದರು. ಇವರು ವೀರ ವಿರಕ್ತರು. ಮಹಾತಪಸ್ವಿಗಳು ಮತ್ತು ಸಿದ್ದಿಪುರುಷರು ಆಗಿದ್ದರು. ಇವರು ಲೋಕಸಂಚಾರ ಮಾಡುತ್ತ ಕೊನೆಗೆ ಸಿದ್ಧಗಿರಿ ಕ್ಷೇತ್ರಕ್ಕೆ

ಆಗಮಿಸಿ ಅಲ್ಲಿಯೇ ಐಕ್ಯರಾದರು. ಇವರು ತಮ್ಮ ಸಂಚಾರ ಕಾಲದಲ್ಲಿ ಬನಹಟ್ಟಿ ಗ್ರಾಮಕ್ಕೆ ಆಗಮಿಸಿದರು. ಅಲ್ಲಿ ಈ ಸತ್ಪುರುಷನು ಪಾದವಿಟ್ಟು ಪಾವನಗೊಳಿಸಿದ ಸ್ಥಳದಲ್ಲಿಯೇ, ದೇವಾಲಯವನ್ನು ಕಲ್ಪಿಸಲಾಗಿದೆ. ಇದೇ ಕಾಡಸಿದ್ದೇಶ್ವರ ದೇವಾಲಯ. ಇದು ಊರಿನ ಪಶ್ಚಿಮದಿಕ್ಕಿನ ಉನ್ನತ ಗುಡ್ಡದ ಮೇಲಿದೆ. ಇದು ಬಹು ಜಾಗೃತವಾದ ದೇವಸ್ಥಾನವಾಗಿದ್ದು ಸಕಲ ಧರ್ಮೀಯರು ಅತ್ಯಂತ ಭಕ್ತಿ ಭಾವದಿಂದ ನಡೆದುಕೊಳ್ಳುತ್ತಾರೆ. ಪ್ರತಿವರ್ಷ ಈ ದೇವಸ್ಥಾನದ ಜಾತ್ರಾಮಹೋತ್ಸವವು ಬೃಹತ್ ಪ್ರಮಾಣದಲ್ಲಿ ನಡೆಯುತ್ತದೆ.

ಜಂಬುಕೇಶ್ವರ ದೇವಾಲಯ:-

ಇದು ಜಮಖಂಡಿ ನಗರದ ಅಧಿದೇವತೆಯ ದೇವಾಲಯ. ಪ್ರವೇಶ ದ್ವಾರವು ಪೂರ್ವಾಭಿಮುಖವಾಗಿದ್ದು, ಮುಂಭಾಗದ ಬಲಬದಿಗೆ ಐರಾವತ ಮತ್ತು ಎಡಬದಿಗೆ ನಂದಿಯ ಮೂರ್ತಿಗಳಿವೆ. ಅಲ್ಲಿಂದ ಏಳೆಂಟು ಪಾವಟಿಗೆಗಳನ್ನು ಇಳಿದು ಹೋದಾಗ ಗುಡಿಯ ಪ್ರವೇಶದ್ವಾರವಿದೆ.

ಅವರ ಮೇಲ್ಭಾಗದಲ್ಲಿ ಸಿಂಹಾಕೃತಿಯ ಪ್ರಭಾವಳಿಯಿದ್ದು, ಎಡ-ಬಲಕ್ಕೆ ಐರಾವತದ ಚಿತ್ರಗಳು, ಮಧ್ಯದಲ್ಲಿ ಶಿವನ ಚಿತ್ರವಿದ್ದು, ಎಡಬದಿಗೆ ನವಿಲು ವಾಹನದ ಷಣ್ಮುಖನ ಚಿತ್ರ ಬಲಬದಿಗೆ ಗಣಪತಿಯ ಚಿತ್ರವನ್ನು ಕೆತ್ತಲಾಗಿದೆ.

ಪ್ರವೇಶ ದ್ವಾರದಿಂದ ದೇವಾಲಯಕ್ಕೆ ಹೋಗಲು ಪುನಃ ೧೦-೧೨ ಪಾವಟಿಗೆಗಳನ್ನು ಇಳಿದು ಬರಬೇಕಾಗುತ್ತದೆ. ಏಕೆಂದರೆ ಪ್ರಾಚೀನ ಕಾಲದಲ್ಲಿ ಈ ದೇವಾಲಯವು ನೆಲಕ್ಕೆ ಸಮಾಂತರವಾಗಿತ್ತು. ಕಾಲಾಂತರದಲ್ಲಿ ಪಟ್ಟಣವು ಮೇಲಕ್ಕೇರಿ ದೇವಾಲಯವು ಕೆಳಗಿಳಿದಿದೆ. ಇದು ಅದರ ಪ್ರಾಚೀನತೆಯನ್ನು ತೋರಿಸುತ್ತದೆ. ಪ್ರಾಚ್ಯ ವಸ್ತು ಸಂಶೋಧಕರ ಅಭಿಪ್ರಾಯದಂತೆ ಈ ದೇವಾಲಯವು ಸುಮಾರು ೮-೯ ನೂರು ವರ್ಷಗಳ ಹಿಂದಿನದ್ದಿರಬಹುದೆಂದು ಊಹಿಸಲಾಗಿದೆ.

ಈ ದೇವಾಲಯವನ್ನು ಅಷ್ಟ ಕೋನಾಕೃತಿಯ ಜಗಲಿಯ ಮೇಲೆ ಕಟ್ಟಲಾಗಿದೆ. ಇದು ಕಲ್ಯಾಣದ ಚಾಲುಕ್ಯರ ಶಿಲ್ಪ ಶೈಲಿ ಕಟ್ಟಡವಾಗಿದ್ದು, ಸಂಪೂರ್ಣ ಕಲ್ಲಿನಲ್ಲಿಯೇ ನಿರ್ಮಿತವಾಗಿದ್ದು, ಉತ್ತರಾಭಿಮುಖವಾಗಿದೆ.

ಜಂಬುಕೇಶ್ವರ ದೇವಾಲಯವು ತ್ರಿಕೂಟೇಶ್ವರವಾಗಿದ್ದು, ಮೂರು ಗರ್ಭ ಗೃಹಗಳು ಹಾಗೂ ಮುಂಭಾಗದಲ್ಲಿ ಅರ್ಧ ಮಂಟಪಗಳನ್ನು ಹೊಂದಿದೆ. ಮಧ್ಯದಲ್ಲಿ ವಿಶಾಲವಾದ ನವರಂಗವಿದ್ದು, ನಾಲ್ಕು ಚತುರ್ಭುಜಾಕಾರದ ಕಲ್ಯಾಣ ಚಾಲುಕ್ಯ ಶೈಲಿ ಸ್ಥಂಬಗಳಿವೆ. ಇದರ ಮಧ್ಯದಲ್ಲಿ ಜಂಬುಕೇಶ್ವರನಿಗೆ ಮುಖ ಮಾಡಿ ಕುಳಿತಿರುವ ನಂದಿಯ ಮೂರ್ತಿ ಇದೆ. (ಮೂಲ ಗರ್ಭ ಗೃಹ ಚೌಕಾರವಾಗಿದ್ದು, ಪ್ರಾಚೀನ ಪಾಣಿ ಪೀಠದ ಮೇಲೆ ಜಂಬುಕೇಶ್ವರ ಲಿಂಗವನ್ನು ಪ್ರತಿಸ್ಥಾಪಿಸಲಾಗಿದೆ.) ಗರ್ಭಗೃಹದ ಛತ್ತಿನಲ್ಲಿರುವ ಭುವನೇಶ್ವರ ಅರ್ಧ ಗೋಲಾಕಾರದ ಅಲಂಕಾರವು ಚಾಲುಕ್ಯ ಶೈಲಿಯಲ್ಲಿದೆ. ಅರ್ಧ ಮಂಟಪದ ಬಾಗಿಲುವಾಡವು ಚಾಲುಕ್ಯ ಶೈಲಿಯ ಅಲಂಕಾರವನ್ನು ಹೊಂದಿದ್ದು ಲಲಾಟದಲ್ಲಿ ಗಜಲಕ್ಷ್ಮೀಯ ಬಿಂಬವಿದೆ. ಅರ್ಧ ಮಂಟಪದಲ್ಲಿ ದೇವಕೋಷ್ಠಗಳಿದ್ದು, ಒಂದರಲ್ಲಿ ದ್ವಿಬಾಹು ಗಣೇಶನ ಶಿಲಾ ಮೂರ್ತಿ ಇದೆ. ಬಲಭಾಗದ ಗರ್ಭಗೃಹದಲ್ಲಿ ರಾಮೇಶ್ವರ ಲಿಂಗವಿದ್ದು ಮುಂಭಾಗದಲ್ಲಿ ಅರ್ಧ ಮಂಟಪವಿದೆ. ಎಡ ಭಾಗದ ಗರ್ಭ ಗೃಹದಲ್ಲಿ ಈಶ್ವರ ಲಿಂಗವಿದೆ. ಇದರ ಮುಂಭಾಗದಲ್ಲಿಯೂ ಅರ್ಧ ಮಂಟಪವಿದ್ದು, ಇಕ್ಕೆಲದಲ್ಲಿ

ದೇವಕೋಷ್ಠವಿದ್ದು, ಯಾವುದೇ ಶಿಲ್ಪಗಳಿಲ್ಲ. ನವರಂಗದ ಮುಂಭಾಗದಲ್ಲಿ ಕಕ್ಷಾಸನವಿರುವ ಮುಖಮಂಟಪವಿದ್ದು, ಅದರಲ್ಲಿರುವ ಕಿರುಸ್ಥಂಬಗಳು ಚಾಲುಕ್ಯ ಶೈಲಿಯನ್ನು ಹೋಲುತ್ತವೆ.

ಇದು ಜಾಗ್ರತಾ ದೇವಸ್ಥಾನವಾಗಿದ್ದು, ಜಮಖಂಡಿಯ ನಗರವಾಸಿಗಳಲ್ಲದೇ ಸುತ್ತಮುತ್ತಲಿನ ಗ್ರಾಮದ ಜನರು ಜಂಬುಕೇಶ್ವರನಿಗೆ ಭಕ್ತಿ ಭಾವದಿಂದ ನಡೆದುಕೊಳ್ಳುತ್ತಿದ್ದರಂತೆ ಈ ದೇವರ ಪೂಜಾ ವಿಧಿವಿದಾನಗಳನ್ನು ಜಂಗಮ ಪೂಜಾರಿಗಳು ಮತ್ತು ಬ್ರಾಹ್ಮಣರ ಜೋಯಿಸರೀರ್ವರು ನೆರವೇರಿಸಿಕೊಂಡು ಬಂದಿದ್ದಾರೆ. ಜಂಗಮರು ಅರ್ಚನ, ಪೂಜೆ (ಪತ್ರಿ, ಪುಷ್ಪ, ಫಲಾರ್ಚನೆ ಮೂದಲಾದವುಗಳನ್ನು ಮಾಡುವದು) ಯನ್ನು ಮಾಡುತ್ತಾರೆ. ಬ್ರಾಹ್ಮಣ ಜೋಯಿಸರು ಅಲಂಕಾರ ಪೂಜೆ, ಅಭಿಷೇಕ, ಅಹ್ವಾನೆ, ಕಲಾಕರ್ಷಣೆ ಹೋಮ ಹವನ, ಕೈಂಕರ್ಯ ಸೇವೆ ಮೊದಲಾದ ಭಕ್ತಿ ಸೇವೆಯನ್ನು ಮಾಡುತ್ತಾರೆ. ಈ ದೇವಸ್ಥಾನದ ಉತ್ಸವವು ಶ್ರಾವನ ಮಾಸದಲ್ಲಿ ಅತ್ಯಂತ ವೈಭವದಿಂದ ಆಚರಿಸಲಾಗುತ್ತಿತ್ತೆಂದು ಹಿರಿಯರು ಹೇಳುತ್ತಾರೆ. ಉತ್ಸವದಲ್ಲಿ ಪುಣ್ಯ ವಧುಗಳಿಂದ ನೃತ್ಯ ಸಂಗೀತ ಸೇವೆ, ಬಾಜಾಭಜಂತ್ರಿ ಕರಡಿ ವಾದನ, ಸಂಬಾಳವಾದನ, ಜಾಗಟೆ, ನಗಾರಿ, ವಾದನ ಮೊದಲಾದ ಕಾರ್ಯಕ್ರಮಗಳು ಅತೀ ವಿಜ್ರಂಭಣೆಯಿಂದ ನಡೆಯುತ್ತಿದ್ದವು. ಹೀಗೆ ಈ ದೇವರಿಗೆ ವಿವಿಧ ರೀತಿಯ ಭಕ್ತಿ ಸೇವೆಯನ್ನು ಸಲ್ಲಿಸುವವರಿಗೆ ಸುಮಾರು ಒಂದು ನೂರು ಎಕರೆ ಭೂಮಿಯನ್ನು ದತ್ತಿಯಾಗಿ ಕೊಡಲಾಗಿತ್ತೆಂದು ಹೇಳುತ್ತಾರೆ. ಜಮೀನುಗಳು ಇಂದಿಗೂ ಜಮಖಂಡಿಯ ಸರಹದ್ದಿನಲ್ಲಿವೆ.[8]

ಕಲ್ಮೇಶ್ವರ ದೇವಾಲಯ :

ಇದೊಂದು ಪ್ರಾಚೀನ ಶೈವ ದೇವಾಲಯವು, ಜಂಬುಕೇಶ್ವರ ದೇವಾಲಯದಿಂದ ಸ್ವಲ್ಪ ದೂರದಲ್ಲಿ ಉತ್ತರ ದಿಕ್ಕಿಗಿದ್ದು, ಅದೇ ಮಾದರಿಯಲ್ಲಿ ಕಟ್ಟಲ್ಪಟ್ಟಿದೆ. ಇದರ ಪ್ರವೇಶ ದ್ವಾರವು ಉತ್ತರಾಭಿಮುಖವಾಗಿದೆ. ಒಳಗೆ ಪ್ರವೇಶಿಸಬೇಕಾದರೆ ೮-೧೦ ಪಾವಟಿಗೆಗಳನ್ನು ಇಳಿದು ಹೋಗಬೇಕಾಗುತ್ತದೆ. ಇದರ ಮೇಲಿಂದ ಇದು ಜಂಬುಕೇಶ್ವರ ದೇವಾಲಯದ ಸಮಕಾಲೀನ ಗುಡಿಯೆಂದು ತಿಳಿದು ಬರುತ್ತದೆ. ವಾಸ್ತುಶಿಲ್ಪದ ದೃಷ್ಟಿಯಿಂದ ಈ ದೇವಾಲಯವು ರಾಷ್ಟ್ರಕೂಟರ ಮತ್ತು ಕಲ್ಯಾಣ ಚಾಲುಕ್ಯರ ಪ್ರಾರಂಭದ ಶೈಲಿಯನ್ನು (ವ್ಯಕ್ತಪಡಿಸುತ್ತದೆ) ಹೋಲುತ್ತದೆ. ಇದು ತ್ರಿಕೂಟೇಶ್ವರವಾಗಿದ್ದು, ಮೂರು ಗರ್ಭಗೃಹಗಳನ್ನು ಹೊಂದಿದೆ. ಎಲ್ಲ ಗರ್ಭಗೃಹದ ಮುಂಭಾಗದಲ್ಲಿ ಅರ್ಧ ಮಂಟಪಗಳಿದ್ದು, ಮಧ್ಯದಲ್ಲಿ ಕೇಂದ್ರೀಯ ವಿಶಾಲವಾದ ನವರಂಗವಿದೆ. ಮೂರು ಗರ್ಭಗೃಹಗಳಲ್ಲಿಯೂ ಶಿವಲಿಂಗಗಳಿವೆ. ಎದುರಿಗೆ ಕಲ್ಮೇಶ್ವರ, ಬಲಭಾಗದಲ್ಲಿ ಸಂಗಮೇಶ್ವರ, ಎಡಭಾಗದಲ್ಲಿ ಸೋಮೇಶ್ವರನೆಂಬ ಜಲಾರಿ ಶಿವಲಿಂಗಗಳಿವೆ. ಮಧ್ಯಭಾಗದಲ್ಲಿದ್ದ ಮೂಲ ಗರ್ಭಗೃಹದ ಮುಂಭಾಗದಲ್ಲಿರುವ ಅರ್ಧ ಮಂಟಪವು ಅಲಂಕೃತ ಬಾಗಿಲುಗಳನ್ನು ಹೊಂದಿದೆ. ಇದರ ಇಕ್ಕೆಲಗಳಲ್ಲಿ ದೇವಕೋಷ್ಠಕಗಳಿದ್ದು, ಅವುಗಳಲ್ಲಿ ಒಂದರಲ್ಲಿ ಗಣೇಶನ ಶಿಲ್ಪವಿದೆ. ಬಲಭಾಗದ ದೇವಕೋಷ್ಠದ ಮೇಲ್ಭಾಗದಲ್ಲಿ ಅಜಂತಾ ಮಾದರಿಯ ಕಿರು ಶಿಖರವಿದೆ. ನವರಂಗದ ನಾಲ್ಕು ಅಲಂಕೃತ ಸ್ಥಂಭಗಳು ವೃತ್ತಾಕಾರವಾಗಿದ್ದು ಮಧ್ಯದಲ್ಲಿ ಏಕಶಿಲಾ ನಂದಿಯ ಶಿಲ್ಪವಿದೆ. ನವರಂಗದ ಛತ್ತಿನಲ್ಲಿ ಆಳವಾದ ಭುವನೇಶ್ವರಿ ಇದ್ದು, ಮಧ್ಯದಲ್ಲಿ ಕಮಲದ ಹೂವಿನ ಅಲಂಕಾರವಿದೆ. ಅರ್ಧ ಮಂಟಪದ ಎಡ ಭಾಗದ ಪ್ರವೇಶದ್ವಾರವು ಅಲಂಕೃತವಾದ

ಬಾಗಿಲುವಾಡವನ್ನು ಹೊಂದಿದ್ದು, ಇಕ್ಕೆಲುಗಳಲ್ಲಿರುವ ದೇವಕೋಷ್ಠಕಗಳಿವೆ ಒಂದರಲ್ಲಿ ಸಪ್ತಮಾತ್ರಿಕೆಯರ ಜೋಡು ಶಿಲ್ಪವಿದೆ. ಎರಡು ಅರ್ಧ ಮಂಟಪದ ಬಾಗಿಲು ಒಳಭಾಗದಲ್ಲಿ ವೃತ್ತಾಕಾರದ ಎರಡು ಸ್ಥಂಬಗಳಿವೆ. ಬಲಭಾಗದ ಅರ್ಧ ಮಂಟಪದ ಬಾಗಿಲುವಾಡವು ಅಲಂಕೃತವಾಗಿದ್ದು, ಒಳಭಾಗದಲ್ಲಿರುವ ಗರ್ಭಗೃಹದಲ್ಲಿ ಪ್ರಾಚೀನ ಲಕ್ಷಣ ಉಳ್ಳ ಶಿವಲಿಂಗವಿದೆ. ನವರಂಗದ ಮುಂಭಾಗದಲ್ಲಿ ಅಲಂಕೃತ ದೇವಕೋಷ್ಠಕ ಒಂದರಲ್ಲಿ ನಾಗಶಿಲ್ಪವಿದೆ. ಇನ್ನೊಂದು ಖಾಲಿ ಇದೆ. ಇದರ ಮುಂಭಾಗದಲ್ಲಿರುವ ಮುಖಮಂಟಪವು ಕಕ್ಷಾಸನವನ್ನು ಹೊಂದಿದ್ದು, ವೃತ್ತಾಕಾರದ ನಾಲ್ಕು ಕಿರು ಸ್ಥಂಬಗಳನ್ನು ಹೊಂದಿದೆ. ಮುಖಮಂಟಪದ ಪ್ರವೇಶ ದ್ವಾರದ ಇಕ್ಕೆಲುಗಳಲ್ಲಿ ರಾಷ್ಟ್ರಕೂಟ ಶೈಲಿಯನ್ನು (ವ್ಯಕ್ತಪಡಿಸುವ) ಹೋಲುವ ಕಳಶಗಳ ಅಲಂಕಾರವಿದೆ.

ಈ ದೇವಸ್ಥಾನದ ಅರ್ಚಕರು (ಬ್ರಾಹ್ಮಣ) ಜೋಶಿ ಮನೆತನದವರು ಇವರು ಕಳೆದ ೨-೩ ವರ್ಷ ತೆಲೆಮಾರಿನಿಂದ ಅರ್ಚಕರಾಗಿ ದೇವಾಲಯದ ಪೂಜಾ ಕಾರ್ಯಾಕ್ರಮವನ್ನು ನಡೆಸುತ್ತಾ ಬಂದಿದ್ದಾರೆ. ಈ ದೇವಾಲಯಕ್ಕೆ ಜಮಖಂಡಿ ಹದ್ದಿನಲ್ಲಿ ಸುಮಾರು ೪೪ ಎಕರೆ ಭೂಮಿಯು ದತ್ತಿಯಾಗಿ ಬಂದಿದ್ದು, ಇದು ಅವು ಟೇನನ್ಸಿ ಕಾಯ್ದೆಯ ಮೇರೆಗೆ ರೈತರ ಸ್ವಾಧೀನವಾಗಿವೆ. ಅರ್ಚಕರಿಗೆ ಈಗ ಸರಕಾರದಿಂದ ಪ್ರತಿ ವರ್ಷ ೧೨೦೦=೦೦ ರೂ. (ಹನ್ನೆರಡುನೂರು) ವರ್ಷಾಸನ ಬರುತ್ತಿದ್ದು, ಅದರಿಂದ ದೇವಸ್ಥಾನದ ಪೂಜಾ ವಿಧಿವಿಧಾನಗಳನ್ನು ನಡೆಸಿಕೊಂಡು ಬರಲಾಗುತ್ತದೆ.

ಮಠ ಪ್ರಭು ದೇವಾಲಯ

ಇದು ಪ್ರಾಚೀನ ಶೈವ ದೇವಾಲಯವು. ಇದು ಕಲ್ಮೇಶ್ವರ ದೇವಾಲಯದಿಂದ ಸ್ವಲ್ಪ ದೂರವಿದ್ದು ಅದೇ ಮಾದರಿಯಲ್ಲಿಯೇ ಕಟ್ಟಲ್ಪಟ್ಟಿದೆ. ದೇವಾಲಯವನ್ನು ಪ್ರವೇಶಿಸಿಬೇಕಾದರೆ ೮-೧೦ ಪಾವಟಿಗೆಗಳನ್ನು ಇಳಿದು, (ಜಂಬುಕೇಶ್ವರ ದೇವಾಲಯದಂತೆ) ಹೋಗಬೇಕಾಗುತ್ತದೆ. ಗಾತ್ರದಲ್ಲಿ ಇದು ಚಿಕ್ಕದಾಗಿದ್ದು, ದಕ್ಷಿಣಾಭಿಮುಖವಾಗಿದೆ. ಇದು ರಾಷ್ಟ್ರಕೂಟರ ಮತ್ತು ಕಲ್ಯಾಣ ಚಾಲುಕ್ಯರ ವಾಸ್ತುಶಿಲ್ಪದ ಮಾದರಿಯನ್ನು ಹೋಲುತ್ತದೆ. ಇದು ತ್ರಿಕೂಟೇಶ್ವರ ವಾಗಿದ್ದು, ಮೂರು ಗರ್ಭ ಗುಡಿಗಳನ್ನು ಹೊಂದಿದೆ ಮಧ್ಯದಲ್ಲಿ ಗರ್ಭ ಗುಡಿಯಲ್ಲಿ ಪ್ರಭು ದೇವರ ಜಲಾರಿ ಲಿಂಗವಿದೆ. ಗುಡಿಯ ಅಂತರಾಳದ (ಮುಂಭಾಗ) ಮಧ್ಯದಲ್ಲಿ ನಂದಿ ಮೂರ್ತಿ ಇದೆ. ಮೊದಲಿದ್ದ ನಂದಿಯ ಮೂರ್ತಿಯು ಭಿನ್ನವಾಗಿ ಹೋಗಿದ್ದರಿಂದ ಇತ್ತಿಚಿಗೆ ಹೊಸ ನಂದಿಯ ಮೂರ್ತಿಯನ್ನು ಸ್ಥಾಪಿಸಿದಂತಿದೆ, ಗುಡಿ ಅಂತರಾಳದ ಎಡ-ಬಲಭಾಗದಲ್ಲಿ ಗರ್ಭ ಗುಡಿಯಲ್ಲಿದ್ದ ಶಿವಲಿಂಗದ ಮೂರ್ತಿಗಳು ಕಾಣೆಯಾಗಿದ್ದು, ಕೇವಲ ಜಲಾರಿ ಆಕಾರದ ಆಕೃತಿ ಮಾತ್ರ ಇದೆ. ಗುಡಿಯ ಮುಂಭಾಗವು ಜೀರ್ಣಾವಸ್ಥೆಯಲ್ಲಿದೆ. ಮೊದಲಿದ್ದ ಕಲ್ಲಿನ ಕಂಬಗಳನ್ನು ಇತ್ತೀಚಿನ ದುರಸ್ತಿ ಮಾಡಿದ್ದು, ಕಂಡು ಬರುತ್ತದೆ. ದೇವಾಲಯದ ಸುತ್ತಲೂ ಸ್ವಲ್ಪವು ಸ್ಥಳಾವಕಾಶವಿಲ್ಲ. ಕಾರಣ ಅಲ್ಲಿ ವಾಸಿಸುವವರು ಗುಡಿಯ ಜಾಗೆಯನ್ನು ಅಕ್ರಮಿಸಿ ತಮ್ಮ ತಮ್ಮ ಮನೆಗಳನ್ನು ನಿರ್ಮಿಸಿಕೊಂಡಂತೆ ಕಾಣುತ್ತದೆ. ಹೀಗಾಗಿ ಈ ದೇವಾಲಯವು ಅತೀ ಇಕ್ಕಟ್ಟಾದ ಸ್ಥಳದಲ್ಲಿ ಸಿಕ್ಕಿಕೊಂಡಿದೆ. ಆದರಿಂದ ದೇವಾಲಯದ ಮೂಲ ಸ್ವರೂಪವನ್ನು ಗುರುತಿಸದಂತಾಗಿದೆ. ಕಳೆದ ಎರಡು-ಮೂರು ತಲೆಮಾರಿನಿಂದ ಮನಗೂಳಿ ಮನೆತನದ ಆಚಾರ್ಯರು ಈ ದೇವಸ್ಥಾನದ ಅರ್ಚಕರಾಗಿ ಪೂಜೆ ಪುನಸ್ಕಾರವನ್ನು ಮಾಡುತ್ತಾ ಬಂದಿರುತ್ತಾರೆ. ಈ ದೇವಸ್ಥಾನಕ್ಕೆ ಹತ್ತು ಎಕರೆ ಭೂಮಿಯನ್ನು ಉಂಬಳಿ ಹಾಕಿ ಕೊಡಲಾಗಿದೆ. ಆ ಭೂಮಿಯು ಜಮಖಂಡಿ

ಹದ್ದಿನಲ್ಲಿದ್ದು, (ಮೈಗೂರ ರಸ್ತೆಯಲ್ಲಿದೆ) ಅದಕ್ಕೆ ಹಾರೂನ ಪಟ್ಟಿ (ಬ್ರಾಹ್ಮಣ ಹೊಲ) ಎಂದು ಕರೆಯುತ್ತಾರೆ. ಎಲ್ಲ ಧರ್ಮಿಯರು ಈ ದೇವರನ್ನು ಆರಾಧಿಸುತ್ತಾರೆ. ಇದು ಜಾಗ್ರತಾ ದೇವಸ್ಥಾನವಾಗಿರುವದರಿಂದ ಅನೇಕ ಭಕ್ತರು ದೇವಾಲಯಕ್ಕೆ ತಮ್ಮ ಭಕ್ತಿಯ ಕಾಣಿಕೆಯನ್ನು ಸಲ್ಲಿಸುತ್ತಿದ್ದರಿಂದ ದೇವಾಲಯದ ಜೀರ್ಣೋದ್ಧಾರದ ಕಾರ್ಯಗಳು ನಡೆಯುತ್ತಾ ಬಂದಿವೆ ಎಂದು ಹಿರಿಯ ಅರ್ಚಕರು ಹೇಳುತ್ತಾರೆ.[೧೧]

ಗಣಪತಿ ಮಂದಿರ :

ಯೋಗನಾರಾಯಣ ಗುಡಿಯಿಂದ (ಪೂರ್ವಕ್ಕೆ) ಸ್ವಲ್ಪ ಅಂತರದ ಮೇಲೆ ಗಣಪತಿ ದೇವಾಲಯ ಇದೆ. ಇದು ಉತ್ತರಾಭಿಮುಖವಾಗಿದ್ದು, ಇದರ ಪ್ರವೇಶ ದ್ವಾರವು ಅತ್ಯಂತ ನುಣುಪಾಗಿ ಹೊಡೆದ ಕೆಂಪು ಕಲ್ಲುಗಳಿಂದ ಕಟ್ಟಲಾಗಿದೆ. ಪ್ರವೇಶ ದ್ವಾರದ ಮೇಲ್ಭಾಗದಲ್ಲಿ ರಂಗಮಂದಿರವಿದ್ದು ಅಲ್ಲಿ ಪೂಜಾ ಸಮಾರಂಭದಲ್ಲಿ ಮಂಗಲ ವಾದ್ಯಗಳನ್ನು ನುಡಿಸುವದು ಮತ್ತು ಸಂಗೀತ ಸೇವೆ ಮಾಡುವದು ಮೊದಲಾದ ಕಾರ್ಯಕ್ರಮಗಳು ನಡೆಯುತ್ತಿದ್ದವು. ಸಮಗ್ರ ದೇವಾಲಯವು ಷಟ್‌ಕೋನಾಕೃತಿಯ ಕಲ್ಲಿನ ಜಗುಲಿಯ ಮೇಲೆ ನಿರ್ಮಿಸಲಾಗಿದೆ. ಗರ್ಭ ಗುಡಿಯ ಮಧ್ಯದಲ್ಲಿ ಕಪ್ಪು ಶಿಲೆಯ ಪ್ರಭಾವಳಿಯ ಮಧ್ಯದಲ್ಲಿ ಸಂಗಮವರಿ ಕಲ್ಲಿನ ಗಣಪತಿ ಮೂರ್ತಿಯನ್ನು ಪ್ರತಿಸ್ಥಾಪಿಸಲಾಗಿದೆ. ಗರ್ಭ ಗುಡಿಯ ಒಳಭಾಗವು ಚೌಕಾಕೃತಿಯ ಚಾವಣಿಗಲ್ಲಿನಿಂದ ಕಟ್ಟಲಾಗಿದೆ. ಅದರ ಮೇಲ್ಭಾಗವನ್ನು ಪಾವಟಿಗೆಯ ಆಕಾರದಂತೆ ಕಟ್ಟಿ ಮೇಲೆ ಗೋಲಾಕಾರದ ಶಿಖರವನ್ನು ನಿರ್ಮಿಸಲಾಗಿದೆ. ಗರ್ಭ ಗುಡಿಯ ಅಂತರಾಳದ (ಮುಂಭಾಗದ) ಕಂಬಗಳನ್ನು ಮತ್ತು ಮೇಲ್ಭಾಗವನ್ನು ಇತ್ತೀಚಿಗೆ ಜೀರ್ಣೋದ್ಧಾರ ಮಾಡಿದಂತಿದೆ. ಇದನ್ನು ಸುಮಾರು ೧೮ ಶತಮಾನದಲ್ಲಿ ಕಟ್ಟಿರಬಹುದೆಂದು ಊಹಿಸಬಹುದು. ಕಳೆದ ಎರಡು–ಮೂರು ತಲೆಮಾರಿನಿಂದ ಚೀಳಗಿ ಮನೆತನದ ಆಚಾರ್ಯರೇ ಈ ದೇವಾಲಯದ ಅರ್ಚಕರಾಗಿ ಕಾರ್ಯ ನಿರ್ವಹಿಸುತ್ತಾ ಬಂದಿದ್ದಾರೆ. ಈ ದೇವಾಲಯದ ಪ್ರಯುಕ್ತ ಜಮಖಂಡಿ ಈ ಓಣಿಗೆ ಗಣಪತಿ ಗಲ್ಲಿ ಎಂದು ಕರೆಯುತ್ತಾರೆ ಗಣಪತಿಯು ಎಲ್ಲ ಧರ್ಮಿಯರ ಆರಾಧ್ಯ ದೇವತೆಯಾಗಿದ್ದರಿಂದ ಬಹುಸಂಖ್ಯಾತ ಜನರು ಈ ದೇವರಿಗೆ ಭಕ್ತಿ ಶ್ರದ್ಧೆಯಿಂದ ನಡೆದುಕೊಳ್ಳುತ್ತಾ ಬಂದಿದ್ದಾರೆ. ಇತ್ತೀಚಿಗೆ ದೇವಾಲಯದ ಹಿಂಬದಿಗೆ ಇದ್ದ ಸ್ಥಳದಲ್ಲಿ ಸಭಾ ಮಂಟಪವನ್ನು ನಿರ್ಮಿಸಿದ್ದು, ಅಲ್ಲಿ ಮಂಗಲ ಕಾರ್ಯಗಳು ಸಭೆ ಸಮಾರಂಭಗಳು ಸಂಗೀತ ಮೇಳಗಳು ನಡೆಯುತ್ತಿರುತ್ತವೆ.[೧೨]

ಮಲ್ಲಿಕಾರ್ಜುನ ದೇವಾಲಯ (ಹಳೆಯ ಗುಡಿ) :

ಇದು ಜಮಖಂಡಿ ನಗರದಲ್ಲಿದ್ದ ಪುರಾತನ ಶೈವದೇವಾಲಯಗಳಲ್ಲಿ ಒಂದಾಗಿದೆ. ಇದು ನಾವು ಮಲ್ಲಿಕಾರ್ಜುನ ದೇವಾಲಯದ ಪ್ರಾಂಗಣವನ್ನು ಪ್ರವೇಶಿಸಿದಾಗ ನಮಗೆ ಗೋಚರವಾಗುವದು ಉತ್ತಾರಭಿಮುಖವಾಗಿ ದೇವಾಲಯವು ಮಾತ್ರ ಆದರೆ ಇದಕ್ಕಿಂತಲೂ ಪುರಾತನ ದೇವಾಲಯವು ಅದರ ಹಿಂಬದಿಗಿದ್ದು ಪೂರ್ವಾಭಿಮುಖವಾಗಿದೆ. ಈ ದೇವಾಲಯವನ್ನು ಪ್ರವೇಶಿಸಬೇಕಾದರೆ ೫–೬ ಪಾವಟಿಗೆಗಳನ್ನು ಏರಿ ಮೇಲೆ ಬರಬೇಕಾಗುತ್ತದೆ. ಅಂದರೆ ಈ ಗುಡಿಯನ್ನು ನೆಲದಿಂದ ಅಷ್ಟು ಎತ್ತರದ ಮೇಲಿಂದ ಕಟ್ಟಿದ್ದಾರೆ ಎಂದು ತಿಳಿದುಬರುತ್ತದೆ.

ಈ ದೇವಸ್ಥಾನದ ಗರ್ಭ ಗುಡಿಯ ಬಾಗಿಲು ಪೂರ್ವ ದಿಕ್ಕಿಗಿದ್ದು, ಒಳಭಾಗದ ಕಟ್ಟೆಯ ಮೇಲೆ ಕಂಚು ಹಿತ್ತಾಳೆಯ ದೇವತಾ ಮೂರ್ತಿಗಳಿವೆ ಶಿವನ ನಂದಿ ವಾಹನನಾಗಿ ಕುಳಿತ ಕಂಪಿನ ಮೂರ್ತಿ ಇದ್ದು ಹಿಂದೆ ಏಳು ಹೆಡೆ ಸರ್ಪದ ಸುಂದರವಾದ ಪ್ರಭಾವಳಿ ಇದೆ ಅದರ ಒಳಭಾಗದ ಛಾವಣಿಯನ್ನು ಹೊಡೆದ ಕಲ್ಲುಗಳನ್ನು ಕಮಾನಿನಾಕಾರವಾಗಿ ಜೋಡಿಸಿ ಗಚ್ಚಿನಿಂದ ಕಟ್ಟಲಾಗಿದೆ. ಗರ್ಭಗುಡಿಯ ಮುಂಭಾಗವು ಚೌರಸಾಕೃತಿಯ ಕಲ್ಲಿನ ಕಂಬಗಳ ಮೇಲೆ ಕಮಾನಿನಾಕಾರದ ಕಟ್ಟಡ ಮೇಲೆ ನಿಂತಿದೆ. ಗುಡಿಯ ಮುಂಭಾಗದ ಗೋಡೆಯ ಮೇಲೆ ಪಗಡೆಯಾಕಾರದ ಕಲ್ಲುಗಳನ್ನು ಜೋಡಿಸಲಾಗಿದೆ. ಈ ದೇವಾಲಯವನ್ನು ಸುಮಾರು ೧೭-೧೮ ನೇ ಶತಮಾನದಲ್ಲಿ ಕಟ್ಟಿಸಿರಬಹುದೆಂದು ಹಿರಿಯರು ಹೇಳುತ್ತಾರೆ. ಈ ದೇವಾಲಯಕ್ಕೆ ಪ್ರದಕ್ಷಿಣೆ ಹಾಕಲು ಸ್ಥಳಾವಕಾಶ ಇಲ್ಲದ್ದರಿಂದ ಪುನಃ ಉತ್ತರಾಭಿಮುಖವಾಗಿ ಹೊಸ ದೇವಾಲಯವನ್ನು ಕಟ್ಟಿಸಲಾಯಿತೆಂದು ಹಿರಿಯ (ಅರ್ಚಕರು) ರು ಹೇಳುತ್ತಾರೆ. ಈಗಿದ್ದ ಮಲ್ಲಿಕಾರ್ಜುನ ದೇವಾಲಯವು ಕಲ್ಲಿನ ಜಗುಲಿ ಮೇಲೆ ಕಟ್ಟಲಾಗಿದೆ. ಸಮಗ್ರ ದೇವಾಲಯದ ಹೊರಭಾಗವನ್ನು ನುಣಪಾಗಿ ಹೊಡೆದ ಕೆಂಪುಕಲ್ಲಿನಿಂದ ಕಟ್ಟಿದ್ದರಿಂದ ಅತೀ ಸುಂದರವಾಗಿದೆ. ಗರ್ಭ ಗುಡಿಯ ಮಧ್ಯದಲ್ಲಿ ಜಲಾರಿ ಈಶ್ವರ ಲಿಂಗ ಅದರ ಮುಂಭಾಗದಲ್ಲಿ ನಂದಿಯ ಮೂರ್ತಿ ಇದೆ. ಗರ್ಭ ಗುಡಿಯ ಒಳಭಾಗವನ್ನು (ನಕ್ಷತ್ರಾಕಾರ) ಕಮಾನಿನಾಕಾರವಾಗಿ ಕಲ್ಲುಗಳನ್ನು ಜೋಡಿಸಿ ಕಟ್ಟಲಾಗಿದೆ. ಹೊರ ಬದಿಗೆ ಪಾವಟಿಗೆಯಾಕಾರದಂತೆ ಮೇಲೆ ಗೋಲಾಕಾರದ ಶಿಖರವನ್ನು ನಿರ್ಮಿಸಿ ಸುಂದರವಾದ ಹಿತ್ತಾಳೆಯ ಕಳಶವನ್ನು ಇಡಲಾಗಿದೆ.

ಗರ್ಭ ಗುಡಿಯ ಮುಖಮಂಟಪವು (ಮುಂಭಾಗವು) ಚೌರಸಾಕೃತಿಯ (೧೨) ಕಲ್ಲಿನ ಕಂಬಗಳ ಮೇಲೆ ನಿಂತಿದೆ. ದೇವಾಲಯದ ಮುಂಭಾಗದ ಗೋಡೆಯ ಮೇಲೆ ಎಡಬಲಕ್ಕೆ ನಂದಿಯ ಮೂರ್ತಿಗಳಿದ್ದು ಮಧ್ಯದಲ್ಲಿ ಮುಕ್ಕಾಲು ಭೃಂಗಿಯ ಮೂರ್ತಿ ಇದೆ (ಭೃಂಗಿಯ ಶಿವ ಒಡ್ಡೋಲಗದಲ್ಲಿ ಸಂಗೀತ ಸೇವೆಯನ್ನು ಮಾಡುತ್ತಿದ್ದನ್ನು) (ಈ ಭೃಂಗಿಯ ಮೂರ್ತಿಯು ಕಡಪಟ್ಟಿ ದೊಡ್ಡ ಬಸವೇಶ್ವರ ದೇವಾಲಯದ ಮುಂಭಾಗದಲ್ಲಿ ಮತ್ತು ಜಮಖಂಡಿ ಪೇಟೆಯಲ್ಲಿದ್ದ ಕಾಡಸಿದ್ದೇಶ್ವರ ದೇವಾಲಯದ ಮುಂಬದಿಗೆ ಇದ್ದದ್ದು ಕಂಡು ಬರುತ್ತದೆ.)

ಈ ದೇವಸ್ಥಾನದ ಮುಂದೆ ಸ್ವಲ್ಪ ಅಂತರದ ಮೇಲೆ ಬ್ರಹ್ಮ ದೇವರ ಚಿಕ್ಕ ಗುಡಿ ಇದ್ದು, ಅದರ ಮುಂದೆ ಎತ್ತರವಾದ ಕಲ್ಲಿನ ದೀಪ ಸ್ಥಂಬವಿದೆ. (ಆಲಗಂಬ) ಅಲ್ಲದೇ ಪುರಾತನವಾದ ಅಶ್ವತ್ಥ ವೃಕ್ಷವಿದೆ. ಸುಮಾರು ಎರಡು-ಮೂರು ತಲೆಮಾರಿನಿಂದ ಅರ್ಚಕರು ಗಣಾಚಾರಿ ಎಂಬ ಜಂಗಮ ಮನೆತನದವರಿದ್ದು ಅವರೇ ಈ ದೇವಸ್ಥಾನದ ಪೂಜೆ ಪುರಸ್ಕಾರಗಳನ್ನು ನೆರವೇರಿಸುತ್ತಾ ಬಂದಿರುತ್ತಾರೆ.

ಸುಮಾರು ೧೯ ನೇ ಶತಮಾನದಲ್ಲಿ ಶ್ರೀಶೈಲದ ಜಗದ್ಗುರುಗಳಿಂದ ಈ ಹೊಸ ದೇವಾಲಯವು ಸ್ಥಾಪಿತವಾಯಿತೆಂದು ಹಿರಿಯರು ಅರ್ಚಕರು ಹೇಳುತ್ತಾರೆ. ಈ ಹೊಸ ದೇವಸ್ಥಾನವನ್ನು ಕಟ್ಟಿಸಿದವರು (ಶಿವಸಿಂಪಿಗ ಜಾತಿಯ) ತುಂಗಳ ಸಾಹುಕಾರ ಮನೆತನದವರೆಂದೂ ಮತ್ತು ಹಳೆಯ (ಮಲ್ಲಿಕಾರ್ಜುನ) ದೇವಸ್ಥಾನವನ್ನು ಕಟ್ಟಿಸಿವದರು ಕೊಣ್ಣೂರು ದೇಸಾಯಿ ಮನೆತನದವರೆಂದೂ ಅರ್ಚಕರ ಪೂರ್ವಜರು ಹೇಳುತ್ತಿದ್ದರೆಂದು ಇಂದಿನ ಗಣಾಚಾರಿಯವರು ಹೇಳುತ್ತಾರೆ.೧೨

ಮಲ್ಲಿಕಾರ್ಜುನ ಮಂಗಲ ಕಾರ್ಯಾಲಯ :

ಈ ಕಾರ್ಯಾಲಯವು ಇಂದಿನ ಮಲ್ಲಿಕಾರ್ಜುನ ದೇವಸ್ಥಾನದ ಬಲಗಡೆಯ ಹಿಂಬಾಗದಲ್ಲಿದೆ. ಇದು ಒಂದು ಪುರಾತನ ಮಾದರಿಯ ಕಟ್ಟಡವಾಗಿದ್ದು, ಕಟ್ಟೆಗೆಯ ಕಂಬ, ತೊಲೆ, ಜಂತಿಗಳನ್ನು ಜೋಡಿಸಿ ಕಟ್ಟಿಸಲಾಗಿದೆ. (ನಿರ್ಮಿಸಲಾಗಿದೆ) ಇದು ಸುಮಾರು ೧೫-೨೦ ಅಂಕಣದ ವಿಶಾಲವಾದ ಪಡಸಾಲೆಯಂತಿದೆ. ಒಳಭಾಗದಲ್ಲಿ ಒಂದು ಪಾಠಶಾಲೆಯಿದೆ. ಅಲ್ಲದೆ. ಒಂದು ಪುರಾತನ ಕಾಲದ ಬಾವಿಯಿದ್ದು, ಇಂದಿಗೂ ಸಹ ಅದರ ನೀರನ್ನು ಉಪಯೋಗಿಸುತ್ತಾರೆ. ಇದರ ಒಳಭಗದಲ್ಲಿದ್ದ ರುದ್ರಾಕ್ಷಿಮಂಟಪದಲ್ಲಿ 'ಮಡಿವಾಳೇಶ್ವರ'ರೆಂಬ ಒಬ್ಬ ಸತ್ಪುರುಷನ ಕರ್ತೃಗದ್ದಿಗೆಯಿದೆ. (ಇದರ) ಬಲಬದಿಗೆ ಶಿವಲಿಂಗೇಶ್ವರರೆಂಬ ಇನ್ನೋರ್ವ ವಿರಕ್ತ ಸ್ವಾಮಿಗಳ ಸಮಾಧಿಯೂ ಇದೆ. ಇವರೀರ್ವರು ವೀರ ವಿರಕ್ತರು, ತಪೋನಿಷ್ಟರು, ಸಿದ್ದಿಪುರುಷರೂ ಆಗಿದ್ದು, ಅನೇಕ ಭಕ್ತ ಜನರನ್ನು ಉದ್ಧರಿಸಿದ್ದರೆಂದು ಹೇಳುತ್ತಾರೆ. (ಇವರು ಸು. ೧೮ನೇ ಶತಮಾನದಲ್ಲಿದ್ದರೆಂದು ಹೇಳುತ್ತಾರೆ) ಈ ಸತ್ಪುರುಷರ ಕರ್ತೃ ಗದ್ದಿಗೆಗಳ ಪೂಜೆ-ಪುನಸ್ಕಾರಗಳನ್ನು ದಿನನಿತ್ಯ ತಪ್ಪದೇ ಗಣಾಚಾರಿ ಮನೆತನದ ಜಂಗಮರು ಮಾಡುತ್ತಾರೆ.

ಈ ಕಾರ್ಯಾಲಯದ ವಿಶೇಷವೆಂದರೆ ಸುಮಾರು ೫೦-೫೫ ವರುಷಗಳ ಹಿಂದೆ (೧೯೫೧-೫೨ ರಲ್ಲಿ), ಇಲ್ಲಿ ಒಂದು ವಿದ್ಯಾರ್ಥಿನಿಲಯ (ಅರ್ಥಾತ್ ಬಡವಿದ್ಯಾವಿದ್ಯಾರ್ಥಿಗಳಿಗೆ ಸ್ಥಾಪಿಸಲ್ಪಟ್ಟ ಅನ್ನಛತ್ರ) ವಿತ್ತು. ಅದನ್ನು ಕಾಡಸಿದೇಶ್ವರ ಫ್ರೀ ಬೋರ್ಡಿಂಗ್ ಎಂದು ಕರೆಯುತ್ತಿದ್ದರು. ಇಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪಡೆಯುವ ಸುಮಾರು ೨೦೦ ವಿದ್ಯಾರ್ಥಿಗಳು ವಾಸಿಸುತ್ತಿದ್ದರು. ಅವರಿಗೆ ದಿನಾಲು ಎರಡು ಹೊತ್ತು ಊಟದ ವ್ಯವಸ್ಥೆಯಿತ್ತು.. ಜಮಖಂಡಿ, ಮುಧೋಳ, ಅಥಣಿ, ರಾಯಭಾಗ, ಬೀಳಗಿ ತಾಲೂಕುಗಳ ಹಳ್ಳಿಗಳ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳು, ಪ್ರತಿಷ್ಠಿತ ಪಿ.ಬಿ. ಹೈಸ್ಕೂಲಿನಲ್ಲಿ ಕಲಿಯಲು ಬರುತ್ತಿದ್ದರು. ಅವರಿಗೆ ಊಟ ಮತ್ತು ವಸತಿಯ ಸೌಲಭ್ಯವನ್ನು ಈ ಬೋರ್ಡಿಂಗದಲ್ಲಿ ಒದಗಿಸಲಾಗಿತ್ತು. ಇಲ್ಲಿ ವಿದ್ಯಾರ್ಥಿಗಳು ಆದರ್ಶವಂತರಾಗಿ, ಬೆಳೆಯುವ ವಾತಾವರಣವಿತ್ತು. ಈ ಬೋರ್ಡಿಂಗಿನ ಮೇಲ್ವಿಚಾರಣೆಯನ್ನು ವೀರ ವಿರಕ್ತರಾದ ಶ್ರೀ ಚಿಕ್ಕಯ್ಯಸ್ವಾಮಿ ಅಡವಿಮಠ ಸಾಕೀನ ಮರೆಗುದ್ದಿ ಇವರು ಮಾಡುತ್ತದ್ದರು. ಇವರು ತಪ್ಪೋನಿಷ್ಟರು, ವಿದ್ಯಾ ಪ್ರೇಮಿಗಳು, ದಾಸೋಹಮೂರ್ತಿಗಳೂ ಆಗಿದ್ದು, ಗ್ರಾಮೀಣ ಬಡ-ವಿದ್ಯಾರ್ಥಿಗಳ ಶಿಕ್ಷಣದ ಏಳ್ಗೆಗಾಗಿ ಬಹಳೇ ಪ್ರಯತ್ನಿಸುತ್ತಿದ್ದರು. "ತಿರಿದುಕೊಂಡು ತಂದು, ಕರೆದುಕೊಂಡು ಉಣ್ಣಬೇಕೆಂಬ" ಶರಣರ ನುಡಿಯಂತೆ ಶ್ರೀ ಚಿಕ್ಕಯ್ಯಸ್ವಾಮಿಗಳು ಸುಗ್ಗಿಯ ಕಾಲದಲ್ಲಿ ತಾಲೂಕಿನ ಅನೇಕ ಹಳ್ಳಿಗಳಿಗೆ ಹೋಗಿ ಗ್ರಾಮದ ಜನರಿಂದ ದವಸ-ಧಾನ್ಯಗಳನ್ನು ದಾನವಾಗಿ ಪಡೆದುಕೊಂಡು ತಂದು (ಬೋರ್ಡಿಂಗದಲ್ಲಿದ್ದ) ಬಡ ವಿದ್ಯಾರ್ಥಿಗಳ ದಾಸೋಹಕ್ಕಾಗಿ ಉಪಯೋಗಿಸುತ್ತಿದ್ದರು. ಸ್ವಾಮಿಗಳ ಈ ಸೇವೆಯನ್ನು ಮೆಚ್ಚಿದ ಅನೇಕ ಜನ ಸ್ಥಿತಿವಂತ ಒಕ್ಕಲಿಗರು ಉದಾರವಾಗಿ ಬೋರ್ಡಿಂಗಕ್ಕಾಗಿ ಚೀಲ, ಎರಡು ಚೀಲ ಧಾನ್ಯಗಳನ್ನು (ಜೋಳ-ಗೋದಿ) ದಾನವಾಗಿ ಕೊಡುತ್ತಿದ್ದರು. ಹೀಗೆ ಪ್ರತಿ ವರುಷ ಸ್ವಾಮಿಗಳು ಭಿಕ್ಷಾಟನೆಯಿಂದ ಸುಮಾರು ೨೦೦-೩೦೦ ಚೀಲ ಧಾನ್ಯಗಳನ್ನು ಸಂಗ್ರಹಿಸಿ (ಕೂಡಿಸಿ) ಇಡೀ ವರುಷ ವಿದ್ಯಾರ್ಥಿಗಳ ಊಟಕ್ಕಾಗಿ ಬಳಸುತ್ತಿದ್ದರು. ಇಂತಹ ಪುಣ್ಯಮಯ ಕಾರ್ಯವು ಇಲ್ಲಿ ನಡೆಯುತ್ತಿತ್ತೆಂಬುದನ್ನು ಸ್ಮರಿಸಬಹುದು.

ಸ್ವಾಮಿಗಳು ಬೋರ್ಡಿಂಗದಲ್ಲಿದ್ದ ವಿದ್ಯಾರ್ಥಿಗಳನ್ನು ಬಹಳೇ ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದರು. ಇಲ್ಲಿದ್ದ ವಿದ್ಯಾರ್ಥಿಗಳು ಕೆಲವು ನೀತಿ-ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತಿತ್ತು. ಅವುಗಳೆಂದರೆ (೧) ಎಲ್ಲರ ದಿನಾಲು ಎರಡು ಸಲ ಸಾಮೂಹಿಕ ಪ್ರಾರ್ಥನೆಯನ್ನು ಮಾಡಬೇಕು. (೨) ಊಟದ ಸಮಯದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿ ಶರಣರ ವಚನಗಳನ್ನು ಸರದಿ ಪ್ರಕಾರ ಕಂಠಪಾಠ ಹೇಳಬೇಕು. (೨) ರಾತ್ರಿ ೬ ಘಂ. ನಂತರ ಯಾರೂ ಹೊರಗೆ ಹೋಗಕೂಡದು. (೪) ದಿನಾಲು ಐದಾರು ತಾಸುಗಳ ವರೆಗೆ ಕಡ್ಡಾಯವಾಗಿ ಅಭ್ಯಾಸ ಮಾಡಬೇಕು. (೫) ವಾರ್ಷಿಕ ಪರೀಕ್ಷೆಯಲ್ಲಿ ಉತೀರ್ಣರಾಗಲೇಬೇಕು. ಒಂದು ವೇಳೆ ಅನುತ್ತೀರ್ಣರಾದರೆ ಅವರಿಗೆ ಮರು ವರುಷ ಬೋರ್ಡಿಂಗದಲ್ಲಿ ಪ್ರವೇಶವಿರಲಿಲ್ಲ. ಇವೇ ಮೊದಲಾದ ಕಟಿಬದ್ದ ನಿಯಮಗಳನ್ನು ಅನುಸರಿಸಿ ನಡೆಯುವ ರೂಢಿಯು ವಿದ್ಯಾರ್ಥಿಗಳಲ್ಲಿ ಬೆಳೆದು ಬಂದು, ಮುಂದೆ ಅವರು ಆದರ್ಶ ವ್ಯಕ್ತಿಗಳಾಗಿ ರೂಪುಗೊಳ್ಳುವ ತರಬೇತಿಯು ಇಲ್ಲಿ ದೊರೆಯುತ್ತಿತ್ತೆಂದು ಹೇಳಬಹುದು. ನಿಜವಾಗಿಯೂ ಈ ಸಂಸ್ಥೆಯು ಪ್ರಾಚೀನ ಕಾಲದ (ವೇದಕಾಲದ) ಗುರುಕುಲ ಪದ್ಧತಿಯನ್ನು ಹೋಲುವಂತಹದ್ದಾಗಿತ್ತು. ಆ ಕಾಲದಲ್ಲಿ ಈ ಬೋರ್ಡಿಂಗದಲ್ಲಿದ್ದು ಕಲಿತ ವಿದ್ಯಾರ್ಥಿಗಳನೇಕರು ಮುಂದೆ ಉಚ್ಚ ಶಿಕ್ಷಣವನ್ನು ಪಡೆದುಕೊಂಡು ಉನ್ನತಾಧಿಕಾರಿಗಳಾಗಿ ಕೀರ್ತಿಪಡೆದ ಉದಾಹರಣೆಗಳುಂಟು.

ಈ ವಿದ್ಯಾರ್ಥಿ ನಿಲಯದ ಏಳ್ಗೆಗಾಗಿ ಅಂದಿನ ಜಮಖಂಡಿಯ ಅಡತಿ ವ್ಯಾಪಾರಿಗಳು ಧನ-ಧಾನ್ಯದ ರೂಪದಿಂದ ಉದಾರ ಸಹಾಯವನ್ನು ಸಲ್ಲುಸುತ್ತಿದ್ದರೆಂದು ಪ್ರತ್ಯಕ್ಷದರ್ಶಿಗಳಿಂದ ತಿಳಿದು ಬರುತ್ತದೆ. ಅಷ್ಟೇ ಅಲ್ಲ ಇಲ್ಲಿಯ ಕಾಯಿ-ಪಲ್ಲೆ ಮಾರುಕಟ್ಟೆಯವರು ಸಹ ಪ್ರತಿ ಗುರುವಾರ ಸಂತೆಯ ದಿವಸ ಬೋರ್ಡಿಂಗ ವಿದ್ಯಾರ್ಥಿಗಳು ಆಗಮಿಸಿದಾಗ ತಮ್ಮಲ್ಲಿದ್ದ ಹಣ್ಣು-ಹಂಪಲ, ಕಾಯಿಪಲ್ಲೆಯ ದಿನಸುಗಳನ್ನು ಉದಾರ ಮನಸ್ಸಿನಿಂದ ಪುಕ್ಕಟೆಯಾಗಿ ಕೊಡುತ್ತಿದ್ದರು. ಹೀಗೆ ವ್ಯಾಪಾರಸ್ಥರು, ರೈತರು, ಸಾರ್ವಜನಿಕರು ಸ್ವಸಂತೋಷದಿಂದ ಈ ಬೋರ್ಡಿಂಗಕ್ಕೆ ಸಹಾಯ ಹಸ್ತವನ್ನು ಸದಾ ಚಾಚುತ್ತಿದ್ದರು.

ಅಂತೆಯೇ ಈ ಸಂಸ್ಥೆಯು ಬೆಳೆದು ಸುಮಾರು ೩೦ ವರ್ಷಗಳ ಕಾಲ ಅವ್ಯಾಹತವಾಗಿ ಈ ಭಾಗದ ಗ್ರಾಮೀಣ ಬಡ ವಿದ್ಯಾರ್ಥಿಗಳಿಗೆ ಅನ್ನದಾನ-ಜ್ಞಾನದಾನವನ್ನಿತ್ತು ಪೋಷಿಸಿದ ಒಂದು ಪುಣ್ಯಧಾಮವಾಗಿತ್ತೆಂದು ಹೇಳಬಹುದು. ಈ ಬೋರ್ಡಿಂಗದ ಉಸ್ತುವಾರಿಯನ್ನು ಅಂದಿನ ಹಿರಿಯ ವ್ಯಾಪಾರಸ್ಥರಾದ ಶ್ರೀಯುತ ಮಲ್ಲೇಶಪ್ಪಣ್ಣ ಕಟ್ಟಗಿ, ಶ್ರೀ ಶಿವಪ್ಪಣ್ಣ ಸಾವಳಗಿ, ಶ್ರೀ ಪಟ್ಟಣ ಮೊದಲಾದವರು ನಿಭಾಯಿಸುತ್ತಿದ್ದರು. ಕ್ರಿ. ಶ. ೧೯೬೫ ರಲ್ಲಿ ಶ್ರೀ ಚಿಕ್ಕಯ್ಯ ಸ್ವಾಮಿ ಅಡವಿಮಠ ಇವರು ಅಕಾಲಿಕ ಮರಣಕ್ಕೆ ತುತ್ತಾದ್ದರಿಂದ ಈ ಸಂಸ್ಥೆಯ ಮೇಲ್ವಿಚಾರಣೆಯು ಸರಿಯಾಗಿ ನಡೆಯಲಿಲ್ಲ. ಆದ್ದರಿಂದ ಸಾರ್ವಜನಿಕ ಸಹಾಯ ಸಹಕಾರ ತಪ್ಪಿಹೋಗಿ ಮುಂದೆ ಕೆಲವೇ ವರ್ಷಗಳಲ್ಲಿ ಈ ಸಂಸ್ಥೆಯು ಮುಚ್ಚಿಹೋಯಿತು.

ಈ ಬೋರ್ಡಿಂಗ ಮುಚ್ಚಿದ ನಂತರ ಆ ಸ್ಥಳವನ್ನು ಜಮಖಂಡಿಯ ವೀರಶೈವ ಸಮಾಜದವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಅನೇಕ ಸಾರ್ವಜನಿಕ ಮಂಗಲ ಕಾರ್ಯಗಳಿಗಾಗಿ, ಪುರಾಣ ಪುಣ್ಯ ಕಥೆಗಳನ್ನು ಹೇಳಿಸುವದಕ್ಕಾಗಿ ಉಪಯೋಗಿಸುತ್ತಾ ಬಂದಿದ್ದಾರೆ. ಅಲ್ಲಿದ್ದ ಸತ್ಪುರುಷರ ಕರ್ತೃಗದ್ದಿಗೆಗಳಿಗೆ ಗಣಾಚಾರಿ ಮನೆತನದವರು ದಿನನಿತ್ಯ ತಪ್ಪದೇ ಪೂಜೆ ಪುರಸ್ಕಾರಗಳನ್ನು

ಮಡುತ್ತಿದ್ದಾರೆ. ಇದು ಜಾಗ್ರತ ಸ್ಥಾನವಾಗಿದ್ದರಿಂದ ಅನೇಕ ಭಕ್ತಾಧಿಗಳು ಸತ್ಪುರುಷರ ದರ್ಶನಕ್ಕಾಗಿ ಬರುತ್ತಿರುತ್ತಾರೆ.

ಮಹಾಲಿಂಗೇಶ್ವರ ದೇವಾಲಯ :

ಇದು ಜಮಖಂಡಿ ನಗರದ ಬಲಬದಿಯಲ್ಲಿ ಉನ್ನತ ಗುಡ್ಡದ ಮೇಲೆ ಕಟ್ಟಲ್ಪಟ್ಟ ಪುರಾತನ ದೇವಾಲಯವಾಗಿದ್ದು ಇಲ್ಲಿಂದ ಹುಣಸಿಕಟ್ಟೆ ಗ್ರಾಮಕ್ಕೆ ಹೋಗುವ ಕಾಲುದಾರಿಯಿದೆ. ಹಿಂದಕ್ಕೆ ಮಹಾಲಿಂಗೇಶ್ವರ ಸ್ವಾಮಿಗಳು ಈ ಸ್ಥಳದಲ್ಲಿ ತಪಶ್ಚರ್ಯಕ್ಕೆ ಕುಳಿತಿದ್ದರಂತೆ. ಮುಂದೆ ಅವರಿಗೆ ಯಾವುದೋ ದೈವಿ ಪ್ರೇರಣೆಯಾಗಿ ಇಲ್ಲಿಂದ ಮಹಾಲಿಂಗಪೂರಕ್ಕೆ ಹೋಗಿ ನೆಲೆಸಿದರೆಂದು ಪ್ರತೀತಿ ಇದೆ. ಮುಧೋಳ ಸಂಸ್ಥಾನಿಕರಾದ ಘೋರ್ಪಡೆ ಮಹಾರಾಜರು ಮಹಾಲಿಂಗೇಶ್ವರರ ಪರಮ ಭಕ್ತರಾಗಿದ್ದರು. ಆದ್ದರಿಂದಲೇ ಇಂದಿಗೂ ಸಹ ಘೋರ್ಪಡೆಯವರ ನೈವೇದ್ಯವು ಮುಧೋಳದಿಂದ ಮಹಾಲಿಂಗಪೂರಕ್ಕೆ ಹೋದ ನಂತರವೇ ಮಹಾಲಿಂಗೇಶ್ವರ ರಥವು ಸಾಗುತ್ತಿದೆಯಂತೆ.

ಮಹಾಲಿಂಗೇಶ್ವರರು ಜಮಖಂಡಿ ಗುಡ್ಡದ ಮೇಲೆ ಅನುಷ್ಠಾನ ಮಾಡಿದ ಸ್ಥಳದಲ್ಲಿ ಈ ದೇವಾಲಯವನ್ನು ನಿರ್ಮಿಸಲಾಗಿದೆ. ಇದರ ಗರ್ಭಗುಡಿ ಮಧ್ಯದಲ್ಲಿ ಶಿವಲಿಂಗವಿದ್ದು, ಮುಂಭಾದಗಲ್ಲಿ ನಂದಿಯ ಮೂರ್ತಿಯಿದೆ. ಗರ್ಭಗುಡಿಯ ಮೇಲ್ಭಾಗವನ್ನು ನುಣುಪಾದ ಕಲ್ಲುಗಳಿಂದ ಕಮಾನಿನಾಕಾರವಾಗಿ ಜೋಡಿಸಿ ಕಟ್ಟಲಾಗಿದೆ. ದೇವಾಲಯದ ಅಂತರಾಳವು (ಮುಂಭಾಗವು) ಮೂರು ಚೌಕಾಕೃತಿಯ ಕಲ್ಲಿನ ಕಂಬಗಳ ಮೇಲೆ ಕಮಾನಿನಾಕಾರದ ಕಲ್ಲುಗಳಿಂದ ಅಚ್ಛಾಧಿತವಾಗಿದೆ. ಹಿಂದಕ್ಕೆ ಈ ದೇವಾಲಯದ ಸುತ್ತಲೂ ರಟ್ಟಗಳ್ಳಿ ಹಾಗೂ ಗಿಡ-ಗಂಟಿಗಳು ದಟ್ಟವಾಗಿ ಬೆಳೆದಿದ್ದರಿಂದ ಇಲ್ಲಿ ಅನೇಕ ಕಾಡು ಮೃಗಗಳು ವಾಸಿಸುತ್ತಿದ್ದವಂತೆ ಆದ್ದರಿಂದ ಜಮಖಂಡಿ ಸಂಸ್ಥಾನಿಕರು ಬೇಟೆಯಾಡಲು ಇಲ್ಲಿಗೆ ಬರುತ್ತಿದ್ದರಂತೆ. ಆವಾಗ್ಗೆ ಈ ದೇವಾಲಯಲ್ಲಿ ತಂಗಿ ವಿಶ್ರಾಂತಿ ಪಡೆಯುತ್ತಿದ್ದರೆಂದು ಹೇಳುತ್ತಾರೆ.

ಈ ದೇವಾಲಯದ ಅರ್ಚಕರು ಗುಡ್ಡಿ ಮನೆತನದ ಜಂಗಮರಿದ್ದಾರೆ. ಇವರೇ ದಿನನಿತ್ಯ ತಪ್ಪದೇ ಈ ದೇವಾಲಯದ ಪೂಜೆ ಪುನಸ್ಕಾರಗಳನ್ನು ಮಾಡುತ್ತಾ ಬಂದಿದ್ದಾರೆ. ಈ ದೇವಾಲಯದ ಕಟ್ಟಡವು ನಗರದಲ್ಲಿದ್ದ ಹಳೆಯ ಮಲ್ಲಿಕಾರ್ಜುನ ದೇವಾಲಯದ ಮಾದರಿಯನ್ನು ಹೋಲುತ್ತಿದ್ದರಿಂದ ಸುಮಾರು ೧೨ ನೇ ಶತಮಾನದಲ್ಲಿ ನಿರ್ಮಿಸಿರಬಹುದೆಂದು ಊಹಿಸಲಾಗಿದೆ.[೧೪]

ನಂದಿಕೇಶ್ವರ ದೇವಾಲಯ :

ನಂದಿಕೇಶ್ವರರು ಒಬ್ಬ ಸತ್ಪುರುಷರು ಇವರು ಮೂಲತಃ ನಂದಗಾವಿಯವರು. ಇದು ಅಥಣಿ ತಾಲೂಕಿನಲ್ಲಿ ಕೃಷ್ಣಾ ನದಿಯ ಉತ್ತರ ದಂಡೆಯ ಮೇಲಿದೆ. ಅಲ್ಲಿಂದ ಅವರು ಸಂಚಾರ ಮಾಡುತ್ತಾ ಜಮಖಂಡಿಗೆ ಬಂದರು. ಅವರ ಕೀರ್ತಿ ಹೆಚ್ಚಾಯಿತು. ಇದರಿಂದ ಪ್ರೇರಿತರಾದ ನಂದಗಾವಿಯವರು ಮಹಾತ್ಮರನ್ನು ತಮ್ಮೂರಿಗೆ ಕರೆದುಕೊಂಡು ಹೋಗಬೇಕೆಂದು ಇಚ್ಛೆಪಟ್ಟರು. ಅಷ್ಟೇ ಅಲ್ಲ ಅವರ ಗದ್ದುಗೆಯು ತಮ್ಮಲ್ಲಿಯೇ ಆಗಬೇಕೆಂದು ಒಂದು ಗುಡಿಯನ್ನು ಕಟ್ಟಿಸಿದರು. ಮತ್ತು ಊರಿನ ಜನರು ಕೂಡಿಕೊಂಡು ಅವರನ್ನು ಕರೆಯಬಂದರು ಆದರೆ ನಂದಿಕೇಶ್ವರರರು ಅಲ್ಲಿಗೆ ಹೋಗಲು ನಿರಾಕರಿಸಿದರು.

ಮತ್ತು ಜಮಖಂಡಿಯಲ್ಲಿಯೇ ಉಳಿದುಕೊಂಡರು. ಇದರಿಂದಾಗಿ ನಂದಗಾವಿಯಲ್ಲಿ ಕಟ್ಟಸಿದ ಆ ಗುಡಿ ಹಾಗೆಯೇ ಉಳಿಯಿತು. ಈಗ ಅದನ್ನು ದೇಗುಲವೆಂದು ಕರೆಯುತ್ತಾರೆ. ವಾಸ್ತು ಮತ್ತು ಶಿಲ್ಪಶಿಲ್ಪಕಲೆಗಳಿಂದ ಕುಡಿದ ಆ ಗುಡಿಯು ಒಂದು ಸ್ಮಾರಕವಾಗಿ ನಂದಗಾವಿಯಲ್ಲಿ ಕಾಣಸಿಗುತ್ತದೆ.

ನಂದೀಕೇಶ್ವರ ದೇವಾಲಯವು ಜಮಖಂಡಿ ನಗರದಲ್ಲಿದ್ದ ಪುರಾತನ ಶೈವ ದೇವಾಲಯ ಇದು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ನಿರ್ಮಿತವಾಗಿದ್ದು. ತ್ರಿಕೂಟೇಶ್ವರ ದೇವಾಲಯವಾಗಿದೆ. ಈ ದೇವಾಲಯದ ಮಾದರಿ ವೇಸರ ಶೈಲಿಯಲ್ಲಿದೆ. ಉತ್ತರಾಭಿಮುಖವಾಗಿದ್ದು, ಅಷ್ಟಕೋನಾಕೃತಿಯ ವಿಶಾಲವಾದ ಜಗಲಿಯ ಮೇಲೆ ಕಟ್ಟಲಾಗಿದೆ. ದೇವಾಲಯಕ್ಕೆ ವಿಸ್ತಾರವಾದ ಪ್ರಾಂಗಣವಿದೆ. ಅದರ ಒಳಾಂಗಣದಲ್ಲಿ ಪ್ರವೇಶ ದ್ವಾರದ ಮುಂದೆ ಅಖಂಡ ಶಿಲೆಯಲ್ಲಿ ಕೆತ್ತಿದ ಬೃಹದಾಕಾರದ ಐರಾವತದ ಮೂರ್ತಿಯಿದೆ. ಅದರ ಎಡಬದಿಗಿರುವ ಜಗುಲಿಯ ಮೇಲೆ ಶಿವಲಿಂಗ ಹಾಗೂ ನಂದಿಯ ಮೂರ್ತಿಗಳಿವೆ.

ಈ ದೇವಾಲಯದ ಪ್ರವೇಶ ದ್ವಾರವು ಅನೇಕ ಉಬ್ಬುಶಿಲ್ಪಗಳಿಂದ ಅಲಂಕೃತವಾಗಿದೆ. ಮುಂಬಾಗದ ಎಡ-ಬಲಕ್ಕೆ ಇತ್ತೀಚೆಗೆ ಅಂದರೆ ೧೯೭೫-೭೬ರಲ್ಲಿ ಐರಾವತದ ಮೂರ್ತಿಗಳನ್ನು ಸ್ಥಾಪಿಸಲಾಗಿದೆ. ತ್ರಿಕೂಟೇಶ್ವರ ಮಧ್ಯದಲ್ಲಿರುವ ಗರ್ಭಗೃಹವು ಚೌಕಾಕಾರದ ಸ್ಥಳವಿನ್ಯಾಸವನ್ನು ಹೊಂದಿದ್ದು, ಅಲಂಕೃತವಾದ ಚಾಲುಕ್ಯ ಲಕ್ಷಣವುಳ್ಳ ಬಾಗಿಲುವಾಡವನ್ನು ಹೊಂದಿದೆ. ಗರ್ಭಬಾಗಿಲುವಾಡದ ಲಲಾಟದಲ್ಲಿ ಯೋಗನರಸಿಂಹನ ಕಿರು ಶಿಲ್ಪವಿದೆ. ಅದರ ಒಳಗೆ ಶಿವಲಿಂಗವಿದೆ. ಬಲಭಾಗದ ಗರ್ಭಗೃದಲ್ಲಿಯೂ ಶಿವಲಿಂಗವಿದ್ದು, ಹಿಂಭಾಗದಲ್ಲಿ ಸಪ್ತಮಾತ್ರಿಕೆಯರ ಜೋಡು ಶಿಲ್ಪವಿದೆ. ಗರ್ಭ ಗೃಹಗಳ ಮುಂಭಾಗದ ಕೇಂದ್ರೀಯ ಸ್ಥಂಭಗಳು ಚಾಲುಕ್ಯ ಶೈಲಿಯ ಅಲಂಕಾರವನ್ನು ಹೊಂದಿವೆ. ನವರಂಗಕ್ಕೆ ಪಶ್ಚಿಮದಿಂದ ಮತ್ತು ಪೂರ್ವ ದಿಕ್ಕುಗಳಿಂದ ಪ್ರವೇಶಗಳಿದ್ದು, ಆನೆಗಳಿರುವ ತೆರೆದಮುಖಮಂಟಪವನ್ನು ಹೊಂದಿದೆ. ಈ ಮುಖಮಂಟಪಗಳಲ್ಲಿ ಕಕ್ಷಾಸನಗಳಿದ್ದು, ಚಾಲುಕ್ಯ ಶೈಲಿಯ ಸ್ಥಂಭಗಳಿದ್ದು ನವರಂಗದ್ವಾರದ ಇಕ್ಕೆಲಗಳಲ್ಲಿ ಜಾಲಂದ್ರಗಳಿವೆ. ಮುಖ್ಯ ಗರ್ಭಗೃಹ ಎದುರಿಗೆ ನವರಂಗದ ಅಲಕೃತ ನಂದಿ ಮಂಟಪವಿದೆ. ನಂದಿಮಂಟಪದ ಬಾಗಿಲವಾಡವು ಚಾಲುಕ್ಯ ಶೈಲಿಯ ತ್ರಿಶಾಖಾಲಂಕಾರವನ್ನು ಹೊಂದಿದೆ. ಈ ಬಾಗಿಲವಾಡದ ಅಕ್ಕಪಕ್ಕದಲ್ಲಿ ಎರಡು ಕೊಠಡಿಗಳಿವೆ. ಎಡಭಾಗದ ಕೊಠಡಿಯು ಖಾಲಿ ಇದ್ದು, ಬಲಭಾಗದ ಕೋಠಡಿಯ ಬಾಗಿಲವಾಡ ಲಲಾಟದಲ್ಲಿ ವಿಷ್ಣುವಿನ ಕಿರು ಶಿಲ್ಪವಿದೆ. ಈ ಕೊಠಡಿಯ ಪಕ್ಕದ ಹೊರಗೋಡೆಗಳಲ್ಲಿ ಜಾಲಂಧ್ರಗಳಿವೆ. ನಂದಿ ಮಂಟಪದ ಹಿಂಭಾಗದ ಪ್ರವೇಶದ್ವಾರವಿದ್ದು, ಇಕ್ಕೆಲಗಳಲ್ಲಿರುವ ಎರಡು ಕೊಠಡಿಗಳ ಪೈಕಿ ಒಂದರಲ್ಲಿ ಆಂಜನೆಯ ಹಾಗೂ ಇನ್ನೊಂದರಲ್ಲಿ ಗಣೇಶ ಶಿಲಾಮೂರ್ತಿಗಳಿವೆ. ಈ ಎರಡೂ ಕೊಠಡಿಗಳ ಪ್ರವೇಶ ದ್ವಾರಗಳ ಮದ್ಯದಲ್ಲಿ ಜಾಲಂದ್ರಗಳಿವೆ. ದೇವಾಲಯದ ಮಹಾದ್ವಾರ ಇದಾಗಿದ್ದು, ಕಲ್ಯಾಣ ಚಾಲುಕ್ಯ ಶೈಲಿಯ ತ್ರಿಶಾಖಾ ಅಲಂಕಾರವಿರುವ ಬಾಗಿಲುವಾಡವಿದ್ದು, ಮೇಲ್ಭಾಗದಲ್ಲಿ ಮಕರ ತೋರಣಗಳು ಹಾಗೂ ಲಲಾಟದಲ್ಲಿ ದೊಡ್ಡದಾದ ಗಜಲಕ್ಷ್ಮೀ ಬಿಂಬವನ್ನು ಹೊಂದಿದೆ. ದೇವಾಲಯದ ಹೊರ ಭಾಗದಲ್ಲಿ ವಿಶಾಲವಾದ ಪ್ರಾಂಗಣವಿದ್ದು, ಮುಂಭಾಗದಲ್ಲಿ ವೀರಗಲ್ಲು, ನಾಗಶಿಲ್ಪ, ಶಿವಲಿಂಗ ಮತ್ತು ನಂದಿಯ ಶಿಲಾಕೃತಿಗಳಿವೆ. ದೇವಾಲಯದ ಹೊರಗೋಡೆಯ ಪ್ರವೇಶ ದ್ವಾರದಲ್ಲಿರುವ ಎರಡು ದೊಡ್ಡ ಶಿಲ್ಪಗಳಿದ್ದು, ಒಂದು ಭಕ್ತೆಯ ವಿಗ್ರಹವಾಗಿದ್ದು, ಇನ್ನೊಂದು ಗಣೇಶನ ವಿಗ್ರಹವಾಗಿದೆ. ಈ ದೇವಾಲಯದ ಸಮುಚ್ಛಯವು ಆಕರ್ಷಕ ವಾಸ್ತು ಹಾಗೂ ಶಿಲ್ಪಕಲಾ

[illegible]

[illegible]

[illegible]

[illegible]

[illegible]

ತಾಣವಾಗಿದೆ. ಈ ದೇವಸ್ಥಾನದ ಪ್ರಾಂಗಣದಲ್ಲಿ ಒಂದು ಪುರಾತನ ಬಾವಿಯಿದೆ. ಬಾವಿಯ ನೀರನ್ನು ಇಂದಿಗೂ ಬಳಸುತ್ತಾರೆ. ದೇವಾಲಯದ ಸುತ್ತಲೂ ವಿಸ್ತಾರವಾದ ಪ್ರದಕ್ಷಿಣಾ ಪಥವಿದೆ. ನಂದಿಕೇಶ್ವರನು ಜಮಖಂಡಿಯ ಬಹುಜನರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರ ಆರಾಧ್ಯ ದೇವನಾಗಿದ್ದು, ಪ್ರತಿ ಸೋಮವಾರ ಅಸಂಖ್ಯಾತ ಭಕ್ತರು ದೇವ ದರ್ಶನಕ್ಕಾಗಿ ಬರುತ್ತಾರೆ. ಇದು ಬಹು ಜಾಗೃತವಾದ ದೇವಸ್ಥಾನವಾಗಿದ್ದು. ಜನರು ಭಕ್ತಿ-ಭಾವದಿಂದ ನಡೆದುಕೊಳ್ಳುತ್ತಾರೆ. ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಅನೇಕ ಬಗೆಯ ಹರಕೆ ಹೊತ್ತು ಭಕ್ತಿ ಕಾಣಿಕೆಗಳನ್ನು ಸಲ್ಲಿಸುತ್ತಾರೆ, ಅಲ್ಲದೆ ಕೆಲವರು ಧೀರ್ಘ ದಂಡ ನಮಸ್ಕಾರ, ಮೌನ ದರ್ಶನ, ಉಪವಾಸ ವ್ರತ ಮೊದಲಾದ ಕಠಿಣ ನಿಯಮಗಳನ್ನು ಪಾಲಿಸುತ್ತಾರೆ. ಈ ದೇವಾಲಯವು ಪ್ರಶಾಂತ ವಾತಾವರಣದಲ್ಲಿದ್ದು, ಅನೇಕ ಗಿಡ-ಬಳ್ಳಿಗಳಿಂದ ಶೋಭಿಸುತ್ತದೆ.[೧೫]

ಸದಾನಂದ ದೇವಸ್ಥಾನ (ಕುಂಚನೂರ ರಸ್ತೆ)

ಸಂತ ಶ್ರೇಷ್ಠರು, ಮಹಾ ತಪಸ್ವಿಗಳು ಹಾಗೂ ದಾರ್ಶನಿಕರೂ ಆದ ಸ್ವಾಮಿ ಸದಾನಂದರು ಕ್ರಿ. ಶ. ೧೭೦೩ ರಲ್ಲಿ, ಸಖದೇವ ಮತ್ತು ಭಾಗೀರಥಿಬಾಯಿ ಎಂಬ ಪುಣ್ಯ ಬ್ರಾಹ್ಮಣ ದಂಪತಿಗಳ ಉದರದಲ್ಲಿ ಜಮಖಂಡಿ ನಗರದಲ್ಲಿ ಜನಸಿದರು. ಬಾಲ್ಯದಿಂದಲೂ ಇವರಿಗೆ ಪಾರಮಾರ್ಥ ಕಡೆಗೆ ಒಲವಿತ್ತು. ಮುಂದೆ ಇವರು ಅಶರೀರವಾಣಿಯ ಆದೇಶದಂತೆ ಪುರಾಣ ಪ್ರಸಿದ್ಧವಾದ ರಾಮತೀರ್ಥ (ಜಮಖಂಡಿಯಿಂದ ೪೦ ಕಿ. ಮೀ. ಅಂತರದಲ್ಲಿದ್ದ ಅಥಣಿ ತಾಲೂಕಿಗೆ ಸೇರಿದ ರಾಮತೀರ್ಥ) ಸುಕ್ಷೇತ್ರಕ್ಕೆ ಬಂದು ಅಲ್ಲಿ ಸ್ವಯಂಭೂ ರಾಮೇಶ್ವರನನ್ನು ಕುರಿತು ಘೋರ ತಪಶ್ಚರ್ಯವನ್ನಾಚರಿಸಿದರು. ಇವರ ತಪಕ್ಕೆ ಮೆಚ್ಚಿ ಸ್ವತಃ ರಾಮೇಶ್ವರನೇ ಇವರ ದೃಷ್ಟಿಗೆ ಗೋಚರವಾದನು. ಹೀಗೆ ಸದಾನಂದರು ಭಗವಂತನ ಸಾಕ್ಷಾತ್ಕಾರ ಮಾಡಿಕೊಂಡು ಅವನ ಆಜ್ಞೆಯ ಮೇರೆಗೆ ಜಮಖಂಡಿಗೆ ಬಂದು ಏಕಾಂತ ನಾಮಸ್ಮರಣೆಯನ್ನು ಕೈಗೊಳ್ಳಲು ನಿರ್ಧರಿಸಿ. ಜಮಖಂಡಿಯ ಪೂರ್ವ ದಿಕ್ಕಿಗೆ ತುಸು ಅಂತರದಲ್ಲಿ ಕುಂಚನೂರ ಗ್ರಾಮಕ್ಕೆ ಹೋಗುವ ಮಾರ್ಗದ ಬಲಬದಿಗಿದ್ದ "ಕಾಶಿಲಿಂಗ"ವೆಂಬ ಪ್ರಾಚೀನ ದೇವಾಲಯವನ್ನು ಧ್ಯಾನಕ್ಕಾಗಿ ಆರಿಸಿಕೊಂಡು ಅಲ್ಲಿ ಹೋಗಿ ದಿನನಿತ್ಯ ಅದೆಷ್ಟೋ ಗಂಟೆಗಳವರೆಗೆ ಗುಪ್ತ ರೀತಿಯಲ್ಲಿ ನಾಮಸ್ಮರಣೆ ಮಾಡುತ್ತಿದ್ದರು. ಹೀಗಾಗಿ ಈ ದೇವಾಲಯದೊಂದಿಗೆ ಅವರಿಗೆ ಘನಿಷ್ಟ ಸಂಬಂಧ, ಸಾಮೀಪ್ಯ, ಅವರ ಜೀವನದ ಕೊನೆಯ ಉಸಿರಿರುವವರೆಗೂ ಉಳಿದು ಬಂದಿತು. ಇದೇ ಸ್ಥಳದಲ್ಲಿ ಅದೇ "ಕಾಶಿಲಿಂಗನ" ದೇವಾಲಯದೆದುರಿಗೆ ಅವರ ಸಮಾಧಿ ಸ್ಥಾನವಾಗಿ ಆ ಸಮಾಧಿಯ ಮೇಲೆಯೇ ದೇವಾಲಯವೊಂದು ನಿರ್ಮಾಣವಾಯಿತು. ಇಂದಿಗೂ ಜನರು ಆ ದೇವಸ್ಥಾನವನ್ನು ಸದಾನಂದರ ಗುಡಿ ಎಂದೇ ಗುರ್ತಿಸುತ್ತಾರೆ.

ಸದಾನಂದರ ಸಮಾಧಿ ಎಷ್ಟೋ ವರ್ಷಗಳವರೆಗೆ ಆಚ್ಛಾದನವಿಲ್ಲದೆ ಇತ್ತು. ಮುಂದೆ ಆ ಸಮಾಧಿಯ ಮೇಲೆ ದೇವಾಲಯವನ್ನು ಹಾಗೂ ಎದುರುಗಡೆಗೆ ಸಭಾಮಂಟಪವನ್ನು ನಿರ್ಮಿಸಲಾಯಿತು. ಜಕಣಾಚಾರಿಯ ಶಿಲ್ಪಶೈಲಿಯಲ್ಲಿ ಕಟ್ಟಲಾದ ಈ ದೇವಾಲಯವು ತುಂಬಾ ಗಟ್ಟಿಮುಟ್ಟಾಗಿದೆ ಹಾಗೂ ಸುಂದರವಾಗಿದೆ. ದೇವಾಲಯದ ಪೂರ್ವ ದಿಕ್ಕಿಗೊಂದು ಭವ್ಯವಾದ ಹಳೆಯ ಬೇವಿನ ವೃಕ್ಷವಿದ್ದು, ವಿಶಾಲವಾದ ಕಟ್ಟೆಯಿದೆ. ಅದರ ಪೂರ್ವಕ್ಕೆ ಒಂದರ ಮುಂದೊಂದರಂತೆ ಮೂರು ಸಮಾಧಿಗಳಿವೆ. ಅವುಗಳಲ್ಲಿ ಮೊದಲನೆಯದು ಲೋಕಾಪುರದ ಪರಮಹಂಸ ಮನೆತನದ ಪೂರ್ಣಾನಂದರದು,

ಎರಡನೆಯದು ಮೂಡಲಗಿ ಸ್ವಾಮಿಗಳದು, ಮೂರನೆಯದು ಶ್ರೀ ರಾಮಣ್ಣಾ ದೇಸಾಯಿಯವರ ತಾಯಿಯ ಮನೆತನದ ರಮಾನಂದರದು. ಈ ರಮಾನಂದರ ಸಮಾಧಿ ಉತ್ತರಕ್ಕೆ ಜಮುಖಂಡಿಯ ವೆಂಕಣ್ಣ ಭಟ್ಟಸಾಬಡೆಯವರ ಸಮಾಧಿಯಿದೆ. ದೇವಾಲಯದ ದಕ್ಷಿಣಕ್ಕೆ ಯಾಳಗಿಯವರು ಇತ್ತೀಚೆಗೆ ಕಟ್ಟಿಸಿದ ಧರ್ಮಶಾಲೆ ಇದೆ. ಕಾಶಿಲಿಂಗನ ಉತ್ತರಕ್ಕೆ ಒಂದು ಬೃಹತ್ ಅಶ್ವಥ ವೃಕ್ಷವಿದೆ. ದೇವಾಲಯದ ಪ್ರಕಾರದ ಹೊರಗೆ ಉತ್ತರಕ್ಕೆ ರಸ್ತೆ ಹೊಂದಿ ಸದಾನಂದ ಪೂರ್ವಜರ ಒಂದು ಬಾವಿಯಿದೆ. ಅದನ್ನೀಗ ತುಳಜಪ್ಪನ ಬಾವಿ ಎಂದೇ ಜನ ಕರೆಯುತ್ತಾರೆ. ಸದಾನಂದರ ಮೊದಲಿನ ಹೆಸರು "ತುರಜೆ" ಎಂಬುದೇ ಕನ್ನಡದಲ್ಲಿ "ತುಳಜಪ್ಪ" ಆಗಿರಬೇಕು.

ಸದಾನಂದ ದೇವಸ್ಥಾನದ ಪೂಜಾ ಕಾರ್ಯವನ್ನು ಸ್ಥಳೀಯ ನಿಂಬರಗಿ ಮನೆತನದ ಬ್ರಾಹ್ಮಣರು ನಡೆಸಿಕೊಂಡು ಬಂದಿದ್ದಾರೆ. ಅದಕ್ಕಾಗಿ ಕೊಣ್ಣೂರು ದೇಸಾಯಿಯವರು ಈ ದೇವಸ್ಥಾನದ ಬಳಿ ಇದ್ದ ತಮ್ಮ ಭೂಮಿಯನ್ನು ಇವರಿಗೆ ಉಂಬಳಿಯಾಗಿ ಕೊಟ್ಟದ್ದಾರೆ. ಸದಾನಂದರ ಪುಣ್ಯಥಿತಿಯನ್ನು ಶ್ರಾವಣ ಶುದ್ಧ ಷಷ್ಠಿಯಿಂದ ಮೂರು ದಿವಸಗಳವರೆಗೆ ಆಚರಿಸುತ್ತಿದ್ದು, ಈಗ ಪಲ್ಲಕ್ಕಿ ಉತ್ಸವ, ಬ್ರಾಹ್ಮಣ ಪೂಜೆ, ಗೋಪಾಳ ಕಾವಲಿ ಹಾಗೂ ಅನ್ನ ಸಂತರ್ಪಣೆಗಳು ಜರುಗುತ್ತವೆ. ಈ ಪುಣ್ಯ ತಿಥಿಯ ಆಚರಣೆಯು ಇಂದಿಗೂ ಸಹ ಅಖಂಡವಾಗಿ ನಡೆದುಬಂದಿರುವುದು ಸದಾನಂದರ ಮಹಿಮೆಯೆಂದೇ ಹೇಳಬೇಕು.[೧೬]

ಪರಶುರಾಮೇಶ್ವರ ದೇವಾಲಯ :

ಜಮುಖಂಡಿ ಸಂಸ್ಥಾನದ ಪ್ರಥಮ ದೊರೆಯಾದ ರಾಮಚಂದ್ರ ಪಂತ ಅಪ್ಪಾಸಾಹೇಬರ ಮಗನಾದ ಗೋಪಾಳರಾವ್ ಪಟವರ್ಧನರು ತಮ್ಮ ತಂದೆಯವರಾದ ಶ್ರೀ ರಾಮಚಂದ್ರ ಪರಶುರಾಮ ಪಟವರ್ಧನ ಇವರ ಸ್ಮರಣಾರ್ಥವಾಗಿ ಇಂದಿನ ಸರಕಾರಿ ಕಛೇರಿಯ ಆವರಣದಲ್ಲಿ ಒಂದು ಶೈವ ದೇವಾಲಯವನ್ನು ಸ್ಥಾಪಿಸಿ, ಗರ್ಭಗುಡಿಯಲ್ಲಿ ಒಂದು ಶಿವಲಿಂಗ ಮುಂದೆ ನಂದಿಯ ಮೂರ್ತಿಯನ್ನು ಕ್ರಿ.ಶ. ೧೮೧೮ ರಲ್ಲಿ ಸ್ಥಾಪಿಸಿದರು. ಈ ದೇವಾಲಯಕ್ಕೆ ರಾಮಚಂದ್ರ ಪರಶುರಾಮೇಶ್ವರ ದೇವಾಲಯವೆಂದು ಹೆಸರಿಟ್ಟರು. ಆದರೆ ಇಂದು ಇದಕ್ಕೆ ಪರಶುರಾಮೇಶ್ವರ ದೇವಾಲಯವೆಂದು ಕರೆಯುತ್ತಾರೆ.

ಈ ದೇವಾಲಯದ ಪ್ರವೇಶ ದ್ವಾರವು ಉತ್ತರಾಭಿಮುಖವಾಗಿದ್ದು, ಕಲ್ಲಿನ ಚೌಕಟ್ಟಿನಿಂದ ನಿರ್ಮಿಸಲಾಗಿದೆ. ದೇವಾಲಯಕ್ಕೆ ವಿಶಾಲವಾದ ಪ್ರಾಂಗಣವಿದೆ. ಮುಂಭಾಗವು ಗಾಜಿನ ಚೌಕಟ್ಟಿನಿಂದ ಅಲಂಕೃತವಾಗಿದೆ. ಇದರ ಸಭಾಮಂಟಪವು ಸನಾತನ ಮಾದರಿಯ ಕಟ್ಟಿಗೆಯ ಕಂಭ, ತೊಲೆ, ಜಂತಿಗಳನ್ನು ಜೋಡಿಸಿ ಸುಂದರವಾಗಿ ಕಟ್ಟಲಾಗಿದೆ. ಮೇಲ್ಭಾಗವು ಕಮಾನಿನಾಕಾರದ ಲತಾಮಂಟಪದಿಂದ ಅಲಂಕೃತವಾಗಿದೆ. ನವರಂಗವು ೧೬ ಕಟ್ಟಿಗೆ ಕಂಬಗಳಿಂದ ಶೋಭಿಸುತ್ತದೆ. ದೇವಾಲಯದ ಅಂತರಾಳವನ್ನು ನಾಲ್ಕು ಕಲ್ಲಿನ ಕಂಬಗಳ ಮೇಲೆ ಚಾವಣಿ ಕಲ್ಲುಗಳನ್ನು ಜೋಡಿಸಿ ಕಟ್ಟಲಾಗಿದೆ. ಕಂಬಗಳ ಮೇಲಿಂದ ಕಮಾನಿನಾಕಾರದ ಲತಾ – ಮಂಟಪವು ಶೋಭಿಸುತ್ತದೆ. ಗರ್ಭಗುಡಿಯ ಬಾಗಿಲಿಗೆ ಕಲ್ಲಿನ ಚೌಕಟ್ಟಿದ್ದು ಮಧ್ಯದಲ್ಲಿ ಗಣಪತಿಯ ಚಿತ್ರವಿದೆ. ಗರ್ಭಗುಡಿಯ ಮಧ್ಯಭಾದಲ್ಲಿದ್ದ ಸುಂದರವಾದ ಕಟ್ಟಿಗೆಯ ಮಂಟಪದಲ್ಲಿ ಜಲಾರಿ ಈಶ್ವರ ಲಿಂಗವಿದ್ದು, ಮುಂದೆ ನಂದಿಯ

ಮೂರ್ತಿಯಿದೆ. ಹಿಂಭಾಗದಲ್ಲಿದ್ದ ಚೌಕಟ್ಟಿನಲ್ಲಿ ವೆಂಕಟೇಶ್ವರ ಹಾಗೂ ಮುರಲೀ ಧರಿಸಿದ ಕೃಷ್ಣನ ಮೂರ್ತಿಗಳನ್ನು ಇತ್ತಿಚೆಗೆ ಇಟ್ಟಂತೆ ತೋರುತ್ತದೆ. ಗರ್ಭಗುಡಿಯ ಒಳಭಾಗದಲ್ಲಿ ಕಲ್ಲಿನ ಚಾವಣಿಗಳನ್ನು ಜೋಡಿಸಲಾಗಿದೆ. ಹೊರಭಾಗದಲ್ಲಿ ಪಾವಟಿಗೆ ಆಕಾರದಂತೆ ಕಟ್ಟಿ ಮೇಲೆ ಗೋಲಾಕಾರದ ಶಿಖರವನ್ನು ನಿರ್ಮಿಸಿ ಸುವರ್ಣದ ಕಳಶವನ್ನಿರಿಸಲಾಗಿದೆ.

ಹಿಂದಕ್ಕೆ ಈ ದೇವಾಲಯದಲ್ಲಿ ಪ್ರತಿ ಸೋಮವಾರ ರುದ್ರಾಭಿಷೇಕ, ಪಲ್ಲಕ್ಕಿ ಉತ್ಸವ, ಸಂಗೀತ, ನೃತ್ಯ ಮೊದಲಾದ ಭಕ್ತಿಯುತವಾದ ಕಾರ್ಯಕ್ರಮಗಳು ಜರುಗುತ್ತಿದ್ದವು. ಅಲ್ಲದೆ ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ದಿನ ನಿತ್ಯ ಅನ್ನ ಸಂತರ್ಪಣೆ ದಾನ-ದಕ್ಷಿಣೆಯ ಕಾರ್ಯಗಳು ನಡೆಯುತ್ತಿದ್ದವು. ಪುಣ್ಯವಧುಗಳಿಂದ ನೃತ್ಯ ಸೇವೆಯಾಗುತ್ತಿತ್ತು. ಅಂದಿನ ಸಂಸ್ಥಾನಿಕರಾದ ಶ್ರೀಯುತ ಗೋಪಾಳರಾವ್ ಪಟವರ್ಧನರು ಈ ದೇವಸ್ಥಾನಕ್ಕೆ ೨೦ ಎಕರೆ ಭೂಮಿಯನ್ನು ದತ್ತಿಹಾಕಿ ಕೊಟ್ಟಿದ್ದಾರೆ. ಆ ಜಮೀನುಗಳು ಇಂದಿಗೂ ಕಡಕೋಳ ಹಾಗೂ ಜಮಖಂಡಿ ಗ್ರಾಮಗಳ ಹದ್ದಿನಲ್ಲಿವೆ. ಅಲ್ಲದೆ ಸರಕಾರದಿಂದ ಇಂದಿಗೂ ಸಹ ಈ ದೇವಸ್ಥಾನಕ್ಕೆ ಸಹಾಯಧನ ಕೊಡಲಾಗುತ್ತದೆ.

ಶ್ರೀ ಗೋಪಾಳರಾವ್ ಪಟವರ್ಧನರು ಈ ದೇವಾಲಯದ ಪೂರ್ವಕ್ಕೆ ತಾವು ವಾಸಿಸಲು ಒಂದು ಅರಮನೆಯನ್ನು ನಿರ್ಮಿಸಿದ್ದರು. ಆ ಅರಮನೆಯಲ್ಲಿಯೇ ಕ್ರಿ.ಶ. ೧೯೮೦ರವರೆಗೆ ಜಮಖಂಡಿಯ '.ಎಮ್.ಎಫ್.ಸಿ. ಕೋರ್ಟು ನಡೆಯುತ್ತಿತ್ತು. ಅದರ ಸಮೀಪದಲ್ಲಿಯೇ ಒಂದು ಬಾವಿಯಿದ್ದು, ಅದಕ್ಕೆ ಸರಕಾರಿ ಬಾವಿಯೆಂದು ಕರೆಯುತ್ತಿದ್ದರು. ಈ ಬಾವಿಯ ನೀರನ್ನು ಕುಡಿಯಲು ಮತ್ತು ಪೂಜೆಗಳಿಗೆ ಉಪಯೋಗಿಸುತ್ತಿದ್ದರು. ಅಲ್ಲಿ ಒಂದು ನೀರಿನ ಕಾರಂಜಿ ಇತ್ತು.[೧೭]

ಉಮಾರಾಮೇಶ್ವರ ದೇವಾಲಯ :

ಜಮಖಂಡಿ ಸಂಸ್ಥಾನಿಕರಾದ ರಾಮಚಂದ್ರರಾವ್ ಅಪ್ಪಾಸಾಹೇಬರು ಈ ದೇವಾಲಯವನ್ನು ಕಟ್ಟಿಸಿದರು. ಇವರ ಕಾಲದಲ್ಲಿ ಕ್ರಿ.ಶ. ೧೮೫೭ರ ಬಂಡಾಯವು ಪ್ರಾರಂಭವಾಗಿ ದೇಶಾದ್ಯಂತ ಆಂಗ್ಲ ವಿರೋದಿ ಚಟುವಟಿಕೆಗಳು ಪ್ರಾರಂಭವಾಗಿದ್ದವು. ಆಗ ಜಮಖಂಡಿಯಲ್ಲಿಯೂ ಸಹ ಬ್ರಿಟಿಷ್ ವಿರೋಧಿ ಕಾರ್ಯಗಳು ಪ್ರಾರಂಭವಾಗಿದ್ದರಿಂದ ಅದರ ಹಿಂದೆ ಸಂಸ್ಥಾನಿಕರ ಕೈವಾಡವಿರಬಹುದೆಂದು ಅನುಮಾನಿಸಿದ ಬ್ರಿಟಿಷ್ ಸರಕಾರವು ಜಮಖಂಡಿಯ ಅರಸನ ಬಂಧನಕ್ಕೆ ಆದೇಶವಿತ್ತಿತ್ತು. ಆಗ ಜಮಖಂಡಿ ಬ್ರಿಟಿಷ್ ಪೊಲಿಟಿಕಲ್ ಏಜೆಂಟನಾದ ಮ್ಯಾನ್‌ಸನ್ನನು ಬಂಡಾಯದ ಆಪಾದನೆಯ ಮೇಲೆ ರಾಮಚಂದ್ರರಾವ್ ಅಪ್ಪಾಸಾಹೇಬರನ್ನು ಬಂಧಿಸಿ ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿರಿಸಿದನು. ನಂತರ ನಿರಪರಾಧಿ ಎಂದು ಬಿಡುಗಡೆಗೊಂಡ ಅಪ್ಪಾಸಾಹೇಬರು ಅದಿಕಾರಕ್ಕೆ ಬಂದು ತಮ್ಮ ಮೊದಲಿದ್ದ ಅರಮನೆಯನ್ನು ಬಿಟ್ಟು ಜಮಖಂಡಿ ನಗರದ ಪಶ್ಚಿಮ ದಿಕ್ಕಿಗಿದ್ದ ರಾಮತೀರ್ಥದಲ್ಲಿ ಭವ್ಯವಾದ ಅರಮನೆಯನ್ನು ಕಟ್ಟಿಸಿ ಅಲ್ಲಿಯೇ ಇರಹತ್ತಿದರು. ಆ ಅರಮನೆಯಲ್ಲಿ ಬ್ರಿಟಿಷ್ ವಿರೋದಿ ಮದ್ದುಗುಂಡುಗಳನ್ನು ಸಂಗ್ರಹಿಸಿ, ಬಂಡಾಯವೇಳಲು ಹೊಂಚು ಹಾಕುತ್ತಿದ್ದಾಗ ಬ್ರಿಟಿಷರಿಗೆ ವಿಷಯವು ಗೊತ್ತಾಗಿ ಶೋಧದ ತಪಾಸಣೆ ಮಾಡುವ ಮುಂಚೆ ಮದ್ದು ಗುಂಡುಗಳನ್ನು ಪಕ್ಕದ ಬಾವಿಯಲ್ಲಿ ಎಸೆದು ಕಲ್ಲು ಮಣ್ಣುಗಳಿಂದ ಮುಚ್ಚಿ "ಉಮಾರಾಮೇಶ್ವರ ದೇವಾಲಯ"ವನ್ನು ಕಟ್ಟಿಸಿದರು ಎಂದು ಹೇಳುತ್ತಾರೆ.

ಉಮಾರಾಮೇಶ್ವರ ದೇವಾಲಯಕ್ಕೆ ಸಂಸ್ಥಾನಿಕರು ಕಟ್ಟೆ ಕೆರೆಯಿಂದ ಪೈಪುಗಳನ್ನು ಜೋಡಿಸಿ ನೀರಿನ ವ್ಯವಸ್ಥೆ ಮಾಡಿದ್ದರು. ಈ ದೇವಾಲಯದ ಮುಂದಿನ ಭವ್ಯವಾದ ಪ್ರವೇಶದ ದ್ವಾರದ ಮುಂದೆ ಸುಂದರವಾದ ಹೂದೋಟವನ್ನು ನಿರ್ಮಿಸಿದ್ದರು. ಮಧ್ಯದಲ್ಲಿ ನೀರಿನ ಕಾರಂಜಿಯು ಸದಾಕಾಲ ಪುಟಿಯುತ್ತಿತ್ತು. ಈ ದೇವಾಸ್ಥಾನದ ಪ್ರವೇಶ ದ್ವಾರದ ಮೇಲ್ಭಾಗದಲ್ಲಿ ಸುಮಾರು ೬೫' ಉದ್ದ ೩೫' ಅಗಲುಳ್ಳ ವಿಶಾಲವಾದ ನಗಾರಿಖಾನಾ ಅಥವಾ ಚೌಗಡ ನುಡಿಸುವ ಸ್ಥಳವಿದ್ದು, ದಿನನಿತ್ಯ ಬೆಳಗಿನ ಜಾವ ಪೂಜಾಸಮಯದಲ್ಲಿ ನಗಾರಿ, ತಾಸೆವಾದನ, ಜಾಂಗಟಿ, ತುತ್ತುರಿವಾದನ ನಡೆಯುತ್ತಿತ್ತು.

ದೇವಸ್ಥಾನದ ಸಭಾಮಂಟಪವು ಪರಶುರಾಮ ದೇವಾಲಯದ ಮಾದರಿಯಲ್ಲಿ ಕಟ್ಟಲಾಗಿದೆ. ಗರ್ಭಗುಡಿಯಲ್ಲಿ ಈಶ್ವರ ಲಿಂಗವಿದೆ ಮುಂದೆ ನಂದಿಯ ಮೂರ್ತಿಯಿದೆ. ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಮತ್ತು ಗಣಪತಿ ಹಬ್ಬದಲ್ಲಿ ಇಲ್ಲಿ ಅತ್ಯಂತ ವೈಭವದಿಂದ ಉತ್ಸವವು ನಡೆಯುತ್ತಿತ್ತು. ಆ ಸಮಯದಲ್ಲಿ ರಾಮತೀರ್ಥ ಅರಮನೆಯಿಂದ ಅರಸರು ಗಜಾರೂಢರಾಗಿ ತಮ್ಮ ರಾಜವೈಭವದಿಂದ ಸಮಸ್ತ ಸರಂಜಾಮದೊಂದಿಗೆ ಸೈನಿಕರು ಸಶಸ್ತ್ರಧಾರಿಯಾಗಿ ಬ್ಯಾಂಡ್ ಬಾರಿಸುತ್ತಾ ಅತ್ಯಂತ ಸಡಗರದಿಂದ ನಗರ ರಾಜಬೀದಿಯಲ್ಲಿ ಸಂಚರಿಸುತ್ತಾ ಈ ಉಮಾರಾಮೇಶ್ವರ ದೇವಸ್ಥಾನಕ್ಕೆ ಬರುತ್ತಿದ್ದರು. ಈ ಉತ್ಸವ ನೋಡಲು ಸುತ್ತಮುತ್ತಲಿನ ಗ್ರಾಮದ ಜನರು ಬರುತ್ತಿದ್ದರೆಂದು ಹೇಳುತ್ತಾರೆ. ಈ ಉತ್ಸವವು ಮೈಸೂರು ದಸರಾ ಮಹೋತ್ಸವದಲ್ಲಿ ನಡೆಯುವ ಜಂಬೂಸವಾರಿ ಉತ್ಸವವನ್ನು ಹೋಲುತ್ತಿತ್ತು ಎಂದು ಹೇಳುತ್ತಾರೆ. ಈ ದೇವಾಲಯದಲ್ಲಿ ಹಿಂದಕ್ಕೆ ಪಿ.ಬಿ.ಹೈಸ್ಕೂಲಿನಲ್ಲಿ ಕಲಿಯುವ ಬಡ ವಿದ್ಯಾರ್ಥಿಗಳಿಗೆ ದಿನ ನಿತ್ಯದ ಭೋಜನದ ವ್ಯವಸ್ಥೆಯನ್ನು ಮಾಡಲಾಗುತ್ತಿತ್ತು. ಅಲ್ಲದೆ ರಾತ್ರಿ ಶಾಲೆ ನಡೆಯುತ್ತಿತ್ತು. ಅಂದರೆ ಪ್ರೌಢರಿಗೆ ಶಿಕ್ಷಣವನ್ನು ಕೊಟ್ಟು ಸಾಕ್ಷರರನ್ನಾಗಿ ಮಾಡುವ ವ್ಯವಸ್ಥೆಯಿತ್ತು. ಅದರಂತೆ ಇಂದಿನ ಬನಶಂಕರಿ ಮಹಿಳಾ ಶಾಲೆಯಲ್ಲಿ ವ್ಹರ್ನಾಕ್ಯುಲರ ಶಾಲೆ ನಡೆಯುತ್ತಿದ್ದು ಅವರಿಗೂ ಕೂಡಾ ಉಚಿತ ಊಟದ ವ್ಯವಸ್ಥೆ ಮಾಡಲಾಗಿತ್ತು.

ಬೇಳೆಯ ಬಸಪ್ಪನ ಗುಡಿ :

ಜಮಖಂಡಿ ನಗರದ ದೇಸಾಯಿಯವರ ವಾಡೆಯ ಹತ್ತಿರ ಒಂದು ವಿಶಾಲವಾದ ಕಟ್ಟೆಯಿದೆ ಅದರ ಮದ್ಯದಲ್ಲಿ ಒಂದು ಭವ್ಯವಾದ ಪುರಾತನ ಆಲದ ಮರವಿದೆ, ಆದ್ದರಿಂದ ಆ ಸ್ಥಳಕ್ಕೆ ಅರಳಿ ಕಟ್ಟೆ ಎಂದು ಕರೆಯುತ್ತಾರೆ. ಮತ್ತು ಆ ಓಣಿಗೆ ಅರಳಿಕಟ್ಟಿ ಓಣಿ ಎಂದು ಹೆಸರು. ಜಮಖಂಡಿ ನಗರವಾಸಿಗಳಿಗೆಲ್ಲರಿಗೂ ಈ ಸ್ಥಳವು ಚಿರಪರಿಚಿತವಾಗಿದೆ. ಅದರ ಸಮೀಪದಲ್ಲಿಯೇ ಪೂರ್ವಾಭಿಮುಖವಾಗಿ ಒಂದು ಪುರಾತನ ಬಸವೇಶ್ವರ ಗುಡಿಯಿದೆ. ಇದಕ್ಕೆ "ಬೇಳೆ ಬಸಪ್ಪನ ಗುಡಿ" ಎಂದು ಕರೆಯುತ್ತಾರೆ. ಈ ಹೆಸರು ಬರಲು ಅನೇಕ ಕಾರಣಗಳಿವೆ.

೧) ಹಿಂದಕ್ಕೆ ಗುರುವಾರ ಸಂತೆಯ ದಿವಸ ಬೆಳೆಯ ಕಾಳುಗಳನ್ನು (ತೊಗರಿ, ಕಡಲೆ, ಉದ್ದು, ಹೆಸರು) ಈ ಗುಡಿಯ ಹತ್ತಿರ ಕುಳಿತು ಮಾರುತ್ತಿದ್ದರಂತೆ ಹಿಗಾಗಿ ಈ ಸ್ಥಳಕ್ಕೆ ಬ್ಯಾಳಿ ಬಜಾರ ಎಂದು ಕರೆಯುತ್ತಿದ್ದರು, ಜಮಖಂಡಿಯಲ್ಲಿ ಹೀಗೆ ಜೋಳದ ಬಜಾರ, ಮೆಣಶಿನಕಾಯಿ ಬಜಾರ ಎಂದು ಹೆಸರುಗಳಿವೆ. ಹಾಗೆಯೇ ಇದಕ್ಕೆ ಬೇಳೆಯ ಬಜಾರ ಎಂದು

ಕರೆಯುತ್ತಿದ್ದುದು ಸಹಜ. ಈ ಬೇಳೆಯ ಬಜಾರವು ಬಸವಣ್ಣನ ಗುಡಿಯ ಹತ್ತಿರವೇ ಇದ್ದುದ್ದರಿಂದ ಈ ದೇವಾಲಯಕ್ಕೆ ಬ್ಯಾಳಿ ಬಸಪ್ಪನ ಗುಡಿ ಎಂದು ಹೇಳುತ್ತಾರೆ.

೨) ಅದರಂತೆ ಕೆಲವು ಭಾವುಕರು – ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯದ (ಜ್ಯೋತಿರ್ಲಿಂಗದ) ಮುಂದಿದ್ದ ನಂದಿಯ ಪ್ರತಿರೂಪವೇ ಈ ಬಸವಣ್ಣ ಎಂದು ಭಾವಿಸಿ ಜನ ಇಲ್ಲಿ ಆರಾಧಿಸುತ್ತಾರೆ. ಪವಾಡ ಸದೃಶ್ಯದಿಂದ ಭಕ್ತರು ತಂದಿದ್ದ ಬೇಳೆಯ ಕಾಳುಗಳನ್ನು ಮತ್ತು ಬೆಲ್ಲವನ್ನು ತಿಂದು ಮುಗಿಸಿದ್ದರಿಂದ ಈ ಬಸವನ ಮೂರ್ತಿಗೆ ಬೇಳೆಯ ಬಸಪ್ಪನೆಂದು ಮತ್ತು ಗುಡಿಗೆ ಬ್ಯಾಳಿ ಬಸಪ್ಪನ ಗುಡಿ ಎಂದು ಕರೆಯುತ್ತಾರೆ. ಹೆಸರು ಬರಲು ಏನೇ ಕಾರಣವಿದ್ದರೂ ಪರಂಪರಾಗತವಾಗಿ ಈ ದೇವಾಲಯಕ್ಕೆ ಬ್ಯಾಳಿ ಬಸಪ್ಪನ ಗುಡಿ ಎಂದು ಜನರು ಕರೆಯುತ್ತಾರೆ. ಇಂದಿಗೂ ಜಾಗೃತವಾದ ದೇವಸ್ಥಾನವಾಗಿದ್ದು ಅರಳಿಕಟ್ಟಿಯ ಓಣಿಯ ಜನರು ಮತ್ತು ನ್ಯಾಮಗೌಡರ ಓಣಿಯ ಜನರು ಬಹಳ ಭಕ್ತಿಯಿಂದ ದೇವರಿಗೆ ನಡೆದುಕೊಳ್ಳುತ್ತಾರೆ. ಪ್ರತಿ ಅಮವಾಸ್ಯೆಗೆ ಕಾಯಿ, ಕರ್ಪೂರ, ನೈವೇದ್ಯವನ್ನು ಅರ್ಪಿಸುತ್ತಿರುವುದು ವಿಶೇಷ.

ದೇವಾಲಯದ ರಚನೆ :

ದೇವಾಲಯದ ಗರ್ಭಗುಡಿಯ ಬಾಗಿಲು ಕಲ್ಲಿನಿಂದ ನಿರ್ಮಿಸಿದ್ದು ಅನೇಕ ಉಬ್ಬುಕಲೆಗಳಿಂದ ಶೋಭಿಸುತ್ತದೆ. ಗರ್ಭಗುಡಿಯ ಮಧ್ಯದಲ್ಲಿ ಬಸವನ (ನಂದಿಯ) ಮೂರ್ತಿಯಿದ್ದು ಮುಂಬದಿಗೆ ಮೊತ್ತಮೊದಲು ಈ ದೇವಾಲಯವು ಒಂದು ಸಾದಾ ಕಲ್ಲಿನಿಂದ ಕಟ್ಟಲಾಗಿದ್ದು ಇದಕ್ಕೆ ಪಾವಟೆಯಾಕಾರದ ಶಿಖರವಿತ್ತು. (ದ್ರಾವಿಡ ಶೈಲಿ) ಇದರ ಪ್ರವೇಶ ದ್ವಾರವು ಪೂರ್ವಾಭಿಮುಖವಾಗಿದೆ. ಈ ದೇವಾಲಯವನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಿ ಕಟ್ಟಲಾಗಿದೆ. ಇದರ ಅಂತರಾಳವನ್ನು ಕ್ರಿ.ಶ. ೧೯೯೭ ರಲ್ಲಿ ಅಂದವಾಗಿ ನಿರ್ಮಿಸಲಾಗಿದೆ. ಗರ್ಭಗುಡಿಯ ಮಧ್ಯದಲ್ಲಿ ಸುಂದರವಾದ ಬಸವನ ಮೂರ್ತಿ ಇದ್ದು, ಮುಂಭಾಗದಲ್ಲಿ ಈಶ್ವರಲಿಂಗವಿದೆ. ಈ ದೇವಾಲಯಕ್ಕೆ ಪ್ರದಕ್ಷಿಣ ಪಥವಿದೆ. ಇದಕ್ಕೆ ವಿಶಲವಾದ ಸಭಾಮಂಟಪವಿದ್ದು ಇಲ್ಲಿ ಸದಾಕಾಲ ಭಕ್ತಜನರು ವಿಶ್ರಮಿಸುತ್ತಾರೆ. ದಿನನಿತ್ಯ ತಪ್ಪದೇ ದೇವರ ಪೂಜೆ-ಪುನಸ್ಕಾರಗಳು ನಡೆಯುತ್ತವೆ. ಗಂಟಿ ಮನೆತನದ ಜಂಗಮರು ಈ ದೇವರ ಪೂಜಾರಿಗಳಾಗಿದ್ದಾರೆ. ದೇವಸ್ಥಾನದ ಮುಂಬಾಗದ ಮೇಲೆ ಎಡಬದಿಗೆ ನಂದಿಯ ಮೂರ್ತಿಯಿದೆ. ಮದ್ಯದಲ್ಲಿ ಮುಕ್ಕಾಲು ಭೃಂಗಿಯ ಮೂರ್ತಿಯಿದೆ. ದೇವಾಲಯಕ್ಕೆ ಎತ್ತರದ ಶಿಖರವಿದ್ದು ಮೇಲೆ ಕಳಶವಿದೆ. ಈ ದೇವಾಲಯದ ವಿಶೇಷವೆಂದರೆ ಈ ಓಣಿಯ ಜನರಲ್ಲಿ ಯಾವುದೇ ರೀತಿಯ ತಂಟೆ ತಕರಾರುಗಳು ಉದ್ಭವಿಸಿದರೆ ಓಣಿಯ ಹಿರಿಯ ಜನರು ಈ ದೇವಾಲಯದಲ್ಲಿ ಸಭೆ ಕರೆದು ಅವರ ನ್ಯಾಯನ್ನು ನಿಷ್ಪಕ್ಷಪಾತದಿಂದ ಬಗೆಹರಿಸುತ್ತಾರೆ. ಈ ದೇವಸ್ಥಾನದ ಸಭಾಮಂಟಪದಲ್ಲಿ ನಿಂತು ಹೇಳುವ ಮಾತುಗಳೆಂದರೆ ಅವು ಪ್ರಮಾಣ ಬದ್ಧವಾಗಿ ಹೇಳಿದಂತೆಯೇ ಸರಿ. ಇಲ್ಲಿ ಸುಳ್ಳು ನುಡಿದರೆ ಅವರಿಗೆ ಜಯವಾಗುವುದಿಲ್ಲವೆಂಬ ನಂಬಿಕೆ ಈ ಓಣಿಯ ಎಲ್ಲ ಜನರಲ್ಲಿ ಇಂದಿಗೂ ಇದೆ. ಆದ್ದರಿಂದ ಈ ದೇವಾಲಯವು ಓಣಿಯ ಜನರಿಗೆ ನ್ಯಾಯದೇವನ ನೆಲೆ ಎಂಬ ಭಾವನೆಯಿದೆ.

ಅಮೋಘ ಸಿದ್ದೇಶ್ವರ ದೇವಾಲಯ :

ಜಮಖಂಡಿ ನಗರದ ಉತ್ತರ ದಿಕ್ಕಿನಲ್ಲಿರುವ ಎರಡನೇ ನಂಬರ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಹಿಂಬದಿಗಿದ್ದ ಬಯಲು ಪ್ರದೇಶದಲ್ಲಿ ಅಮೋಘಸಿದ್ದೇಶ್ವರನೆಂಬ ಸಿದ್ಧಿಪುರುಷನ ಪುರಾತನ ದೇವಾಲಯವಿದೆ. ಈ ಸತ್ಪುರುಷನು ಮೂಲತಃ ಬಿಜಾಪೂರ ತಾಲೂಕಿನ ಅರಕೇರಿ ಗ್ರಾಮದವನು. ಅವನು ಆ ಗ್ರಾಮದ ಸಮೀಪದಲ್ಲಿದ್ದ "ಮುಮ್ಮೆಟ್ಟ" ಎಂಬ ಗುಡ್ಡದಲ್ಲಿ ಅದೆಷ್ಟೋ ವರುಷಗಳ ವರೆಗೆ ಘೋರ ತಪಶ್ಚರ್ಯವನ್ನು ಆಚರಿಸಿ ಸಿದ್ಧಿಯನ್ನು ಪಡೆದುಕೊಂಡನು. ಅವರು ತಪೋಭೂಮಿಯಾದ ಮುಮ್ಮೆಟ್ಟ ಗುಡ್ಡವು ಇಂದು ಭಕ್ತರಿಗೆ ಒಂದು ಯಾತ್ರಾ ಸ್ಥಳವಾಗಿದ್ದು. ಪ್ರತಿ ವರ್ಷ ಛಟ್ಟಿ ಅಮವಾಸ್ಯೆಗೆ ಈ ಸಿದ್ದಿ ಪುರುಷನ ಜಾತ್ರಾಮಹೋತ್ಸವವು ಒಳ್ಳೆಯ ಸಡಗರದಿಂದ ನೆರವೇರುತ್ತದೆ.

ಅಮೋಘ ಸಿದ್ದೇಶ್ವರರು ತಮ್ಮ ಸಿದ್ಧಾಟಿಕೆಯಿಂದ ಅನೇಕ ಜನ ಭಕ್ತರನ್ನು ಉದ್ದರಿಸಲು ನಾಡಿನ ನಾನಾ ಭಾಗಗಳನ್ನು ಸಂಚರಿಸುತ್ತಾ ಈ ನಗರಕ್ಕೆ (ಜಮಖಂಡಿಗೆ) ಬಂದು ನೆಲೆಸಿದರೆಂದು ಪ್ರತೀತಿಯಿದೆ. ಮುಂದೆ ಇವರ ಭಕ್ತ ಸಮೂಹವು ಇವರು ನೆಲೆನಿಂತ ಸ್ಥಳದಲ್ಲಿಯೇ ಈ ದೇವಾಲಯವನ್ನು ಕಟ್ಟಿಸಿದರೆಂದು ಹಿರಿಯರು ಹೇಳುತ್ತಾರೆ. ಜಮಖಂಡಿಯ ನಗರವಾಸಿಗಳಾದ ಅರಕೇರಿ ಮತ್ತು ಕತಾಟೆ ಎಂಬ ವೀರಶೈವ ಮನೆತನದವರ 'ಮನೆದೇವರು' ಈ ಅಮೋಘಸಿದ್ಧೇಶ್ವರರು. ಆದ್ದರಿಂದ ಆ ಮನೆತನದವರು ಇಂದಿಗೂ ಸಹ ಅತಿ ಭಕ್ತಿ-ಶ್ರದ್ಧೆಯಿಂದ ಈ ದೇವರಿಗೆ ನಡೆದುಕೊಳ್ಳುತ್ತಾರೆ. ಈ ದೇವಾಲಯಕ್ಕೆ ತಮ್ಮ ಭಕ್ತಿಯ ಕಾಣಿಕೆಗಳನ್ನು ಸಲ್ಲಿಸುತ್ತಿದ್ದರಿಂದ, ಇಲ್ಲಿ ದಿನನಿತ್ಯ ಪೂಜೆ - ಪೂರಸ್ಕಾರಗಳು ವ್ಯವಸ್ಥಿತವಾಗಿ ನಡೆಯುತ್ತವೆ. ಪ್ರತಿ ರವಿವಾರ ಈ ದೇವರಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ.

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಚೌರಸಾಕೃತಿಯ ಕಲ್ಲಿನ ಜಗುಲಿಯ ಮೇಲೆ ಕಟ್ಟಲಾಗಿದೆ. ಗರ್ಭಗುಡಿಯ ಮಧ್ಯದಲ್ಲಿದ್ದ ಪ್ರಭಾವಳಿಯ ನಡುವೆ ಅಮೋಘಸಿದ್ಧೇಶ್ವರ ಮೂರ್ತಿಯನ್ನು ಸ್ಥಾಪಿಸಲಾಗಿದೆ. ದೇವಾಲಯದ ಮುಂಬದಿಗೆ ವಿಶಾಲವಾದ ಕಟ್ಟೆಯಿದ್ದು, ಮಧ್ಯದಲ್ಲಿ ಬೇವಿನ ಮರವಿದೆ. ಎಡಬದಿಗೆ ಪದ್ಮಾವತಿಯ ಚಿಕ್ಕ ಗುಡಿಯಿದೆ. ಗುಡಿಯ ಮುಂದೆ ಒಂದು ಭಾವಣಿ ಕಲ್ಲಿನ ಆಲಗಂಬವಿದ್ದು, ಕೆಳಗೆ ಗೋಲಾಕಾರದ ಬ್ರಹ್ಮಮೂರ್ತಿಯಿದೆ. ಪೂರ್ವಕ್ಕೆ ನಾಗಮೂರ್ತಿಯಿದ್ದು, ಇದಕ್ಕೆ ಪ್ರತಿ ವರ್ಷ ನಾಗರಪಂಚಮಿಯ ದಿವಸ ಭಕ್ತ ಜನರು ಹಾಲನ್ನೆರೆಯುವರು. ಅದರ ಮುಂದೆ ಅಮೋಘಸಿದ್ಧೇಶ್ವರರ ಪಾದುಕೆಗಳಿವೆ. ದೇವಾಲಯದ ಬಲಭಾಗದಲ್ಲಿ ಕಲ್ಲಿನ ಭಾವಣಿಯಿಂದ ಕಟ್ಟಿದ ಕಟ್ಟಡವಿದ್ದು, ಅದನ್ನು ಧರ್ಮಶಾಲೆಯಂತೆ ಉಪಯೋಗಿಸುತ್ತಾರೆ.

ದೇವಸ್ಥಾನದಲ್ಲಿ ನಡೆಯುವ ಉತ್ಸವ ಪ್ರತಿ ವರ್ಷ ಗೌರಿ ಹುಣ್ಣಿಮೆ, ಸಂಕ್ರಾಂತಿ ಮತ್ತು ಯುಗಾದಿ ಈ ದಿನಗಳಲ್ಲಿ ಪಲ್ಲಕ್ಕಿ ಉತ್ಸವ ಅಂಬಲಿಬೋನ, ಅನ್ನಸಂತರ್ಪಣೆ, ಡೊಳ್ಳಿನ ವಾದ್ಯ ಮೇಳಗಳ ಸಮ್ಮೇಳನ ಮತ್ತು ಡೊಳ್ಳಿನ ಪದಗಳ ಸ್ಪರ್ಧೆ ಮೊದಲಾದ ಕಾರ್ಯಕ್ರಮುಗಳು ನಡೆಯುತ್ತವೆ.

ಕಾಡಸಿದ್ದೇಶ್ವರ ದೇವಾಲಯ :

ಇದು ನಗರದ ಮದ್ಯದಲ್ಲಿದ್ದು ಒಂದು ಪುರಾತನ ದೇವಾಲಯವು. ಇಲ್ಲಿ ಸುಮಾರು ೧೮ನೇ ಶತಮಾನದಲ್ಲಿ ಆಗಿ ಹೋದ ಕಾಡಸಿದ್ಧೇಶ್ವರನೆಂಬ ವೀರ ಶೈವ ಸಂತನ ಕರ್ತೃ ಗದ್ದಿಗೆ ಇದೆ. ಇವರು ಮಹಾ ತಪಸ್ವಿಗಳು, ಸಿದ್ದಿಪುರುಷರು ಆಗಿದ್ದು, ತಮ್ಮ ಸಿದ್ದಾಟಿಕೆಯಿಂದ ಅನೇಕ ಭಕ್ತರನ್ನು ಉದ್ದರಿಸಿದ್ದರೆಂದು ಹೇಳುತ್ತಾರೆ. ಈ ದೇವಾಲಯದ ಪ್ರವೇಶ ದ್ವಾರವು ಪಶ್ಚಿಮಾಭಿಮುಖವಾಗಿದ್ದು, ಸುಂದರವಾಗಿ ಒಡೆದ ಕಲ್ಲಿನಿಂದ ಕಟ್ಟಲಾಗಿದೆ. ಮುಂಬಾಗದ ಗೋಡೆಯ ಮೇಲೆ ಎಡಬಲಕ್ಕೆ ನಂದಿಯ ಮೂರ್ತಿಗಳಿವೆ. ಮಧ್ಯದಲ್ಲಿ ಮುಕ್ಕಾಲು ಬೃಂಗಿಯ ಮೂರ್ತಿಯನ್ನು ಕೆತ್ತಲಾಗಿದೆ. ಗೂಡಿಯು ಗಾತ್ರದಲ್ಲಿ ಚಿಕ್ಕದಾಗಿದ್ದು, ಚೌರಾಸಾಕಾರವಾಗಿದೆ. ಪ್ರವೇಶ ದ್ವಾರದ ಒಳಭಾಗದ ಬಲಬದಿಗೆ ಪೂರ್ವಾಭಿಮುಖವಾಗಿದ್ದ ಗದ್ದುಗೆಯ ಮೇಲೆ ಶಿವಲಿಂಗ ಹಾಗೂ ನಂದಿಯ ಮೂರ್ತಿಗಳನ್ನು ಸ್ಥಾಪಿಸಲಾಗಿದೆ.ಇದು ಬಹುಸಂಖ್ಯಾತ ಭಕ್ತರು ಅತ್ಯಂತ ಶ್ರದ್ದೆಯಿಂದ ನಡೆದುಕೊಳ್ಳುತ್ತಾರೆ.

ಜಮಖಂಡಿ ನಗರದಲ್ಲಿ ಯಾರಾದರೂ ತಮ್ಮ ವ್ಯಾಪಾರ ಉದ್ದಿಮೆಯನ್ನು ಪ್ರಾರಂಭಿಸಬೇಕಾದರೆ ಈ ದೇವಸ್ಥಾನಕ್ಕೆ ಅನೇಕ ರೀತಿಯ ಹರಕೆ ಸಲ್ಲಿಸಿ ಪ್ರಾರಂಭಿಸುವ ಪರಂಪರೆ ಇಂದಿಗೂ ಇದೆ. ಅಲ್ಲದೇ ಅನೇಕ ಜನ ಭಕ್ತರು ದಿನನಿತ್ಯ ತಮ್ಮ ಕಾರ್ಯಕ್ಕೆ ಹೋಗುವ ಮುನ್ನ ಈ ಸತ್ಪುರುಷನ ದರ್ಶನ ಪಡೆದುಕೊಂಡು ಹೋಗುವ ಪದ್ಧತಿಯಿದೆ.

ಮೇಲಗಿರಿ ನಿಂಗಪ್ಪನ ಗುಡಿ :

ಇದು ಜಮಖಂಡಿ ನಗರದ ಪಶ್ಚಿಮ ದಿಕ್ಕಿಗಿದ್ದ ಉನ್ನತ ಗುಡ್ಡದ ಮೇಲೆ ಕಟ್ಟಲ್ಪಟ್ಟ ಪುರಾತನ ಶೈವ ದೇವಾಲಯವು. ಇದು ಸುಮಾರು ೩೬೦-೬೫ ಅಡಿ ಎತ್ತರದ ಮೇಲಿದೆ. ಈ ಗಿರಿಯ ಮೇಲೆ ನಿಂತು ನೋಡಿದರೆ ಸಮಗ್ರ ಜಮಖಂಡಿಯ ಚಿತ್ರವು ಕಣ್ಣ ಮುಂದೆ ಕಟ್ಟುತ್ತದೆ. ಅಲ್ಲದೆ ತುಂಬಿ ಹರಿಯುವ ಕೃಷ್ಣಾ ನದಿಯ ದೃಶ್ಯವು ಅತ್ಯಂತ ರಮಣೀಯವಾಗಿ ಕಾಣಿಸುತ್ತದೆ. ಈ ದೇವಾಲಯದ ಪ್ರವೇಶ ದ್ವಾರವು ಪೂರ್ವಾಭಿಮುಖವಾಗಿದ್ದು, ಗರ್ಭಗುಡಿಯ ಮಧ್ಯದಲ್ಲಿ ಜಲಾರಿ ಶಿವಲಿಂಗಗಳಿವೆ ಅವು ಮೂರು ಗಾತ್ರದಲ್ಲಿ ಬೇರೆ ಬೇರೆ ಆಕಾರವನ್ನು ಹೊಂದಿವೆ. ಗುಡಿಯ ಮುಂಭಾಗದಲ್ಲಿದ್ದ ಕಲ್ಲಿನ ಮಂಟಪದ ಮಧ್ಯದಲ್ಲಿ ಸುಂದರವಾದ ನಂದಿಯ ಮೂರ್ತಿಯಿದೆ. ಕ್ರಿ.ಶ.೧೯೬೦ ರಲ್ಲಿ ಈ ದೇವಾಲಯವನ್ನು ಜೀರ್ಣೋದ್ದಾರ ಮಾಡಿದ ಮೇಲೆ ಸುಂದರವಾದ ಶಿಖರವನ್ನು ಆಧುನಿಕ ಶೈಲಿಯಲ್ಲಿ ಕಟ್ಟಲಾಗಿದೆ.

ದೇವಾಲಯದ ಮೇಲ್ಭಾಗದಲ್ಲಿ ನಾಲ್ಕು ದಿಕ್ಕಿನಲ್ಲಿ ನಂದಿಯ ಮೂರ್ತಿಗಳನ್ನು ಕೂಡ್ರಿಸಲಾಗಿದೆ. ಮುಂಭಾಗದ ಮಧ್ಯದಲ್ಲಿ ಮುಕ್ಕಾಲು ಬೃಂಗಿಯ ಮೂರ್ತಿಯಿದೆ. ದೇವಾಲಯದ ಪ್ರಾಂಗಣದಲ್ಲಿ ಶಮಿ ಮತ್ತು ಅಶ್ವಥ ವೃಕ್ಷಗಳಿವೆ. ಕ್ರಿ.ಶ ೧೯೯೯ ರಲ್ಲಿ ಭಕ್ತ ವೃಂದವು ದೇವಾಲಯದ ಬಲಬದಿಗೆ ಒಂದು ಧರ್ಮಶಾಲೆಯನ್ನು ಕಟ್ಟಿಸಿದ್ದಾರೆ.

ಇದು ಬಹು ಜಾಗ್ರತವಾದ ದೇವಸ್ಥಾನವಾಗಿದ್ದು, ಮೊದಲಿನಿಂದಲೂ ಜಮಖಂಡಿಯ ಜನ ಬಹಳ ಭಕ್ತಿಯಿಂದ ಆರಾಧಿಸುತ್ತಾ ಬಂದಿದ್ದಾರೆ. ಪ್ರತಿ ವರುಷ ಶ್ರಾವಣ ಮಾಸದ ಮೂರನೇ ಸೋಮವಾರ

ದಿನ ಲಿಂಗಕ್ಕೆ ಅಭಿಷೇಕ,. ಬುತ್ತಿ ಪೂಜೆ ಅಂಬಲಿ ಬೋನವನ್ನು ಅರ್ಪಿಸುತ್ತಾರಲ್ಲದೆ ಅನ್ನಸಂತರ್ಪಣ ಕಾರ್ಯವು ನಡೆಯುತ್ತದೆ. "ಶ್ರೀಶೈಲದ ಮಲ್ಲಿಕಾರ್ಜುನ ದರ್ಶನದಿಂದ (ಪರವುತ ಮಲ್ಲಯ್ಯನ) ದೊರೆಯುವ ಪುಣ್ಯದ ಫಲವು ಈ ಮೇಲಗಿರಿ ನಿಂಗಪ್ಪನ ದರ್ಶನದಿಂದ ಲಭಿಸುತ್ತದೆಂಬ ಭಾವನೆಯು ಜಮಖಂಡಿ ಜನರಲ್ಲಿ ಇದೆ. ಅದಕ್ಕಾಗಿ ಅನೇಕ ಜನ ಭಕ್ತರು ಈ ಮೇಲಗಿರಿ ನಿಂಗಪ್ಪನ ದರ್ಶನ ಪಡೆದುಕೊಳ್ಳುತ್ತಾರೆ ಹಿಂದಕ್ಕೆ ಈ ದೇವಾಲಯದ ಸುತ್ತಲೂ ಅನೇಕ ಮುಳ್ಳ-ಕಂಠಿ-ರಟಗಳ್ಳಿಯ ಬೆಳೆದದ್ದರಿಂದ ಅಲ್ಲಿಗೆ ಹೋಗುವದು ಬಹಳ ತೊಂದರೆದಾಯಕವಾಗಿತ್ತು. ಆದರೆ ಈಗ ಈ ದೇವಾಲಯಕ್ಕೆ ಹೋಗಲು ಪಾವಟಿಗೆಗಳನ್ನು ನಿರ್ಮಿಸಿ ಸಾಕಷ್ಟು ಅನುಕೂಲತೆಯನ್ನು ಮಾಡಲಾಗಿದೆ.

ರಾಮೇಶ್ವರ ದೇವಾಲಯ (ರಾಮತೀರ್ಥ) :

ಜಮಖಂಡಿ ನಗರದ ಪಶ್ಚಿಮ ದಿಕ್ಕಿಗೆ ಎರಡು ಮೈಲು ಅಂತರದಲ್ಲಿ ರಾಮೇಶ್ವರ ಪುರಾತನ ದೇವಾಲಯವಿದೆ. ಅಯೋಧ್ಯೆಯ ಅರಸನಾದ ರಾಮಚಂದ್ರ ದೇವನು ಲಂಕಾ ಪತಿಯಾದ ರಾವಣನ ವಧೆಗಾಗಿ, ಲಂಕಾಪಟ್ಟಣದ ಮೇಲೆ ದಾಳಿಮಾಡಲು ಪಯಣಿಸುವಾಗ, ಮಾರ್ಗ ಮಧ್ಯದಲ್ಲಿ ಶ್ರೀ ರಾಮೇಶ್ವರನನ್ನು ಪ್ರತಿಷ್ಠಾಪಿನಿದನೆಂಬ ಅಖ್ಯಾಯಿಕೆ ಇಲ್ಲಿದೆ. ಇದು ಅತ್ಯಂತ ಪವಿತ್ರ ಸ್ಥಳವಾಗಿದ್ದರಿಂದ ಜಮಖಂಡಿಯ ಸಂಸ್ಥಾನಿಕರಾದ ರಾಮಚಂದ್ರ ಅಪ್ಪಾಸಾಹೇಬರು ಇಲ್ಲಿ ತಮ್ಮ ಅರಮನೆಯನ್ನು ನಿರ್ಮಿಸಿದರೆಂದು ಹೇಳುತ್ತಾರೆ. ಈ ದೇವಾಲಯವು ಹೊಯ್ಸಳ ಶೈಲಿಯ ಶಿಲ್ಪಕಲೆಯನ್ನು ಹೊಂದಿದೆ. ಗರ್ಭಗೃಹವು ಚೌರಸಾಕಾರವಾಗಿದ್ದು, ಒಳಗೆ ಎತ್ತರವಾದ ಪಾಣಿ ಪೀಠದ ಮೇಲೆ ರಾಮೇಶ್ವರ ಲಿಂಗವಿದೆ.(ಬಾನಲಿಂಗ). ನವರಂಗದ ಮಧ್ಯದಲ್ಲಿ ಏಕಶಿಲೆಯಲ್ಲಿ ನಿರ್ಮಿಸಲಾದ ನಂದಿಯ ಮೂರ್ತಿವಿದೆ. ನವರಂಗಕ್ಕೆ ಮೂರು ಪ್ರವೇಶ ದ್ವಾರವಿದ್ದು, ಮುಂಭಾಗದಲ್ಲಿ ಕಕ್ಷಾಸನಗಳಿಂದ ಕೂಡಿದ ತೆರೆದ ಮುಖಮಂಟಪಗಳಿವೆ ಪ್ರತಿ ವರ್ಷ ಶ್ರಾವಣ ಮಾಸದ ಪ್ರತಿ ಸೋಮವಾರ ಇಲ್ಲಿ ಜಾತ್ರಾ ಮಹೋತ್ಸವವು ನಡೆಯುತ್ತಿದ್ದು, ಕೊನೆಯ ಸೋಮವಾರ ರಥೋತ್ಸವವು ಜರುಗುತ್ತದೆ. [೨೦]

[illegible]

[illegible]

ವೈಷ್ಣವ ದೇವಾಲಯಗಳು

ಲಕ್ಷ್ಮಿ - ನರಸಿಂಹ ದೇವಾಲಯ ಶೂರಪಾಲಿ :

ಜಮಖಂಡಿಯಿಂದ ಉತ್ತರಕ್ಕೆ ೧೦ ಕಿ.ಮೀ ದೂರದಲ್ಲಿ ಕೃಷ್ಣಾ ನದಿಯ ಎಡ ತೀರದಲ್ಲಿರುವ ಶೂರ್ಪಾಲಿಯು ವೈಷ್ಣವರ ಪವಿತ್ರ ಕ್ಷೇತ್ರವಾಗಿದೆ. ಈ ಊರಿನಲ್ಲಿರುವ ಲಕ್ಷ್ಮಿನರಸಿಂಹ ದೇವಾಲಯವು ಪೌರಾಣಿಕ ಹಿನ್ನಲೆಯಾಗಿರುವ ಜಾಗ್ರತಾ ಸ್ಥಳವಾಗಿದೆ. ಪೌರಾಣಿಕ ನಂಬಿಕೆ ಪ್ರಕಾರ ಪರಶುರಾಮನು ಮಹಾದೇವರ ಆಜ್ಞೆಯಂತೆ ಈ ಕ್ಷೇತ್ರದಲ್ಲಿ ಅವತರಿಸಿ ಶ್ರೀ ಸದಾನಂದರೆಂಬ ನಾಮದಿಂದ ಯತಿ ಆಶ್ರಮವನ್ನು ಸ್ವೀಕರಿಸಿದರು. ತಮ್ಮ ನಿತ್ಯಾರ್ಪಣಕ್ಕಾಗಿ ಶ್ರೀ ಲಕ್ಷ್ಮಿನಾರಾಯಣ ಪ್ರಾಣ ದೇವರು ಗರುಡೇಶ್ವರ ಮುಂತಾದ ಪ್ರತಿಮೆಗಳನ್ನಿಟ್ಟುಕೊಂಡಿದ್ದ, ಶ್ರಿ ಸದಾನಂದ ಸ್ವಾಮಿಗಳಿಂದ ಇದಕ್ಕೆ "ಸದಾನಂದ ಮಠ" ಎಂದು ಹೆಸರಾಯಿತು. ಶ್ರೀ ಸದಾನಂದ ಸ್ವಾಮಿಗಳ ಪಾದುಕೆಗಳು ಮಠದಲ್ಲಿವೆ. ದಟ್ಟವಾದ ಗಿಡ - ಮರಗಳ ನಡುವೆ ಪ್ರಶಾಂತವಾದ ಸ್ಥಳದಲ್ಲಿ ಮಹಾಪುಣ್ಯಕರವೆನಿಸಿರುವ ಕೋಟಿ ತೀರ್ಥ, ಚಕ್ರ ತೀರ್ಥ, ಕಂತಿ ತೀರ್ಥ, ಉತ್ತುಂಗ ತೀರ್ಥ, ಮಧೂ ತೀರ್ಥ, ಚಲಕ ತೀರ್ಥ, ಪಿತ್ತ ತೀರ್ಥ, ಋತು ಮೋಚನ ತೀರ್ಥ ಹೀಗೆ ಎಂಟು ವಿಧವಾದ ಅಷ್ಟ ತೀರ್ಥಗಳು ಶೂರಪಾಲಿಯಲ್ಲಿ ಸ್ಥಿರವಾಗಿವೆ ಎಂಬ ಸ್ಥಳಿಯರ ನಂಬಿಕೆ ಇದೆ.

ಪ್ರಾಚೀನವಾದ ಕಲಾಕಾರರ ಪಾಣಿಪೀಠದ ಮೇಲೆ ದಕ್ಷಿಣಾಭಿಮುಖವಾಗಿ ಲಕ್ಷ್ಮೀ ನರಸಿಂಹನ ತೊಡೆಯ ಮೇಲೆ ಆಸೀನಳಾಗಿರುವ ಸುಂದರ ಶಿಲಾ ಮೂರ್ತಿ ಇದೆ. ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದಾ ಹಿಡಿದಿದ್ದು, ಪದ್ಮಧಾರೆಯರಾಗಿದೆ. ಲಕ್ಷ್ಮೀನರಸಿಂಹ ದೇವರ ಎದುರಿಗೆ ಪುರಾತನವಾದ ಅಶ್ವಥ ವೃಕ್ಷವಿದೆ. ಈ ವೃಕ್ಷವನ್ನು "ಪರಶುರಾಮ ಪ್ರತಿಷ್ಠೆ" ಎಂದು ಹೇಳಲಾಗುತ್ತದೆ. ವೈಶಾಖ ಶುದ್ಧ ಪೂರ್ಣಿಮೆ ದಿನ ಶೂರಪಾಲಿಯಲ್ಲಿ ಲಕ್ಷ್ಮೀ ನರಸಿಂಹ ದೇವರ ಜಾತ್ರಾ ಮಹೋತ್ಸವವು ಜರುಗುತ್ತಿದ್ದು, ಅಂದು ರಥೋತ್ಸವ ಇರುತ್ತದೆ. ಆ ದಿನ ಸಹಸ್ರಾರು ಜನ ಭಕ್ತಾದಿಗಳು ದೇಶದ ವಿವಿಧ ಕಡೆಯಿಂದ ಬಂದು ಪಾಲ್ಗೊಳ್ಳುತ್ತಾರೆ.

ಕೊಲ್ಹಾಪುರದ ಶಾಹು ಮಹಾರಾಜರು ಈ ಗ್ರಾಮದ ಬ್ರಾಹ್ಮಣರಿಗೆ ಉಂಬಳಿಯಾಗಿ ಕೊಟ್ಟ ದತ್ತಿ ಹಾಗೂ ವಿಜಾಪೂರ ಆದಿಲ್ ಶಾಹಿ ಆಡಳಿತದವರು ಹಲವಾರು ದಾನಗಳನ್ನು ನೀಡಿದುದರ ಬಗೆಗೆ ದಾಖಲೆಗಳಿವೆ.[೨೧]

ವೆಂಕಟೇಶ್ವರ ದೇವಾಲಯ ಕಲ್ಲಹಳ್ಳಿ :

ಜಮಖಂಡಿಯಿಂದ ಸುಮಾರು ೫ ಕಿ.ಮೀ. ದೂರದಲ್ಲಿರುವ ಕಲ್ಲಹಳ್ಳಿಯ ಗುಡ್ಡದ ಮೇಲೆ ಕ್ರಿ.ಶ. ೧೪ ನೇ ಶತಮಾನದಲ್ಲಿ ನಿರ್ಮಿಸಲಾದ ವೆಂಕಟೇಶ್ವರನ ಪವಿತ್ರ ದೇವಾಲಯವಿದೆ. ಇದು ಒಂದು ಪ್ರಸಿದ್ಧ ಯಾತ್ರಾ ಸ್ಥಳವಾಗಿದ್ದು, ಅನೇಕ ಜನ ಭಕ್ತರ ಕುಲದೈವವಾಗಿದೆ. ಈ ದೇವಸ್ಥಾನದ ಹೊರಗಿರುವ ವರಹಸ್ವಾಮಿ ದೇವಾಲಯ ಪದ್ಮಾವತಿ, ಹನುಮ, ಭೀಮ, ಮದ್ವರ ಶಿಲಾಮೂರ್ತಿಗಳು ಆಕರ್ಷಕವಾಗಿವೆ. ಭಕ್ತರ ಅಭಿಲಾಷಿಗಳನ್ನು ಪೂರ್ಣಗೊಳಿಸುವ ಶ್ರೀನಿವಾಸ ವೆಂಕಟಸ್ವಾಮಿಯು ೫೪೦ ವರ್ಷಗಳ ಪೂರ್ವದಲ್ಲಿ ನಾಗಣ್ಣಯ್ಯ ಹಾಗೂ "ತಿರುಮಲಾಚಾರ್ಯ" ಭಕ್ತರ ಮೇಲೆ ಅನುಗ್ರಹ ತೋರುವ ನಿಮಿತ್ಯ

ಆಂಧ್ರ ಪ್ರದೇಶದ ವೆಂಕಟಾಚಲದಿಂದ ಕರ್ನಾಟಕದ ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ಕಲ್ಲಹಳ್ಳಿಯ ವೇದಾಚಲದ ಮೇಲೆ ಮಾರ್ಗಶೀರ್ಷ ಶುದ್ಧ ಅಷ್ಟಮಿ ಶಕೆ ೧೩೮೮ (ಸನ್ ೧೪೬೬) ಶುಕ್ರವಾರ ಪ್ರಭಾತ ಕಾಲದಲ್ಲಿ ಅವಿರ್ಭೂತನಾದನು. ಭಕ್ತೋದ್ಧಾರಕನಾದ ಈ ವೆಂಕಟಸ್ವಾಮಿಯು ಕಳೆದ ೫೦೦ ವರ್ಷಗಳಿಂದ ಸಹಸ್ರಾರು ಭಕ್ತರನ್ನು ಉದ್ಧರಿಸುತ್ತಾ ಬಂದಿದ್ದಾನೆ. ನಂಬಿದ ಭಕ್ತರಿಗೆ ಇಂಬನ್ನಿತ್ತು ಸಲುಹಿದ್ದಾನೆ ಭಕ್ತಿಯಿಂದ ಬೇಡಿದವರಿಗೆ ಬೇಕಾದುದ್ದನ್ನು ಕೊಟ್ಟು ಕಾಪಾಡಿದ್ದಾನೆ. ಹೀಗೆ ಭಕ್ತಾಭಿಮಾನಿಯಾದ ವೆಂಕಟೇಶ್ವರನ ದರ್ಶನಕ್ಕಾಗಿ ಪ್ರತಿ ವರ್ಷ ನವರಾತ್ರಿಗೆ ದೇಶ – ವಿದೇಶಗಳಲ್ಲಿದ್ದ ಸಹಸ್ರಾರು ಭಕ್ತರು ಆಗಮಿಸಿ ಇಲ್ಲಿ ತಮ್ಮ ಭಕ್ತಿಯ ಸೇವೆಯನ್ನು ಸಲ್ಲಿಸಿ, ಧನ್ಯತೆಯನ್ನು ಪಡೆಯುತ್ತಾರೆ. ತಿರುಪತಿಯ ವೆಂಕಟರಮನನ ದರ್ಶನದಿಂದ ದೊರೆಯುವ ಭಾಗ್ಯವು ಈ ವೇದಗಿರಿಯ (ಕಲ್ಲಹಳ್ಳಿಯ) ವೆಂಕಟೇಶ್ವರನ ದರ್ಶನದಿಂದ ಲಭಿಸುತ್ತದೆಂಬ ಭಾವನೆಯು ಜನರಲ್ಲಿದೆ.[೨೨]

ಯೋಗ ನಾರಾಯಣ ದೇವಾಲಯ :

ಮೇಘ ಪ್ರಭು ದೇವಾಲಯಕ್ಕೆ ಹತ್ತಿಯೆ ಉತ್ತರಾಭೀಮುಖವಾಗಿ "ಯೋಗ ನಾರಾಯಣ" ನೆಂಬ ವೈಷ್ಣವ ದೇವಾಲಯವಿದೆ. ಈ ಯೋಗ ನಾರಾಯಣ ಮೂರ್ತಿಯನ್ನು ಜಮಖಂಡಿಗೆ ತಂದು ಪ್ರತಿಷ್ಠಾಪಿಸಿದ ಬಗೆಗೆ ಒಂದು ಐತಿಹ್ಯವಿದೆ. ಅದರಂತೆ ವೆಂಕಟ ಕೃಷ್ಣಾಚಾರ್ಯ ಕಟ್ಟಿ ಎಂಬುವರು ವೈದ್ಯಕೀಯ ವೃತ್ತಿಯುಳ್ಳುವರಿದ್ದು ಸದಾ ಹರಿಸ್ಮರಣೇಯಲ್ಲಿ ಕಾಲ ಕಳೆಯುತ್ತಿದ್ದರು ಹೀಗಿರುವಾಗ ಒಂದು ಅವರ ಕನಸಿನಲ್ಲಿ ಒಂದು ದಿನ ವಿಷ್ಣು ಮೂರ್ತಿಯು ಬಂದು ನಿಂತು "ನಾನು ಕೆರೂರು ಪಾಳ್ಯ ಕಟಗೇರಿ ಗ್ರಾಮದ ಬಾವಿಯಲ್ಲಿ ಬಿದ್ದಿದ್ದೇನೆ. ನನ್ನನ್ನು ಮೇಲ್ಕೆತ್ತಿಕೊ" ಎಂಬ ಅಶರೀರವಾಣಿಯಂತೆ ಕೂಡಲೇ ವೆಂಕಟಕೃಷ್ಣಾಚಾರ್ಯರು ತಮ್ಮ ಸಮಘಡಿಗರೊಂದಿಗೆ ಕೆರೂರು ಪಾಳ್ಯವನ್ನು ನರಗುಂದದ ಸಂಸ್ಥಾನಿಕರಾದ ವೆಂಕಟರಾವ್ ಬಾವಿಯವರ ಅಧೀನದಲ್ಲಿದ್ದ ಬಾಗಲಕೋಟ ಬಾದಾಮಿಯ ನಡುವಿದ್ದ ಕಟಗೇರಿ ಗ್ರಾಮಕ್ಕೆ ಹೋದರಂತೆ. ಬಾವೆಯವರ ನೆರವಿನಿಂದ ಅಲ್ಲಿದ್ದ ಬಾವಿಯಲ್ಲಿಯ ನೀರನ್ನು ಹೋರತೆಗೆಯಲಾಗಿ ಅಲ್ಲಿ ಐದು ವಿಷ್ಣು ಮೂರ್ತಿಗಳು ದೊರೆತವಂತೆ ಅದರಲ್ಲಿ ಒಂದನ್ನು ವೆಂಕಟಚಾರ್ಯರ ಕಟ್ಟಿಯವರು ಜಮಖಂಡಿಗೆ ತಂದು ಶ್ರಾವಣ ಶುದ್ದ ಶಕೆ ೧೬೬೪ ದುಂಧುಬಿನಾಮ ಸವಂತ್ಸರ ದಿನಾಂಕ: ೬-೮-೧೭೪೨ ರಲ್ಲಿ ತಮ್ಮ ಮನೆಯಲ್ಲಿಟ್ಟು ಪೂಜಿಸಹತ್ತಿದರು. ನಂತರ ಭಾದಪ್ರದ ವದ್ಯ ದಶಮಿ ಶಕೆ ೧೬೭೦ ವಿಭವನಾಮ ಸವಂತ್ಸರ ಸೋಮವಾರ ದಿನಾಂಕ:೧೭-೯-೧೭೪೮ ರಂದು ಯೋಗನಾರಾಯಣ ಮೂರ್ತಿಯನ್ನು ಪ್ರತಿಷ್ಠಾಪಿಸಿ ದೇವಾಲಯವನ್ನು ಕಟ್ಟಲಾಯತಂತೆ ಈ ದೇವಸ್ಥಾನದ ನಿರ್ಮಾಣಕ್ಕೆ ಕೊಣ್ಣೂರ ದೇಸಾಯಿಯವರು ಸಹಾಯ ಸಲ್ಲಿಸಿದರೆಂದು ಹೇಳುತ್ತಾರೆ. ಈದೇವಾಲಯದ ಗರ್ಭಗುಡಿಯ ಮಧ್ಯದಲ್ಲಿ ಯೋಗನಾರಾಯಣ ಸುಂದರವಾದ ಮೂರ್ತಿಯು ಬದ್ದ ಪದ್ಮಾಸನ ಬಂಗಿಯಲ್ಲಿದ್ದು ಎಡಗೈಯಲ್ಲಿ ಚಕ್ರ, ಬಲಗೈಯಲ್ಲಿ ಶಂಖವನ್ನು ಹೊಂದಿದೆ. ಗರ್ಭಗುಡಿಯ ಮೇಲ್ಭಾಗವು ನಾಗರಶೈಲಿಯ ವಿಮಾನ ಗೂಪುರವನ್ನು ಹೊಂದಿದ್ದು, ಮೇಲೆ ಕುಂಭಾಕಾರದ ಶಿಖರವಿದೆ. ದೇವಾಲಯದ ಹೊರಗೋಡೆಯ ಮೇಲ್ಭಾಗದಲ್ಲಿ ವಿವಿದ ಭಂಗಿಗಳಿಂದ ಕೂಡಿದ ಶಿಲಾ ಮೂರ್ತಿಗಳನ್ನು ಕೆತ್ತಲಾಗಿದೆ. (ರಾಮಾಯಣ, ಮಹಾಭಾರತ, ಭಾಗವತದಲ್ಲಿಯ ಅನೇಕ ಪ್ರಸಂಗದ ಚಿತ್ರಗಳನ್ನು ಕೆತ್ತಲಾಗಿದೆ.

ದೇವಾಲಯದ ಬಲಭಾಗದ ಗೋಡೆಯಮೇಲ್ಭಾಗದಲ್ಲಿರುವ ಉಬ್ಬು ಸಂಕೇತಗಳು ಹೀಗಿವೆ.

೧) ವೆಂಕಟೇಶನ ವಿವಾಹ ಪ್ರಸಂಗ

೨) ದ್ರೌಪದಿಯ ಸ್ವಯಂ ವರದಲ್ಲಿ ಪಂಚ ಪಾಂಡವರಲ್ಲಿ ಅರ್ಜುನನ್ನು ಮತ್ಸ್ಯಯಂತ್ರವನ್ನು ಬೇಧಿಸುವ ಪ್ರಸಂಗ.

೩) ಶ್ರೀ ಕೃಷ್ಣನು ಗೋಪಿಕಾಸ್ತ್ರೀಯರೊಡನೆ ಆಡುವ ರಾಸಲೀಲೆಯ ಪ್ರಸಂಗ.

೪) ಗುಡಿಯ ದಕ್ಷಿಣಭಾಗದಲ್ಲಿ ಶ್ರೀ ಕೃಷ್ಣನು ಕಾಳಿಂಗ ಸರ್ಪವನ್ನು ಮರ್ದನ ಮಾಡುವ ಹಾಗೂ ನಾಗಕನ್ನಿಕೆಯರಿಗೆ ಅಭಯಹಸ್ತ ನೀಡುವ ಪ್ರಸಂಗ.(ನಾಗಕನ್ಯೆಯರು ಪತಿಯನ್ನು ಪಾಲಿಸುವಂತೆ ಕೇಳುವ ಪ್ರಸಂಗ).

೫) ಶ್ರೀರಾಮನು ರಾವಣನನ್ನು ಜಯಿಸಿ ಲಂಕೆಯಿಂದ ಪುಷ್ಪಕವಿಮಾನದಲ್ಲಿ ಸೀತಾ ಸಮೇತವಾಗಿ ಅಯೋಧ್ಯಾ ನಗರಿಗೆ ಬರುತ್ತಿರಲು ಭರತನು ಸ್ವಾಗತಿಸುವ ಪ್ರಸಂಗ .

೬) ದೇವಾಲಯದ ಎಡಭಾಗದ ಗೋಡೆಯ ಮೇಲೆ ಸೀತಾ ಸ್ವಯಂ ವರದ ಪ್ರಸಂಗದಲ್ಲಿ ರಾವಣನು ಶಿವಧನುಸ್ಸನ್ನು ಎತ್ತಲು ಪ್ರಯತ್ನಿಸಿ ಹತಾಶನಾದದ್ದು ಮತ್ತು ಶ್ರೀ ರಾಮನು ಎಡಗಾಲಿನಿಂದ ಎತ್ತಿ ಜಯಿಸಿದ ಪ್ರಸಂಗ.

೭) ಗುಡಿಯ ಮುಂಭಾಗದಗೋಡೆಯ ಮೇಲೆ ಜಯ-ವಿಜಯರೆಂಬ ದ್ವಾರಪಾಲಕರ ಮೂರ್ತಿಗಳಿವೆ

ಈ ಯೋಗನಾರಾಯಣ ಪಾದಗಟ್ಟೆಯು ಲಕ್ಕನ ಕೆರೆಯ ಮುಂಭಾಗದಲ್ಲಿದ್ದ ವೆಂಕಟೇಶನ ಗುಡಿಯಲ್ಲಿದೆ. ಈ ಕಟ್ಟಿ ಮನೆತನದ ಆಚಾರ್ಯರೆ ಇಂದು ಈ ದೇವಾಲಯದ ಅರ್ಚಕರಾಗಿದ್ದಾರೆ.

ಶ್ರೀ ರಾಮ ದೇವರ ಗುಡಿ (ಕಣ್ವ ಗಲ್ಲಿ) :

ಮಲ್ಲಿಕಾರ್ಜುನ ದೇವಾಲಯದಿಂದ ಸ್ವಲ್ಪ ಅಂತರದ ಮೇಲೆ (ಕಣ್ವಗಲ್ಲಿಯಲ್ಲಿ) ಪೂರ್ವಕ್ಕೆ ಶ್ರೀ ರಾಮದೇವರ ಗುಡಿಯಿಂದೆ. ಇದು ಉತ್ತರಾಭಿಮುಖವಾಗಿದೆ. ಇದರ ಪ್ರದೇಶದ್ವಾರವನ್ನು ನುಣುಪಾಗಿ ಹೊಡೆದ ಕೆಂಪು ಕಲ್ಲುಗಳಿಂದ ಕಟ್ಟಲಾಗಿದೆ. ಗರ್ಭಗುಡಿಯು ಚೌರಸಾಕೃತಿಯ ಮೇಲೆ ನಿತ್ತಂತಿದೆ. ಇದರ ಒಳಭಾಗವನ್ನು ಕೋನಾಕೃತಿಯ ಭಾವಣಿಕಲ್ಲಿನಿಂದ ಕಟ್ಟಲಾಗಿದೆ. ಗರ್ಭಗುಡಿಯಲ್ಲಿ ಸಿಂಹಾಕೃತಿಯ ಸುಂದರವಾದ ಪ್ರಭಾವಳಿಯಿದ್ದು, ಅದರ ಮಧ್ಯದಲ್ಲಿ ಜಯಪುರದ ಸಂಗಮವರಿ ಕಲ್ಲಿನಿಂದ ಮಾಡಿದ ಶ್ರೀರಾಮ, ಲಕ್ಷ್ಮಣ, ಸೀತಾ ಮತ್ತು ಬಲಬದಿಗೆ ಹನುಮಂತನ ಮೂರ್ತಿಗಳಿವೆ.

ಗರ್ಭಗುಡಿಯ ಅಂತರಾಳವನ್ನು (ಮುಖಮಂಟಪ) ನಾಲ್ಕು ಕಲ್ಲಿನ ಕಂಬಗಳ ಮೇಲೆ ಕಮಾನಾಕಾರವಾಗಿ ಕಟ್ಟಲಾಗಿದೆ. ಗರ್ಭಗುಡಿಗೆ ಪ್ರದಕ್ಷನಪಥವಿದೆ. ಮುಂದೆ ವಿಶಾಲವಾದ ಸಭಾಮಂಟಪವಿದೆ. ಅದರ ಮೇಲ್ಭಾಗದ ಸುತ್ತಲೂ ಕಟ್ಟಿಗೆಯಿಂದ ಮಾಡಿದ ಕಟಂಜನವಿದ್ದು, ಸಭಾಮಂಟಪದಲ್ಲಿ ನಡೆಯುವ ಸಭೆ-ಸಮಾರಂಭಗಳನ್ನು ಪುರಾಣ-ಪುಣ್ಯ ಕಥೆಗಳನ್ನು, ಸಂಗೀತ ಸೇವೆ ಮೊದಲಾದ ಕಾರ್ಯಕ್ರಮಗಳನ್ನು ವೀಕ್ಷಿಸಲು ಸ್ಥಳಾವಕಾಸವಿದೆ. ಈ ದೇವಾಲಯವನ್ನು ಸಂಸ್ಥಾನಿಕರ

ಕಾಲದಲ್ಲಿ (೧೮-೧೯- ನೇ ಶ. ದಲ್ಲಿ) ಕಟ್ಟಿಸಲಾಗಿದೆಯೆಂದು ಹಿರಿಯರು ಹೇಳುತ್ತಾರೆ. ದೇವಾಲಯದ ಎಡ-ಬಲಕ್ಕೆ ಸಾಕಷ್ಟು ಸ್ಥಳಾವಕಾಶವಿದ್ದು ಅಲ್ಲಿ ಅನೇಕ ಮಂಗಲ ಕಾರ್ಯಗಳು ಇಂದಿಗೂ ನಡೆಯುತ್ತವೆ.

ಗರ್ಭಗುಡಿಯ ಮೊಟ್ಟಮೊದಲು ಕರಿಕಲ್ಲಿನ (ಶ್ರೀರಾಮ, ಲಕ್ಷ್ಮಣ, ಸೀತಾ ಮತ್ತು ಹನುಮಂತನ) ಮೂರ್ತಿಗಳಿದ್ದವಂತೆ, ಆದರೆ ಕಾಲಾಂತರದಲ್ಲಿ ಅವು ಛಿನ್ನವಾಗಿದ್ದರಿಂದ ಕ್ರಿ. ಶ ೧೯೬೨ ರಲ್ಲಿ ಅವುಗಳನ್ನು ಜಂಬಗಿ ಹತ್ತಿರ ಕೃಷ್ಣಾನದಿಗೆ ಅರ್ಪಿಸಲಾತಂತೆ. ಮುಂದೆ ಆ ಮೂರ್ತಿಗಳನ್ನು ನೋಡಿದ ಜಂಬಗಿ ಗ್ರಾಮದ ಜನರು ಅವುಗಳನ್ನು ತಂದು ತಮ್ಮ ತಮ್ಮ ಊರಿನ ವಿಠೋಬ ದೇವರ ಗಿಡಿಯಲ್ಲಿ ಇರಿಸಿದರಂತೆ. (ಅವುಗಳನ್ನು ಇಂದಿಗೂ ಅಲ್ಲಿ ಕಾಣಬಹುದು) ಮುಂದೆ ಜಯಪುರ ಬಿಳಿ ಮಾರ್ಬಲ್ ಕಲ್ಲಿನಿಂದ ನಿರ್ಮಿಸಿದ ಸುಂದರವದ ಶ್ರೀರಾಮ, ಲಕ್ಷ್ಮಣ , ಸೀತಾ ಮತ್ತು ಹನುಮಂತ ಮೂರ್ತಿಗಳನ್ನು ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪಿಸಲಾಯಿತಂತೆ.

ಇತ್ತೀಚೆಗೆ ಗರ್ಭಗುಡಿಯೊಂದನ್ನು ಬಿಟ್ಟು ಉಳಿದ ಭಾಗವನ್ನು ಭಕ್ತರು ಜೀರ್ಣೋದ್ಧಾರ ಮಾಡಿದ್ದಾರೆ. ಈ ದೇವಾಲಯದ ಎಡದಿಗೆ ಲೋಕಾಪುರದ ಪರಮಹಂಸ ಸ್ವಾಮಿಗಳ ಪದುಕೆಗಳಿದ್ದವು. ಈಗ ಅವುಗಳನ್ನು ರಾಮಮಂದಿರದ ಕಾರ್ಯಾಲಯದ ಕಚೇರಿಯಲ್ಲಿರಿಸಿ ದಿನ ನಿತ್ಯ ಪುಜಿಸಲಾಗುತ್ತದೆ. ಡೆಂಗರೆ ಮನೆತನದವರೇ ಈ ದೇವಾಲಯದ ಪೂಜೆ-ಪುರಸ್ಕಾರಗಳನ್ನು ಮಾಡುತ್ತಾ ಬಂದಿದ್ದಾರೆ. ಪೂರ್ವಜರು ವಾಸಿಸುವ ಮನೆ. ರಾನಡೆಯವರ ತಂದೆ ದತ್ತೋಪಂತರು ಜಮಖಂಡಿ ಸಂಸ್ಥಾನದಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದರು. ಆಗ ಅವರ ಕುಟುಂಬದ ಸದಸ್ಯರೆಲ್ಲ ಈ ಮನೆಯಲ್ಲಿಯೇ ವಾಸಿಸುತಿದ್ದರು. ಕ್ರಿ. ಶ. ೧೮೮೬ ರ ಜುಲೈ ೩ನೇ ತಾರೀಖಿನ ದಿವಸ ಶ್ರೀ ದತ್ತೋಪಂತ ಹಾಗೂ ಶ್ರೀಮತಿ ಪಾರ್ವತಮ್ಮನವರ ಪುಣ್ಯಗರ್ಭದಲ್ಲಿ ಗುರುದೇವ ರಾಮಚಂದ್ರ ರಾನಡೆಯವರು ಜನ್ಮ ತಾಳಿದ್ದು ಇದೆ ಮನೆಯಲ್ಲಿ ಈ ಪವಿತ್ರ ಸ್ಥಳದಲ್ಲಿ ಹುಟ್ಟಿದ ರಾಮಚಂದ್ರರೇ ಮುಂದೆ ಮಹಾನ್ ತತ್ವಜ್ಞಾನಿಯಾಗಿ ಜಗತ್ತಿಗೆ ಆಧ್ಯಾತ್ಮಿಕ ಬೆಳಕನು ಬೀರಿದರು. ಇವರು ತಮ್ಮ ಬಾಲ್ಯ ಜೀವನವನ್ನು ಇಲ್ಲಿಯೇ ಕಳೆದರು. ಹೀಗಾಗಿ ಈ ಮಂದಿರಕ್ಕೆ ವಿಶೇಷ ಮಹತ್ವ ಬಂದಿದೆ.

ಗುರುದೇವ ರಾನಡೆಯವರು ಜಮಖಂಡಿಯನ್ನು ಬಿಟ್ಟು ಪುಣೆ ನಗರಕ್ಕೆ ಹೋಗಿ ನೆಲೆಸಿದರು. ಆಗ ಅವರ ಶಿಷ್ಯರು ಈ ಮಂದಿರವನ್ನು ಗುರುದೇವನ್ನು ಗುರುದೇವರ ಸಂಬಂಧಿಕರಿಂದ ಖರೀದಿ ತೆಗೆದುಕೊಂಡು ಇಲ್ಲಿ ಪಾರಮಾರ್ಥಿಕ ಸಾಧನೆಯನ್ನು ಮಾಡುಹತ್ತಿದರು. ಹೀಗಾಗಿ ಈ ಮಂದಿರಕ್ಕೆ "ಪರಮಾರ್ಥ ಮಂದಿರ" ಎಂಬ ಹೆಸರು ಬಂದಿತು. ಗುರುದೇವರ ಶಿಷ್ಯ ಬಳಗದವರು ಈ ಮಂದಿರದಲ್ಲಿ ಇಂಚಗೇರಿ ಸಂಪ್ರದಾಯದ, ಗುರುವರ್ಯರಾದ ಸದ್ಗುರು ಸಮರ್ಥ ಗುರುಲಿಂಗಜಂಗಮ ಮಹಾರಾಜರ, ಸ. ಸ. ಭಾವುಸಾಹೇಬ ಮಹಾರಾಜರ, ಸ. ಸ. ಗಿರಿಮಲ್ಲೇಶ್ವರ ಮಹಾರಾಜರ ಹಾಗೂ ಗುರುದೇವ ರಾಮಭಾವು ರಾನಡೆಯವರ ಭಾವಚಿತ್ರಗಳನ್ನಿರಿಸಿ ದಿನ ನಿತ್ಯ ಅವರ ನಾಮಸ್ಮರಣೆ, ಭಜನೆ, ಕೀರ್ತನ ಮೊದಲಾದ ಭಕ್ತಿಯುತ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಹೀಗೆ ಗುರುದೇವ ರನಡೆಯವರ ಅಂದಿನ ಮನೆಯು ಇಂದು ಪರಮಾರ್ಥ ಮಂದಿರವಾಗಿದೆ. ಇತ್ತೀಚೆಗೆ ಈ ಮಂದಿರದ ಧರ್ಮ ದರ್ಶಿಗಳು (ಟ್ರಷ್ಟನವರು) ಭಕ್ತರ ಕಾಣಿಕೆಯಿಂದ ಭವ್ಯವಾದ ಸಭಾಮಂದಿರವನ್ನು ಹಾಗೂ ವಿಶಾಲವಾದ ಪ್ರಾರ್ಥನಾ ಮಂದಿರವನ್ನು ನಿರ್ಮಿಸಿದ್ದಾರೆ. [(೨೯)]

ಶ್ರೀ ಅಪ್ಪಾಸಾಹೇಬ ವಿಠಲ ಮಂದಿರ (ಲಕ್ಕಣ ಕೆರೆ ಹತ್ತಿರ) :

ಈ ದೇವಾಲಯವು ಮುಲತಾಃ ಸ್ಥಾಪನೆಯಾದದ್ದು, ಕ್ರಿ.ಶ. ೧೮೩೦ ರಲ್ಲಿ ಇದನ್ನು ಸ್ಥಾಪಿಸಿದವರೆಂದರೆ ಮರಾಠಾ ಜನಾಂಗದ ಬಡಿಗ ಮತ್ತು ಕಂಬಾರ ಭಕ್ತರಾಗಿದ್ದು, ಪ್ರತಿ ವರುಷ ಆಷಾಢ ಮತ್ತು ಕಾರ್ತೀಕ ಮಾಸದಲ್ಲಿ ದಿಂಡಿ ಸಮೇತ ಪಂಢರಪೂರಕ್ಕೆ ಹೋಗಿ ವಿಠೋಬನ ದರ್ಶನ ಮಾಡಿಕೊಂಡು ಬರುತ್ತಿದ್ದರು. ಈ ಪರಂಪರೆಯು ಎಷ್ಟೋ ವರುಷಗಳ ವರೆಗೆ ನಡೆದು ಬಂದಿತ್ತು. ಮುಂದೆ ಕೆಲವು ವರುಷಗಳ ನಂತರ ಬಡಿಗ-ಕಂಬಾರ ವೃತ್ತಿಯ ಸಮಾಜದವರು ಕೂಡಿ ಪಂಢರಪೂರ ವಿಠೋಬ ದೇವರ ಪ್ರತಿರೂಪವೆಂದು ಭಾವಿಸಿ ಈಗಿದ್ದ (ಕಮಾನಾಕಾರದ ಗೋಡೆಯ ಮಧ್ಯದಲ್ಲಿ) ಕಲ್ಲಿನ ಚಿಕ್ಕ ವಿಠೋಬಾ ಮತ್ತು ರುಕ್ಮಾಯಿಯ ಮೂರ್ತಿಯನ್ನು ಸ್ಥಾಪಿಸಿ ದಿನ ನಿತ್ಯ ದೇವರ ನಾಮಸ್ಮರಣೆ, ಭಜನೆ, ಕಿರ್ತನ ಮೊದಲಾದ ಭಕ್ತಿಯುತವಾದ ಕಾರ್ಯಕ್ರಮಗಳನ್ನು ನಡೆಸಹತ್ತಿದರು. ಹೀಗೆ ಅನೇಕ ವರುಷಗಳವರೆಗೆ ಈ ದೇವಸ್ಥಾನದಲ್ಲಿ ಪೂಜೆ-ಪುರಸ್ಕಾರಗಳು ತಪ್ಪದೇ ನಡೆಯಹತ್ತಿದವು. ಬರಬರುತ್ತಾ ಭಕ್ತರ ಸಂಖ್ಯೆಯು ಬೆಳೆಯಹತ್ತಿ ಅನೇಕ ದೆವತಾ ಕಾರ್ಯಗಳು ನಡೆಯಹತ್ತಿದವು. ಮುಂದೆ ಕ್ರಿ.ಶ. ೧೯೦೨ ರಲ್ಲಿ ಸಂಸ್ಥಾನಿಕರಾದ ಸರ್ ಪರಶುರಮ್ ಭಾವು ಪಟವರ್ಧನರು ಈ ದೇವಾಲಯಕ್ಕೆ ೧,೦೦೦-೦೦ ರೂ. ದೇಣಿಗೆಯನ್ನು ಕೊಟ್ಟರು. ಆ ಮೇಲೆ ಪಶ್ಚಿಮಾಭಿಮುಖವಾಗಿ ಚೌರಸಾಕ್ರತಿಯ (೮' X ೮') ಕಲ್ಲಿನ ಗರ್ಭಗುಡಿಯನ್ನು ಕ್ರಿ.ಶ. ೧೯೦೨ ರಲ್ಲಿ ಕಟ್ಟಿಸಿ ಮಧ್ಯದಲ್ಲಿ ಸುಂದರಾದ ವಿಠೋಬಾ ಮತ್ತು ರುಕ್ಮಾಯಿಯ ಮೂರ್ತಿಗಳನ್ನು ಸ್ಥಾಪಿಸಲಾಯಿತು.

ಕ್ರಿ.ಶ. ೧೯೨೦ ರಲ್ಲಿ ಈ ದೇವಾಲಯದ ಪ್ರವೇಶ ದ್ವಾರವನ್ನು ಅತ್ಯಂತ ಸುಂದರವಾಗಿ ಹೊಡೆದ ಕೆಂಪು ಕಲ್ಲುಗಳಿಂದ ಪಶ್ಚಿಮಾಭಿಮುಖವಾಗಿ ಕಟ್ಟಿಸಲಾಗಿದೆ. ಮುಖಮಂಟಪದ ಎಡ-ಬಲಕ್ಕೆ ಕಪ್ಪುವರ್ಣದ ಸಂಗಮವರಿ ಕಲ್ಲಿನ ಸಿಂಹದ ಮೂರ್ತಿಗಳನ್ನು ಕೆತ್ತಲಾಗಿದೆ. ಪ್ರವೇಶ ದ್ವಾರದ ಮೇಲ್ಭಾಗದಲ್ಲಿ ಚೌಗಡ-ಮಂಟಪವಿದ್ದು, ಪೂಜಾ ಸಮಯದಲ್ಲಿ (ಉತ್ಸವದ ಸಮಯದಲ್ಲಿ) ಅಲ್ಲಿ ಮಂಗಲ ವಾದ್ಯಗಳನ್ನು ನುಡಿಸಲಾಗುತ್ತಿತ್ತು. ದೇವಾಲಯದ ಸಭಾಮಂಟಪದಲ್ಲಿ ಭಜನೆ, ಕೀರ್ತನೆ, ಪುರಾಣ-ಪುಣ್ಯಕಥೆ, ಸಂಗೀತ ಸೇವೆ ಮೊದಲಾದ ದೇವತಾ ಕಾರ್ಯಕ್ರಮಗಳು ಮೊದಲಿನಿಂದಲೂ ನಡೆಯುತ್ತಾ ಬಂದಿವೆ. ಈ ದೇವಾಲಯದ ಅರ್ಚಕರು ಬ್ರಾಹ್ಮಣ ಬಡಜಿಯವರು ಇದ್ದಾರೆ. ದೇವಸ್ಥಾನಕ್ಕೆ ಯಾವದೇ ದತ್ತಿ-ಕಲಾಪಗಳು ನಡೆಯುತ್ತಾ ಬಂದಿವೆಯೆಂದು ಸಮಾಜದ ಹಿರಿಯರು ಹೇಳುತ್ತಾರೆ.

ಈ ದೇವಸ್ಥಾನದ ಗರ್ಭಗುಡಿಯ ಒಳಭಾಗವನ್ನು ನಕ್ಷತ್ರಾಕಾರವಾಗಿ ಭಾವಣಿ ಕಲ್ಲುಗಳನ್ನು ಜೋಡಿಸಿ ಕಟ್ಟಲಾಗಿದೆ. ಹೊರಬದಿಗೆ ಪಾವಟಿಗೆಯಾಕಾರದ ಮೆಟ್ಟಲುಗಳನ್ನು ಕಟ್ಟಿ ವರ್ತುಲಾಕಾರದ ಶಿಖರವನ್ನು ಕ್ರಿ.ಶ. ೧೯೫೨ ರಲ್ಲಿ ನಿರ್ಮಿಸಲಾಗಿದೆ. ಮುಂದೆ ಕ್ರಿ.ಶ. ೧೯೭೫ ರಲ್ಲಿ ಶ್ರೀ ವೇದಾಂತ ಕೇಸರಿ ಮಲ್ಲಿಕಾರ್ಜುನ ಮಹಾಸ್ವಾಮಿಗಳ ಮತ್ತು ಪಂಢರಪೂರದ ಬಾಸ್ಕರ ಮಹರಾಜರ ಅಮೃತಹಸ್ತದಿಂದ (ಸುವರ್ಣಮಯವಾದ) ಕಳಸಾರೋಹಣವು ನೆರವೇರಲ್ಪಟ್ಟಿತು.

ಗರ್ಭಗುಡಿಯ ಅಂತರಾಳದಲ್ಲಿ (ಮುಂಭಾಗದಲ್ಲಿ) ರಜತಮಯವಾದ (ಬೆಳ್ಳಿಯ) ಗರುಡಗಂಭವಿದ್ದು, ಸುತ್ತಲೂ ಗರುಡ, ಹನುಮಂತ, ಲಕ್ಷ್ಮಿ ಹಾಗೂ ನಂದಿವಾಹನ, ಶಿವನ ಚಿತ್ರಗಳನ್ನು

ಅತ್ಯಂತ ಸುಂದರವಾಗಿ ಚಿತ್ರಿಸಲಾಗಿದೆ. (ಸುಮಾರು ೩ ಲಕ್ಷ ರೂ. ವೆಚ್ಚದಲ್ಲಿ ಮಾಡಿದ ರಜತ ಗರುಡಗಂಭ). ಗರ್ಭಗುಡಿಯ ಸುತ್ತಲೂ ಪ್ರದಕ್ಷಣೆ ಪಥವಿದೆ.

ಕಳೆದ ಎರಡು-ಮೂರು ದಶಕಗಳಿಂದ ಈ ದೇವಾಲಯದ ಉಸ್ತುವಾರಿಯನ್ನು ಶ್ರೀ ಬಳವಂತ ಕದಮ, ಗಜಾನನ ಸುತಾರ ಮತ್ತು ಮುರಲೀದರ ಸಾವಂತ ಇವರು ವಹಿಸುತ್ತಾ ಬಂದಿದ್ದಾರೆ.

ದತ್ತಾತೆಯ ಗುಡಿ (ದತ್ತ ಮಂದಿರ) (ಕಿರಾಣಿ ಪೇಟೆ)

ಈ ದೇವಾಲಯವು ಪಶ್ಚಿಮಾಭಿಮುಕವಾಗಿದ್ದು ಪ್ರವೇಶದ್ವಾರವನ್ನು ನುನುಪಾದ ಕಲಿನಿಂದ ಕಮಾನಾಕಾರವಾಗಿ ಕಟ್ಟಲಾಗಿದೆ. ಅದರ ಸಭಾಮಂಟಪವನ್ನು ಕಟ್ಟಿಗೆ ತೊಲೆ ಜಂತಿಗಳನ್ನು ಜೋಡಿಸಿ ನಿರ್ಮಿಸಲಾಗಿದೆ. ಇದರ ಮೇಲ್ಭಾಗದಲ್ಲಿ ಸುತ್ತಲೂ ಕಟಂಜಲವಿದ್ದು, ಸಭಾಮಂಟಪದಲ್ಲಿ ನಡೆಯುವ ಎಲ್ಲಾ ದೇವತಾ ಕಾರ್ಯಕ್ರಮಗಳನ್ನು ವಿಕ್ಷಿಸಲು ಅನುಕೂಲವಾಗಿದೆ. ದೇವಾಲಯದ ಅಂತರಾಳವನ್ನು ಸಹ ಕಟ್ಟಿಗೆಯ ಕಂಬದ ಮೇಲೆ ತೊಲೆ ಜೋಡಿಸಿ ನೀಟಾಗಿ ಕಟ್ಟಲಾಗಿದೆ.

ಗರ್ಭಗುಡಿಯನ್ನು ಕಲ್ಲಿನಿಂದ ನಿರ್ಮಿಸಿದ್ದು, ಒಳಭಾಗದ ಮೇಲೆ ಕಲ್ಲಿನ ಛಾವಣಿಯನ್ನು ನಕ್ಷತ್ರಾಕಾರವಾಗಿ ಜೋಡಿಸಿ ಕಟ್ಟಲಾಗಿದೆ. ಮಧ್ಯದಲ್ಲಿ ಬಿಳಿ ಸಂಗಮವರಿ ಕಲ್ಲಿನ ಸುಂದರವಾದ ತ್ರಿಮೂರ್ತಿ ಧೂತ ದತ್ತಾತ್ರೆಯನ ಮೂರ್ತಿಯಿದೆ. ಬಲಬದಿಗೆ ಗೋಮಾತೆಯ ಮೂರ್ತಿಯಿದ್ದು, ಮುಂದೆ ಪಾದುಕಾ ಕಟ್ಟೆಯಿದೆ. ದೇವಾಲಯಕ್ಕೆ ಪ್ರದಕ್ಷಣಾ ಪಥವಿದೆ.

ಗರ್ಭಗುಡಿಯ ಹಿಂಬದಿಗೆ ಒಂದು ತುಳಸಿ ಕಟ್ಟೆಯಿದ್ದು, ಅದಕ್ಕೆ ಹೊಂದಿಕೊಂಡು ಒಂದು ಅತ್ತಿಯ ಮರವಿದೆ. ಅದರ ಬದಿಯಲ್ಲಿ ಎರಡು ಚಿಕ್ಕ ಶಿವಲಿಂಗಗಳು ಮತ್ತು ಒಂದು ನಂದಿಯ ಮೂರ್ತಿಯಿದೆ.

ಶ್ರೀಯುತ ಮಹಾದೇವ ಕರಂದಿಕರ ಸದ್ಭಕ್ತರು ಈ ದೇವಾಲಯವನ್ನು ಸ್ಥಾಪಿಸಿದರು. ಇವರು ಮೊದಲಿನಿಂದಲೂ (ನರಸೋಬಾವಾಡಿ) ನರಸೋಬಾವಾಡಿ (ಕಾಗವಾಡ ಹತ್ತಿರ) ಯ ದತ್ತಾತ್ರೆಯನ ಪ್ರಥಮ ಭಕ್ತರಾಗಿದ್ದರು. ಆ ದತ್ತ ದೇವನ ಪ್ರತಿರೂಪವೆಂದು ಭಾವಿಸಿ ಇಲ್ಲಿ ಸು. ೧೮೮೮-೯೦ ರಲ್ಲಿ ಈ ದತ್ತ ಮಂದಿರವನ್ನು ಸ್ಥಾಪಿಸಿದರು. ಅವರ ನಂತರ ಅವರ ಮಕ್ಕಳಾದ ಹರಿಮಹಾದೇವ ಕರಂದಿಕರ ಮತ್ತು ವಿಶ್ವನಾಥ ಮಹಾದೇವ ಕರಂದಿಕರ ಇವರು ಈ ದೇವಾಲಯದ ಉಸ್ತುವಾರಿಯನ್ನು ವಹಿಸಿಕೊಂಡರು. ಮುಂದೆ ಕ್ರಿ.ಶ. ೧೯೧೦ ರಲ್ಲಿ ವಿಶ್ವನಾಥರು ಧಾರವಾಡಕ್ಕೆ ಹೋದರು ಆಗ ಅಲ್ಲಿ ಹರಿಮಹಾದೇವರು ಉಳಿದುಕೊಂಡು ದೇವಸ್ಥಾನದ ಕಾರ್ಯಕ್ರಮಗಳನ್ನು ನೆರವೇರಿಸಹತ್ತಿದರು. ಇವರ ನಂತರ ಶ್ರೀ ನಾಗೇಶ ಕರಂದಿಕರರು ಅರ್ಚಕರಾದರು. ನಂತರ ಈಗ ಅವರ ಮಗ ರಮೇಶ ಕರಂದಿಕರರು ಅರ್ಚಕರಾಗಿದ್ದಾರೆ.

ಈ ದೇವಾಲಯಕ್ಕೆ ವಿಷ್ಣು ಬಡಜಿ ದೇವಧರ ಎಂಬುವರು ೪೦೦-೦೦ ರೂ. ಗಳನ್ನು ದೇಣಿಗೆಯಾಗಿ ಕೊಟ್ಟ ದಾಖಲೆಯಿದೆ. ಮುಂದೆ ಕ್ರಿ.ಶ. ೧೯೫೪ ರಲ್ಲಿ ಈ ದೇವಾಲಯದ ಟ್ರಷ್ಟ ಕಮಿಟಿ ನಿರ್ಮಾಣವಾಗಿ ವರ್ಷದಲ್ಲಿ ನಾಲ್ಕು ಉತ್ಸವಗಳನ್ನು ಆಚರಿಸಲು ಪ್ರಾರಂಭಿಸಿತು. ಅವು (೧) ದತ್ತ ಜಯಂತಿ (೨) ಗುರು ಪ್ರತಿಪದ (೩) ಗುರು ದ್ವಾದಶಿ (೪) ಪಾದುಕಾ ಸ್ಥಾಪನೆಯ ದಿನ. ಇದು ಜಾಗ್ರತ

ದೇವಸ್ಥಾನವಾಗಿದ್ದು, ಪ್ರತಿನಿತ್ಯ ತ್ರಿಕಾಲ ಪೂಜೆ ನೆರವೇರುತ್ತದೆ. ದಿನನಿತ್ಯ ಅನೇಕ ಭಕ್ತಾದಿಗಳು ಆಗಮಿಸಿ ದರ್ಶನಪಡೆದುಕೊಳ್ಳುತ್ತಾರೆ. ಅಲ್ಲದೆ ವಿವಿಧ ರೀತಿಯ ಭಕ್ತಿಯ ಸೇವೆಯನ್ನು ಸಲ್ಲಸುತ್ತಾರೆ. (ಮಾಹಿತಿ ಸಂಗ್ರಹಿಸಿದ್ದು ರಮೇಶ ಕರಂದಿಕರ ಇವರಿಂದ).[೨೦]

ಮಾರುತಿ ದೇವರಗುಡಿಗಳು

ಮಾರುತಿ ದೇವಾಲಯ (ನಗರ ಮಧ್ಯದಲ್ಲಿ) :

ಜನಮಖಂಡಿ ನಗರದ ಮಧ್ಯದಲ್ಲಿದ್ದ ಮಾರುತಿಯ ದೇವಾಲಯವು ಪುರಾತನವಾಗಿದ್ದು, ಬಹು ಜಾಗ್ರತವಾಗಿದೆ. ಈ ದೇವಾಲಯವು ದಾಸವರಣ್ಯರಾದ ವ್ಯಾಸರಾಯರಿಂದ ಸ್ಥಾಪಿಸಲ್ಪಟ್ಟಿದೆ ಎಂಬ ಪ್ರತೀತಿಯಿದೆ. ದೇವಾಲಯವು ಅತ್ಯಂತ ಕಲಾತ್ಮಕವಾಗಿದೆ. ಗರ್ಭಗುಡಿಯಲ್ಲಿದ್ದ ಮಾರುತಿಯ ಮೂರ್ತಿಯು ಬಹು ಆಕರ್ಷಕವಾಗಿದೆ. ಗುಡಿಯ ಮೇಲಿನ ಸಿಖರವು ಅನೇಕ ಸುಂದರವಾದ ನಕ್ಷೆಗಳಿಂದ ಶೋಭಿಸುತ್ತದೆ. ಸಿಖರದ ಮೇಲೆ ಹೊಳಪುಳ್ಳ ಕಳಸವಿದೆ. ಇತ್ತಿಚೇಗೆ ಗುಡಿಯ ಮುಂಭಾಗದ ಮೇಲೆ ದಕ್ಷಿಣ ದಿಕ್ಕಿಗೆ "ಅಯೋಧ್ಯೆಯಲ್ಲಿ ಪಟ್ಟಾಭಿಷಿಕ್ತನಾದ ರಾಮ, ಲಕ್ಷ್ಮಣ, ಸೀತಾ, ಹಣಮಂತರ ಮೂರ್ತಿಗಳನ್ನು ನಿರ್ಮಿಸಿದ್ದು, ಬಹು ಸುಂದರವಾಗಿ ತೋರುತ್ತದೆ. ಅಲ್ಲದೆ ಗುಡಿಯ ಮೆಲ್ಭಾಗದ ಪಶ್ಚಿಮ ದಿಕ್ಕಿಗೆ ಭವ್ಯವಾದ ಹನುಮಂತದೇರವ ಮೂರ್ತಿಯನ್ನು ನಿರ್ಮಿಸಲಾಗಿದೆ. ಹೀಗೆ ಅನೇಕ ಸುಂದರವಾದ ಶಿಲ್ಪಕಲೆಗಳಿಂದ ಕೂಡಿದ ಈ ದೇವಸ್ಥಾನವು ಸಕಲ ಧರ್ಮಿಯರಿಗೆ ಪುಜನೀಯವಾಗಿದೆ. ಇತ್ತೀಚೆಗೆ ದೇವಾಲಯದ ನವರಂಗದ ಬಲಬದಿಗೆ ವರ್ತುಲಾಕಾರದ ಕಟ್ಟೆಯನ್ನು ಕಟ್ಟಿ ನವಗ್ರಹಗಳ ಮೂರ್ತಿಗಳನ್ನು ಸ್ಥಾಪಿಸಿದ್ದು, ಒಂದು ವಿಶೇಷವಾಗಿದೆ. ಪ್ರತಿ ಶನಿವಾರ ದೇವತಾ ಉತ್ಸವವು ಅತಿ ಸಡಗರದಿಂದ ನಡೆಯುತ್ತದೆ. ಅಂದು ಅಸಂಖ್ಯಾತ ಭಕ್ತರು ದರ್ಶನಕ್ಕಾಗಿ ಬರುತ್ತಾರೆ. ಪ್ರತಿ ವರುಷ ಜೂನ ಅಥವಾ ಜುಲೈ ತಿಂಗಳಲ್ಲಿ ಈ ಮಾರುತಿ ದೇವರ ಓಕಳಿಯನ್ನು ಆಚರಿಸಲಾಗುತ್ತದೆ.

ಶ್ರದ್ಧೆಯಿಂದ ನಡೆದುಕೊಳ್ಳುವ ಭಕ್ತರನ್ನು ಉದ್ಧರಿಸುವ ಶಕ್ತಿವಂತ ಈ ಮಾರುತಿ ಎಂಬ ಭಾವನೆಯು ಜಮಖಂಡಿಯ ಜನರಲ್ಲಿ ಮೊದಲಿನಿಂದಲೂ ಬೆಳೆದು ಬಂದಿದೆ. ಜಮಖಂಡಿಯ ಸಂಸ್ಥಾಪಕರಾದ ಶ್ರೀಮಂತ ರಾಮಚಂದ್ರರಾವ್ ಅಪ್ಪಸಾಹೇಬರು ಈ ದೇವರಿಗೆ ಬಹಳ ನಿಷ್ಠೆಯಿಂದ ನಡೆದುಕೊಳ್ಳುತ್ತಿದ್ದರಂತೆ. ಅಂತೆಯೇ ಅವರು ಕ್ರಿ.ಶ. ೧೮೫೭ ರ ಬಂಡಾಯದ ಆಪಾದನೆಯಿಂದ ಮುಕ್ತರಾಗಿ ಬಂದು ರಾಜ್ಯದ ಅಧಿಕಾರವನ್ನು ವಹಿಸಿಕೊಂಡರೆಂದು ಹೇಳುತ್ತಾರೆ. ಅದರಂತೆ ಮಹಾನ್ ತತ್ವಜ್ಞಾನಿ ಶ್ರೀ ಗುರುದೇವ ರಾಮಭಾವು ರಾನಡೆಯವರು ತಮ್ಮ ಬಾಲ್ಯದಲ್ಲಿ ಈ ಮಾರುತಿಗೆ ಭಕ್ತಿ-ಭಾವದಿಂದ ನಮಿಸಿ ಶಾಲೆಗೆ ಹೋಗುತ್ತಿದ್ದರಂತೆ. ಆದ್ದರಿಂದಲೇ ರಾನಡೆಯವರಿಗೆ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ (ರ‍್ಯಾಂಕ) ಲಭಿಸಿತಂತೆ. ಹೀಗೆ ಭಕ್ತೋದ್ಧಾರಕನಾದ ಈ ಮಾರುತಿಯ ಸಕಲರ ಆರಾಧ್ಯದೇವನಾಗಿದ್ದಾನೆ.

ಸಜ್ಜಿ ಹನುಮಂತ ದೇವರ ಗುಡಿ (ಗಿರೀಶ ನಗರ)

ಜಮಖಂಡಿ ನಗರದ ಹೊರವಲಯದಲ್ಲಿ ಪೋಲಿಸ ಸಿಬ್ಬಂದಿಯ ನಿವೇಶನದ ಎದುರುಗಡೆ ಇದ್ದ ಚಿಕ್ಕ ಮಾರುತಿದೇವರ ಗುಡಿಗೆ ಹನುಮಂತ ದೇವರ ಗುಡಿಯೆಂದು ಕರೆಯುತ್ತಾರೆ. ಈ ದೇವಸ್ಥಾನಕ್ಕೆ ಈ ಹೆಸರು ಬರಲು ಕಾರಣವೇನೆಂದರೆ - ಹಿಂದಕ್ಕೆ ಈ ದೇವಾಲಯದ ಬಲಬದಿಗಿದ್ದ ವಿಶಾಲವಾದ ಭೂಪ್ರದೇಶವನ್ನು ಸಾಗುವಳಿ ಮಾಡುತ್ತಿದ್ದರಂತೆ. ಮಳೆಗಾಲದಲ್ಲಿ ಗುಡ್ಡದ ಮೇಲಿಂದ ಹರಿದುಬಂದ ನೀರು ಇಲ್ಲಿ ಕೆಂಪು ಮಣ್ಣನ್ನು ತಂದು ಬಿಡುತ್ತಿದ್ದರಿಂದ ಭೂಮಿಯು ಫಲವತ್ತವಾಗಿತ್ತು. ಆದ್ದರಿಂದ ಇಲ್ಲಿ ಸಜ್ಜೆ, ನೆಲಗಡಲೆ, ಹುರಳಿ, ಮೂಕಣಿ ಮೊದಲಾದ ಅಕ್ಕಡಿ ಕಾಳುಗಳನ್ನು ಬೆಳೆದುಕೊಳ್ಳುತ್ತಿದ್ದರು. ಅದರಲ್ಲಿ ವಿಶೇಷವಾಗಿ ಸಜ್ಜೆಯ ಬೆಳೆಯು ವಿಫುಲವಾಗಿ ಬೆಳೆಯುತ್ತಿದ್ದರಿಂದ ಇದಕ್ಕೆ "ಸಜ್ಜಿಯ ಮಸಾರಿ" ಎಂದು ಕರೆಯುತ್ತಿದ್ದರು. ಒಮ್ಮೆ ಈ ಭೂಮಿಯನ್ನು ಊಳುವ ಕಾಲಕ್ಕೆ ಒಂದು ಸ್ವಯಂಭೂ ಮಾರುತಿಯ ಮೂರ್ತಿಯನ್ನು ತಂದು ಈಗಿದ್ದ ಸ್ಥಳದಲ್ಲಿರಿಸಿ ಒಂದು ಚಿಕ್ಕ ಗುಡಿಯನ್ನು ಕಟ್ಟಿಸಿ ಪೂಜಿಸಹತ್ತಿದರಂತೆ. ಹೀಗೆ ಸಜ್ಜೆ ಬೆಳೆಯುವ ಮಸಾರಿ ಭೂಮಿಯಲ್ಲಿ ಈ ಮಾರುತಿಯ ಮೂರ್ತಿಯು ದೊರೆತದ್ದರಿಂದ ಇದಕ್ಕೆ ಸಜ್ಜಿ ಹನುಮಂತ ದೇವರೆಂದೂ ಈ ದೇವಾಲಯಕ್ಕೆ ಸಜ್ಜಿ ಹನುಮಂತ ದೇವರ ಗುಡಿಯೆಂದು ಹೆಸರು ಬಂದಿದೆ.

ಈ ದೇವಸ್ಥಾನಕ್ಕೆ ಎಡಬದಿಗೆ (ನಿವೇಶನಗಳಲ್ಲಿ) ವಾಸಿಸುತ್ತಿದ್ದ ಪೋಲಿಸ ಸಿಬ್ಬಂದಿಯವರು ಈ ಮೂರ್ತಿಯನ್ನು ಪೂಜಿಸಲಯ ಪ್ರಾರಂಭಿಸಿದರು. ಬರಬರುತ್ತ ಭಕ್ತ ಜನರು ಹೆಚ್ಚಾದಂತೆ ಪೋಲಿಸ್ ಅಧಿಕಾರಿಗಳು ಈ ದೇವಾಲಯವನ್ನು ವಿಸ್ತರಿಸಿ ಕಟ್ಟಿಸಿದರು. ಅಲ್ಲದೆ ದಿನನಿತ್ಯ ಪೂಜೆ-ಪುರಸ್ಕಾರಗಳು ನಡೆಯುವಂತೆ ವ್ಯವಸ್ಥೆ ಮಾಡಿದರು. ಇತ್ತೀಚಿನ ದಿನಮಾನಗಳಲ್ಲಿ ಜನವಸತಿ ಬೆಳೆದು ಈ ದೇವಸ್ಥಾನದ ಸುತ್ತಲೂ ಅನೇಕ ನಿವೇಶನಗಳಾಗಿವೆ. ಉದಾ : ರಾಮೇಶ್ವರ ಕಾಲನಿ, ಸ್ಟೇಟ ಬ್ಯಾಂಕ ಕಾಲನಿ, ಕಾಲೇಜ ಹಾಸ್ಟೇಲ, ಪ್ರೋಪೆಸರ ಕಾಲನಿ ಮೊದಲಾದ ಬಡಾವಣೆಗಳ ಜನರು ಈ ದೇವರಿಗೆ ಭಕ್ತಿ-ಭಾವದಿಂದ ನಡೆದುಕೊಳ್ಳುತ್ತಾರೆ.

ಈ ದೇವಸ್ಥಾನದ ವಿಶೇಷವೆಂದರೆ ಇಲ್ಲಿ ಸ್ಥಾಪಿಸಲ್ಪಟ್ಟ ಮಾರುತಿಯ ಮೂರ್ತಿಯು ಸ್ವಯಂಭೂ ಆಗಿದ್ದು, ಜಾಗ್ರತವಾಗಿದೆ. ಗುಡಿಯ ಮುಂದಿದ್ದ ಆವರಣದಲ್ಲಿ ಇತ್ತೀಚೆಗೆ (ಕ್ರಿ.ಶ. ೧೯೮೩ ರಲ್ಲಿ) ನವಗ್ರಹಗಳ ಮೂರ್ತಿಗಳನ್ನು ಸ್ಥಾಪಿಸಲಾಗಿದೆ ಮತ್ತು ಒಂದು ಶಮಿ ವೃಕ್ಷದ ಕಟ್ಟೆಯಿದೆ. ಆದ್ದರಿಂದ ಈ ದೇವರ ಬಗ್ಗೆ ಜನರಲ್ಲಿ ಭಕ್ತಿ-ಭಾವವು ಹುಟ್ಟುವದು ಸಹಜವಾಗಿದೆ.

೧) ಇಂದು ಈ ದೇವಸ್ಥಾನಕ್ಕೆ ಪ್ರತಿ ಶನಿವಾರ ಮತ್ತು ಗುರುವಾರ ದಿವಸ ಅಸಂಖ್ಯಾತ ಭಕ್ತರು ಆಗಮಿಸಿ ದರ್ಶನ ಪಡೆದುಕೊಳ್ಳುತ್ತಾರೆ. ಅಲ್ಲದೆ ದಿನನಿತ್ಯ ಜನರು ತಮ್ಮ ಕಾರ್ಯಕ್ಕೆ ಹೋಗುವಾಗ ಈ ದೇವರ ದರ್ಶನ ಪಡೆದುಕೊಳ್ಳುವದು ಸರ್ವೆ ಸಾಮಾನ್ಯವಾಗಿದೆ.

೨) ಈ ದೇವಸ್ಥಾನದಲ್ಲಿ ಭಕ್ತ ಜನರು ಪ್ರತಿ ವರುಷ ಹನುಮ ಜಯಂತಿಯನ್ನು ಅತ್ಯಂತ ಸಡಗರದಿಂದ ಆಚರಿಸುತ್ತಾರೆ. ಅಂದು ಅನೇಕ ಭಕ್ತಿ ಸಂಗೀತದ ಕಾರ್ಯ (ಅಲ್ಲದೆ ಕಾರ್ತೀಕ ಮಾಸದಲ್ಲಿ ದೀಪೋತ್ಸವವು ಜರುಗುತ್ತದೆ.) ಕ್ರಮಗಳು ನಡೆಯುತ್ತವೆ.

೩) ಹಿಂದೆ ಸಂಸ್ಥಾನಿಕರ ಕಾಲದಲ್ಲಿ ನವರಾತ್ರಿ ಉತ್ಸವವು ಆಚರಿಸುವಾಗ ಈ ದೇವಸ್ಥಾನದ ಮುಂದಿದ್ದ ಶಮಿ ವೃಕ್ಷಕ್ಕೆ ಸಂಸ್ಥಾನಿಕರು ತಮ್ಮ ಸರಂಜಾಮದೊಂದಿಗೆ ಮೆರವಣಿಗೆಯಲ್ಲಿ ಬಂದು ಪೂಜೆ ಸಲ್ಲಸುತ್ತಿದ್ದರಂತೆ ಹೀಗೆ ಮೊದಲನಿಂದಲೂ ಈ ಸ್ಥಳಕ್ಕೆ ಧಾರ್ಮಿಕ ಮಹತ್ವವಿತ್ತೆಂದು ಗೊತ್ತಾಗುತ್ತದೆ.

ಅಂದಿನ ಜನಪ್ರೀಯ ಪೋಲಿಸ್ ಅಧಿಕಾರಿಯಾಗಿದ್ದ ಶ್ರೀ ಎಸ್. ಎಸ್. ಹಸಬಿಯವರು ಹೆಚ್ಚಿನ ಆಸಕ್ತಿವಹಿಸಿ ಈ ದೇವಸ್ಥಾನವನ್ನು ಅಭಿವೃದ್ಧಿಗೊಳಿಸಿದರು. ಅದರ ಮುಂತೆ ಅವರ ಉತ್ತರಾಧಿಕಾರಿಗಳಾಗಿ ಬಂದ ಎಲ್ಲ ಪೋಲಿಸ್ ಅಧಿಕಾರಿಗಳು ಈ ದೇವಸ್ಥಾನದ ಏಳ್ಗೆಗಾಗಿ ಇಂದಿಗೂ ಶ್ರಮಿಸುತ್ತಿರುವದು ಸ್ಮರಣೀಯ.

ದ್ವಾರಕಾನಾತ ಗುಡಿ (ಹುಲ್ಯಾಳಕರ ಗಲ್ಲಿ) :

ಶ್ರೀ ಕೃಷ್ಣನ ಈ ದೇವಾಲಯಕ್ಕೆ "ದ್ವಾರಕಾನಾಥ ಗುಡಿ" ಎಂಬ ಹೆಸರು ಬರಲು ಒಂದು ಹೇಳಿಕೆಯುಂಟು. ಅದೇನೆಂದರೆ – (ದ್ವಾರಕಾ ಪಟ್ಟಣಕ್ಕೂ ಈ ಜಮಖಂಡಿ ಪಟ್ಟಣಕ್ಕೂ ಯಾವ ಸಂಬಂಧ ಎಂಬುದಕ್ಕೆ).

ಈ ನಗರದಲ್ಲಿರುವ ಅನೇಕ ಬ್ರಾಹ್ಮಣ ಮನೆತನಗಳಲ್ಲಿ ಬಿಚ್ಚುಗತ್ತಿಯವರ ಮನೆತನವು ಒಂದು. ಎಲ್ಲರಂತೆ ಇವರು ಕೂಡ ಒಮ್ಮೆ ಬದರಿ ಯಾತ್ರೆಗೆ ಹೋಗಿದ್ದರು. ಪ್ರಯಾಗ, ಕಾಶಿ, ಪಿತೃಗಯಾ, ಹರಿದ್ವಾರ, ಬದರೀ ಯಾತ್ರೆ ಮುಗಿಸಿಕೊಂಡು ಮಥುರಾ, ಬೃಂದಾವನಗಳ ದರ್ಶನ ಮಾಡಿಕೊಂಡು ಪಶ್ಚಿಮದ ದ್ವಾರಕೆಗೆ ಬಂದರು. ಆ ಕ್ಷೇತ್ರದಲ್ಲಿಯು ಕೂಡ ತೀರ್ಥಸ್ನಾನ, ಸಮುದ್ರ ಸ್ನಾನ ಮುಗಿಸಿಕೊಂಡು ನೀರಿನಿಂದ ಹೊರಬರುವಾಗ ಒಂದು ಶಿಲಾ ಮೂರ್ತಿಯು ಇವರ ಕಾಲಿಗೆ ತಾಕಿತು. ಅದೇನೆಂದು ತಿರುಗಿ ನೋಡಲಾಗಿ ಅದೊಂದು ಮೂರ್ತಿಯಾಗಿತ್ತು. ಆಗ ಅವರು ಅದನ್ನು ತಮ್ಮೂರಿಗೆ ತರುವರು ಕಷ್ಟದ ಕೆಲಸವೆಂದು ತಿಳಿದು ಹಾಗೆಯೇ ಹೊರಗೆ ಬಂದು ತಮ್ಮ ಬಿಡಾರವನ್ನು ಪ್ರವೇಶಿಸಿದನು. ಅಂದು ರಾತ್ರಿ ಊಟ : ಉಪಚಾರ ಮುಗಿಸಿಕೊಂಡು ಮಲಗಿದಾಗ ಅವರೊಂದು ಸ್ವಪ್ನವನ್ನು ಕಂಡರು. ಸ್ವಪ್ನದಲ್ಲಿ – "ಅಲ್ಲೊಂದು ದೊಡ್ಡ ದೇವಾಲಯ, ಅದರಲ್ಲಿ ಶ್ರೀಕೃಷ್ಣನ ಮೂರ್ತಿಯು ಪ್ರಕಾಶಮಾನವಾಗಿ ಶೋಭಿಸುತ್ತಿದೆ, ಮಂಗಳಾರುತಿ ನಡೆದಿದೆ, ಜಾಂಗಟೆ, ಗಂಟೆ, ಭೇರಿ, ಸಂಖಗಳ ನಿನಾದ, ಆಚಾರ್ಯರು ಮೂರ್ತಿಯನ್ನು ಕಣ್ಣುತುಂಬಿ ನೋಡಿ ಆನಂದಪಟ್ಟರು. ದೀರ್ಘದಂಡ ನಮಸ್ಕಾರ ಮಾಡಿದರು. ನಂತರ ಗಟ್ಟಿಯಾದ ಸ್ಪಷ್ಟವಾದ ಧ್ವನಿಯೊಂದು ಕೇಳಿಸಿತು. 'ನಿನ್ನೆ ಬೆಳಿಗ್ಗೆ ನೀರಿನಲ್ಲಿ ನನ್ನನ್ನು ಎಡವಿ ಕಂಡೂ ಕೂಡಾ ಎತ್ತಿಕೊಳ್ಳದೆ ಬಂದೆಯಲ್ಲ ಹಾಗೇ ಮಾಡಬೇಡ ನಿನ್ನ ಊರಿಗೆ ನನ್ನನ್ನು ಕರೆದುಕೊಂಡು ಹೋಗು, ಬಿಟ್ಟು ಹೋಗಬೇಡ ತಿಳಿಯಿತೆ?' ಧ್ವನಿ ಗಂಭೀರವಾಗಿತ್ತು. ಅದರಲ್ಲಿ ಅಂತಃಕರಣ ತುಂಬಿ ತುಳುಕುತ್ತಿತ್ತು." ಇಷ್ಟರಲ್ಲಿ ಆಚಾರ್ಯರಿಗೆ ಎಚ್ಚರವಾಯಿತು. ಆಗ ಅವರಿಗೆ ಬಹಳ ಸಂತೋಷವಾಗಿ ಪಕ್ಕದಲ್ಲಿದ್ದ ತಮ್ಮ ಪತ್ನಿಗೆ ಮತ್ತು ಬಂಧು ವರ್ಗದವರಿಗೆ ತಮ್ಮ ಸ್ವಪ್ನದ ವೃತ್ತಾಂತವನ್ನು ವಿವರವಾಗಿ ಹೇಳಿದರು. ಅವರಿಗೂ ಆನಂದವಾಯಿತು. ಅವರೆಲ್ಲರು ಹೇಳಿದರು – "ಆಚರ್ಯರೆ ನಮ್ಮೆಲ್ಲರಿಗಾಗಿಯೇ ದೇವರು, ವಿಶೇಷವಾಗಿ ದರ್ಶನವನ್ನು ನಿಮಗೆ ಕೊಟ್ಟಿದ್ದಾನೆ. ಇದು ಪುಣ್ಯದಾಯಕವೂ ಮತ್ತು ಶುಭಕರವೂ ಆದ ಘಟನೆಯಾಗಿದೆ. ನಾವೆಲ್ಲರೂ ನಿಮಗೆ ಸಹಾಯ ಮಾಡುತ್ತೇವೆ. ಈ ದ್ವಾರಕಾಧೀಶನನ್ನು ಜಮಖಂಡಿಗೆ

ಕರೆದೊಯೋಣವೆಂದು ಬಿನ್ನವಿಸಿದಿರು. ಆ ಮೇಲೆ ಎಲ್ಲರೂ ಕೂಡಿ ಸಮುದ್ರ ತೀರಕ್ಕೆ ಹೋಗಿ ದೇವರ ಪ್ರತಿಮೆಗೆ ಎಲ್ಲರೂ ಪೂಜಾದಿಗಳನ್ನು ಸಲ್ಲಿಸಿ ಪಂಚಖಾದ್ಯಗಳನ್ನು ನೈವೇದ್ಯಮಾಡಿ, ಜಾಂಗಟೆ, ಗಂಟೆಗಳನ್ನು ಬಾರಿಸುತ್ತಾ ತಾವು ಇಳಿದುಕೊಂಡ ಸ್ಥಳಕ್ಕೆ ತಗೆದುಕೊಂಡು ಬಂದರು. ನಂತರ ಕೃಷ್ಣಾಜಿನವೊಂದರಲ್ಲಿ ಸುತ್ತಿಕೊಂಡು ಕೆಲವು ದಿನಗಳಲ್ಲಿ ದ್ವಾರಕಾಧೀಶನನ್ನು ಜಮಖಂಡಿಗೆ ಕರೆತಂದರು. ಈ ಪ್ರತಿಮೆಯನ್ನು ಕ್ರಿ.ಶ. ೧೨೫೫ ನೇ ಇಸ್ವಿಯ ವೈಶಾಖ ಕೃಷ್ಣಪಕ್ಷ ಪಂಚಮಿಯ ದಿನ ಶ್ರೀ ನರಹರಿ ಆಚಾರ್ಯರು ತೆಗೆದುಕೊಂಡು ಬಂದರು.

ದ್ವಾರಕಾಧೀಶನ ಮೂರ್ತಿಯನ್ನು ಜಮಖಂಡಿಗೆ ಕರೆತಂದ ನಂತರ ಬದರೀ ಸಮಾರಾರಾಧನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲಾಯಿತು. ಅಂದೇ ದೇವರ ಪೂಜಾ ಕಾರ್ಯದ ನಂತರ ಶ್ರೀ ಕೃಷ್ಣನ ವಿಗ್ರಹವನ್ನು ಪ್ರತಿಷ್ಟಾಪಿಸಿದರು. ಪ್ರತಿಷ್ಠಾಪನೆಗೆ ಬೇಕಾದ ಸ್ಥಳವನ್ನು ಶ್ರೀ ಲೇಲೆ ಮನೆತನದವರು ಉದಾರವಾಗಿ ದಾನವಿತ್ತರು ಮತ್ತು ಶ್ರೀ ಹುಲ್ಯಾಳಕರ ರಂಗರಾಯರ ಅಜ್ಜಂದಿರು ಗುಡಿಕಟ್ಟುವ ಖರ್ಚನ್ನು ವಹಿಸಿಕೊಂಡು ವಿಶೇಷ ಪುಣ್ಯಭಾಗಿಗಳಾದರು. ಗುಡಿಯಲ್ಲಿರುವ ಈ ಮೂರ್ತಿಯು ಅಚ್ಯುತರೂಪದ ಶ್ರೀ ವಿಷ್ಣು ಮೂರ್ತಿಯಾಗಿದೆ. ದ್ವಾರಕಾ ಕ್ಷೇತ್ರದಿಂದ ಬಂದ ಕಾರಣ ದ್ವಾರಕಾನಾಥನೆಂದು ಪ್ರಸಿದ್ಧಿಯುಂಟಾಯಿತು.

ಅರ್ಚಕರು : ಈ ದೇವಸ್ಥಾನದಲ್ಲಿ ಈ ಸದ್ಯ ಸೇವಾಕಾರ್ಯಗಳನ್ನು ಸದ್ವೈಷ್ಣವರಾದ ಶ್ರೀ ಅಚ್ಯುತ ಗುಂಡೋಪಂತ ಚಿಚ್ಚುಗತ್ತಿಯವರು ಮತ್ತು ಅವರ ಪತ್ನಿ ಶ್ರೀಮತಿ ಗಂಗಾಬಾಯಿಯವರು ನಡೆಸಿಕೊಂಡು ಬರುತ್ತಿದ್ದಾರೆ.

ಇಲ್ಲಿ ನಡೆಯುವ ಸೇವಾ ಕಾರ್ಯಕ್ರಮಗಳು :

೧) ಶ್ರಾವಣ ಮಾಸದಲ್ಲಿ ಐದು ದಿವಸ ಶ್ರೀ ಕೃಷ್ಣ ಜಯಂತಿ ಉತ್ಸವವು ವಿಜ್ರಂಭಣೆಯಿಂದ ನಡೆಯುತ್ತದೆ.

೨) ಕಾರ್ತಿಕ ಮಾಸದಲ್ಲಿ ನಿತ್ಯವು ದೀಪೋತ್ಸವ ಹಾಗೂ ಮಂತ್ರ ಪುಷ್ಪಗಳು ನಡೆಯುತ್ತವೆ.

೩) ಶ್ರೀಮದ್ಭಾಗವರ ಸಪ್ತಾಹ : ಜಮಖಂಡಿಗೆ ದ್ವಾರಕಾಧೀಶನು ಆಗಮಿಸಿದ ದಿನದಿಂದ ಪ್ರೊಷ್ಟಪರಿ ಭಾಗವತ ಸಪ್ತಾಹವು ಮನೆತನಸ್ಥ ಆಚಾರ್ಯರಿಂದ ನಡೆಯುತ್ತಲೇ ಬಂದಿದೆ. ಈಗ ೪೦ ವರುಷಗಳಿಂದ ತಪ್ಪದೇ ಪಂಡೀತ ಸುಕಾಚಾರ್ಯ ಗಲಗಲಿಯವರು ಭಾಗವತ ಸಪ್ತಾಹವನ್ನು ನಡೆಸಿಕೊಂಡು ಬಂದಿದ್ದಾರೆ.

ವಿಶೇಷ ಉತ್ಸವಗಳು :

ಈ ದೇವಾಲಯದಲ್ಲಿ ಶ್ರೀ ಟೀಕಾರಾಯರ ಪಂಚಮಿ ಹಾಗೂ ಶ್ರೀ ಮಧ್ವನವಮಿ ಉತ್ಸವಗಳನ್ನು ಭಕ್ತಾದಿಗಳು ನಡೆಸುತ್ತಾರೆ.

ಶ್ರೀ ಮಧ್ವನವಮಿಯ ಉತ್ಸವವು ನಡೆಯಬೇಕಾದರೆ ಒಂದು ವಿಶೇಷ ಕಾರಣವಿದೆ. ಇಲ್ಲಿ ಜಮಖಂಡಿಯ ವಾದಿರಾಜಾಚಾರ್ಯರು ೧೨ ವರುಷಗಳವರೆಗೆ ಸೇವಾ ಅನುಷ್ಠಾನಗಳನ್ನು

ಮಾಡಿಕೊಂಡಿದ್ದರು. ಅವರು ಮಾರುತಿಯ ಪರಮ ಭಕ್ತರು ಸರ್ವದಾ ತೋಳುಗಳಲ್ಲಿ ಮಾರುತಿಯ ವಿಗ್ರಹವನ್ನು ಕರೆದುಕೊಂಡೇ ಇರುತ್ತಿದ್ದರು. ಇವರು ಮಹಾನ್ ತಪಸ್ವಿಗಳು, ಪಂಡಿತರೂ ಆಗಿದ್ದರು. ಅವರು ಗಿಂಡಿ ಮನೆತನದವರು. ಈಗ ದ್ವಾರಕಾನಾಥನ ಪಾದತಳದಲ್ಲಿ ಪೂಜೆಗೊಳ್ಳುವ ಹನುಮಂತ ದೇವರ ಮೂರ್ತಿಯು ಅವರಿಂದ ಸ್ಥಾಪಿಸಲ್ಪಟ್ಟಿದೆ. ಕ್ರಿ.ಶ. ೧೯೫೮ ರಲ್ಲಿ ಶ್ರೀ ಸತ್ಯಪ್ರಮೋದ ತೀರ್ಥ ಶ್ರೀಪಾದಂಗಳವರು ಪುನಃ ಪ್ರತಿಷ್ಠಾಪನೆಗೈದಿದ್ದಾರೆ. ಹೀಗೆ ಇಲ್ಲಿ ಶ್ರೀಹರಿವಾಯುಗಳು ನಿತ್ಯ ಜಾಗ್ರತೆಯಿಂದ ಸನ್ನಿಹಿತರಾಗಿದ್ದಾರೆ.

(ವಿಷಯ ಸಂಗ್ರಹಿಸಿದ್ದು, ಶ್ರೀನಿವಾಸ ಸು. ಮಠದವರು ಸಂಪಾದಿಸಿದ "ಶ್ರೀ ಕೃಷ್ಣಾವತಾರ ಸಂದೇಶ" ಎಂಬ ಗ್ರಂಥದಿಂದ.)

ಮುತ್ತಿನ ಕಂತಿ ಮಠ :

ಇದು ಅತ್ಯಂತ ಪುರಾತನವಾದ ಶೈವ ಮಠವಾಗಿದ್ದು, ಪಂಚಪೀಠಾಪತಿಗಳ ಪರಂಪರೆಯಿಂದ ಬೆಳೆದು ಬಂದಿದೆ. ಇದು ಶ್ರೀಶೈಲ ಜಗದ್ಗುರುಗಳ ಶಾಖೆಯಾಗಿದೆ. (ಶ್ರೀಶೈಲ ಮಠದ ಮುತ್ತಿನಪೆಂಡಿ ಬಗಿ ಅಥವಾ ಮುಕ್ತಾಗುಚ್ಚ ಸೂತ್ರದಿಂದ ಬಂದದ್ದು). ಇಷ್ಟಲಿಂಗಕ್ಕೆ ಮುತ್ತಿನಂತಹ ಕಂತಿಯನ್ನು ಮಾಡುತ್ತಿದ್ದರಿಂದ ಈ ಮಠಕ್ಕೆ ಮುತ್ತಿನ ಕಂತಿಯ ಮಠ (ಮುತ್ತಿನಕಾಂತ) ಎಂಬ ಹೆಸರು ಬಂದಿರಲು ಸಾಧ್ಯ. ಅದೇ ಹೆಸರು ಇಂದಿಗೂ ಉಳಿದಿದೆ.

ಷ. ಬ್ರ. ಮುತ್ತಿನಕಾಂತಯ್ಯನವರು ಸದಾ ಲಿಂಗಪೂಜಾನಿರತರಾಗಿ ಜನರಿಗೆ ಧರ್ಮೋಪದೇಶವನ್ನು ಮಾಡುತ್ತಿದ್ದರು. ಇವರ ನಂತರ ಅನೇಕ ಜನ ಸ್ವಾಮಿಗಳು ಇವರ ಉತ್ತರಾಧಿಕಾರಿಗಳಾಗಿ ಹೋಗಿದ್ದಾರೆ. ಇದು ಪುತ್ರವರ್ಗದ ಪರಂಪರೆಯಿಂದ ಬೆಳೆದು ಬಂದ ಮಠವಾಗಿದೆ. ಈ ಮಠದಲ್ಲಿ 'ಮುತ್ತಿನಕಾಂತಯ್ಯ' ಎಂಬ ಸತ್ಪುರುಷರ ಕತ್ತುಗದ್ದಿಗೆಯ ಮೇಲೆ ಗುಡಿಕಟ್ಟಿ ಜಲಾರಿ ಈಶ್ವರಲಿಂಗವನ್ನು ಸ್ಥಾಪಿಸಲಾಗಿದೆ. ಮುಂಭಾಗದಲ್ಲಿ ನಂದಿಯ ಮೂರ್ತಿಯಿದೆ. ಈ ದೇವಾಲಯವನ್ನು ಪ್ರವೇಶಿಸಬೇಕಾದರೆ ನೆಲದಲ್ಲಿ ಐದಾರು (ಪಾವಟಿಗೆಗಳನ್ನು) ಮೆಟ್ಟಲುಗಳನ್ನು ಇಳಿದು ಹೋಗಬೇಕಾಗುತ್ತದೆ. ಇದೊಂದು ಗುಹೆಯಂತಿದೆ. (ಕಟ್ಟಡದ ರಚನೆಯು ಇದರ ಪ್ರಾಚೀನತೆಯನ್ನು ತೋರಿಸುತ್ತದೆ.) ಈ ಮಠದಲ್ಲಿ ಇಂದಿಗೂ ಅನೇಕ ಧಾರ್ಮಿಕ ಹವ್ಯ-ಕವ್ಯಗಳು ನಡೆಯುತ್ತಿರುತ್ತವೆ.

ಓಲೆಯ ಮಠ (ಕೋಷ್ಟಿ ಗಲ್ಲಿ) :

ಇದು ಒಂದು ಪುರಾತನ ವೀರಶೈವ ಮಠವಾಗಿದೆ. ಹಿಂದಕ್ಕೆ ತಾಡ ಎಲೆಗಳ ಮೇಲೆ ವಚನಗಳನ್ನು ಧಾರ್ಮಿಕ ಗ್ರಂಥಗಳನ್ನು ಬರೆದು ಪ್ರಚಾರ ಮಾಡುವ ಕಾರ್ಯವು ಕೆಲವು ಮಠಗಳಲ್ಲಿ ನಡೆಯುತ್ತಿತ್ತು. ಅಂತಹ ಓಲೆಯ ಕಾಯಕವನ್ನು ಮಡುವ ಮಠವು ಹುಬ್ಬಳ್ಳಿಯಲ್ಲಿತ್ತು. ಅಲ್ಲಿಂದಲೇ ಜಮಖಂಡಿಯ ಓಲೆಮಠದ ಮೂಲ ಪುರುಷರಾದ ಶ್ರೀ ಗುರುಸಿದ್ಧ ಮಹಾಸ್ವಾಮಿಗಳು ಇಲ್ಲಿಗೆ ಬಂದರೆಂದು ಹಿರಿಯರು ಹೇಳುತ್ತಾರೆ. ಆದರೆ ಈಗ ಹುಬ್ಬಳ್ಳಿ ಮತ್ತು ಜಮಖಂಡಿಗಳ ನಡುವೆ ಸಂಪರ್ಕ ತಪ್ಪಿ ಹೋಗಿದೆ. ಹುಬ್ಬಳ್ಳಿಯ ಓಲೆಯ ಮಠ ಈಗ ಮೂರುಸಾವಿರ ಮಠದ ಅಧೀನವಾಗಿದೆ.

ಕಡಕೋಳ ಗ್ರಾಮದಲ್ಲಿಯೂ ಒಂದು ಮಠವಿದೆ. ಅದನ್ನು ಓಲೆಮಠವೆಂದೇ ಕರೆಯುಲಾಗುತ್ತದೆ. ಈ ಮಠವು ಜಮಖಂಡಿ ಮಠದ ಅಧೀನದಲ್ಲಿದೆ. ಈ ಎರಡೂ ಮಠಗಳಿಗೆ ಒಬ್ಬರೇ ಅಧಿಪತಿಗಳಾಗಿರುತ್ತಾರೆ. ಹಾಗೆಯೇ ಹುಲಗೂರ ಮಠವೂ ಒಂದು. ಈ ಮಠದ ಮೂಲಪುರುಷರಾದ ಶ್ರೀ ಗುರುಸಿದ್ಧ ಮಹಾಸ್ವಾಮಿಗಳಿಗೆ ಜಮಖಂಡಿ ತಾಲೂಕಿನ ಕೊಣ್ಣೂರ ಗ್ರಾಮದ ದೇಸಾಯಿಯವರು ಕ್ರಿ.ಶ. ೧೭೩೧ ರಲ್ಲಿ ಸುಮಾರು ೧೯೦ ಎಕರೆ ಭೂಮಿಯನ್ನು (ಚಹುರ) ದಾನವಾಗಿ ಕೊಟ್ಟಿದ್ದಾರೆ. (ಈ ಇನಾಮು ಜಮೀನುಗಳು ಇಂದಿನ ಜಮಖಂಡಿ ಹದ್ದಿನಲ್ಲಿ ಬರುವ ರಿ. ಸ. ನಂ. ೩೪೭, ೩೪೮, ೩೫೦ ಮತ್ತು ೩೫೧ ಆಗಿದ್ದು, ಇವೆಲ್ಲವು ಒಂದೆಡೆಗೆ ಇರುವದರಿಂದ ಇವಕ್ಕೆ ಓಲೆಪ್ಪನ ಪಾವ ಎಂದು ಕರೆಯುತ್ತಾರೆ.)

೧) ಈ ಮಠಕ್ಕೆ ಜಮೀನು ಉಂಬಳಿ ಕೊಟ್ಟವರು ಕೊಣ್ಣೂರಿನ ಶ್ರೀ ಗದಿಗೆಪ್ಪ ದೇಸಾಯಿಯವರು.

೨) ಉಂಬಳಿ ಪಡೆದವರು ಶ್ರೀ ಗುರುಸಿದ್ಧ ಮಹಾಸ್ವಾಮಿಗಳು.

೩) ಇದರ ಕಾಲ ಕ್ರಿ. ಶ. ೧೭೩೧.

೪) ಭೂಮಿಯ ಅಳತೆ ಸುಮಾರು ೧೯೦ ಎಕರೆ.

ಮೊದಮೊದಲು ಈ ಮಠಕ್ಕೆ ದೇಸಾಯಿಯವರ ಮಠವೆಂದು ಕರೆಯುತ್ತಿದ್ದರು. ಕಾಲಾಂತರದಲ್ಲಿ ಇಲ್ಲಿ ನಡೆಯುವ ಓಲೆಯ ಕಾಯಕದಿಂದ ಇದನ್ನು ಓಲೆಮಠವೆಂದು ಕರೆಯಲಾಯಿತು. (ಕ್ರಿ.ಶ. ೧೭೩೧ ರಲ್ಲಿ).

ಈ ಮಠದ ಮೂಲಪುರುಷರಾದ ಶ್ರೀ ಗುರುಸಿದ್ದ ಮಹಾಸ್ವಾಮಿಗಳ ನಂತರ ಅಂದರೆ ಕ್ರಿ.ಶ. ೧೭೩೧ ರ ವರೆಗೆ ಸುಮಾರು ೮ ಜನ ಸ್ವಾಮಿಗಳು ಇಲ್ಲಿ ಮಠಾಧೀಶರಾಗಿ ಹೋಗಿದ್ದಾರೆ. ಅವರ ಹೆಸರುಗಳಿಂತಿವೆ.

೧) ಶ್ರೀ ಗುರುಸಿದ್ಧ ಮಹಾಸ್ವಾಮಿಗಳು.

೨) ಶ್ರೀ ಚನ್ನವೀರ ಮಹಾಸ್ವಾಮಿಗಳು.

೩) ಶ್ರೀ ಚಂದ್ರಶೇಖರ ಮಹಾಸ್ವಾಮಿಗಳು.

೪) ಶ್ರೀ ಸಂಗಯ್ಯ ಮಹಾಸ್ವಾಮಿಗಳು.

೫) ಶ್ರೀ ಸಂಗನ ಬಸವ ಮಹಾಸ್ವಾಮಿಗಳು.

೬) ಶ್ರೀ ಮಹಾಲಿಂಗ ಮಹಾಸ್ವಾಮಿಗಳು.

೭) ಶ್ರೀ ಸಂಗನ ಬಸವ ಮಹಾಸ್ವಾಮಿಗಳು.

೮) ಶ್ರೀ ಚನ್ನಬಸವ ಮಹಾಸ್ವಾಮಿಗಳು.

ಧಾರ್ಮಿಕ ನಿಷ್ಠೆಯುಳ್ಳವರು ಕನ್ನಡ, ಸಂಸ್ಕೃತ, ಹಿಂದಿ ಭಾಷಾ ಪಂಡಿತರೂ, ಪ್ರವಚನಪಟುಗಳೂ ಆದ ಡಾ. ಚನ್ನಬಸವ ಮಹಾಸ್ವಾಮಿಗಳು ಇಂದು ಈ ಮಠದ ಅಧಿಪತಿಗಳು.

(ಓಲೆಯಮಠದ ಸ್ಮರಣ ಸಂಚಿಕೆಯಲ್ಲಿ ಡಾ॥ ಸಂಗಮೇಶ ಬಿರಾದಾರ ರವರು ಬರೆದ ಲೇಖನದಿಂದ ಆಯ್ದುಕೊಂಡದ್ದು).

ಗೊಂಕ ಜಿನಾಲಯ : ತೇರದಾಳ :

ಜಮಖಂಡಿ ತಾಲೂಕಿನ ಪ್ರಮುಖ ಪಟ್ಟಣ ತೇರದಾಳ ಶಾಸನಗಳಲ್ಲಿ ಇದನ್ನು ತೇರಿದಾಳ, ತೆತದಾಳ, ತೆರದಾಳ ಎಂದು ಕರೆಯಲಾಗಿದೆ. ಇದು ಕೊಂಡಿನಾಡಿಯಲ್ಲಿ ೧೨ ಗ್ರಾಮಗಳನ್ನೊಳಗೊಂಡಂತೆ ಚಿಕ್ಕ ಆಡಳಿತ ವಿಭಾಗವಾಗಿತ್ತು. ಇದಕ್ಕೆ ಕರಿಪಣವೆಂದು ಕರೆಯಲಾಗುತ್ತಿತ್ತು.

೧೯೪೮ ರ ಪೂರ್ವದಲ್ಲಿ ತೇರದಾಳ ಸಾಂಗಲಿ ಸಂಸ್ಥಾನದಲ್ಲಿ ಒಂದು ತಾಲೂಕು ಸ್ಥಳವಾಗಿತ್ತು. ೧೯೫೬ ರಲ್ಲಿ ಭಾಷಾವಾರು ಪ್ರಾಂತಗಳ ವಿಂಗಡನೆಯ ನಂತರ ಜಮಖಂಡಿ ತಾಲೂಕಿನಲ್ಲಿದೆ.

ಶಾಸನವೊಂದರಲ್ಲಿ ಇದನ್ನು ಸುಜನರಿಂದ, ಶ್ರೀಮಂತರಿಂದ, ಗಿರಿ, ವನ, ದುರ್ಗಗಳಿಂದ ಕಂಗೋಳಿಸುತ್ತಿತ್ತು ಎಂದು ವರ್ಣಿಸಿದೆ. ಈ ನಾಡನ್ನು ಕಲ್ಯಾಣಿ ಚಾಲುಕ್ಯರ ದೊರೆ ೬ನೇ ವಿಕ್ರಮಾದಿತ್ಯನ ಮಾಂಡಲಿಕ ರಟ್ಟ ಕಾರ್ತವೀರ್ಯನ ಕಾಲದಲ್ಲಿ ಈ ಕಂಪಣದ ಅಧಿಪತಿಯಾದ ಗೊಂಕರಸನಿಗೆ ವಿಷಸರ್ಪ ಕಡಿಯಲು ಅವನು ಮಂತ್ರ ತಂತ್ರ ಆಸೆಗೆ ಬಲಿಬೀಳದೆ ಪಂಚಪರಮೇಷ್ಟಿಗಳನ್ನು ಸ್ಮರಿಸಿದ್ದಕ್ಕಾಗಿ ವಿಷ ದೂರವಾಯಿತಂತೆ. ಪಂಚ ಪರಮೇಷ್ಠಿಗಳನ್ನು ಸ್ಮರಿಸಲು ಹೇಳಿ ವಿಷಬಾಧೆಯಿಂದ ಮುಕ್ತನಾಗಿ ತನಗೆ ಪುನರ್ ಜನ್ಮವನ್ನು ನೀಡಿ ರಕ್ಷಿಸಿದ ಜಿನನಿಗಾಗಿ ತೇರದಾಳದಲ್ಲಿ ಒಂದು ಜಿನಾಲಯವನ್ನು ಕಟ್ಟಿಸಿ ಅದಕ್ಕೆ ಗೊಂಕ ಜಿನಾಲಯವೆಂದು ಹೆಸರನ್ನಿಟ್ಟು ತನ್ನ ಗುರು ಹಾಗೂ ಕೊಲ್ಲಾಪುರದ ರೂಪನಾರಾಯಣ ಬಸದಿಯ ಆಚಾರ್ಯರಾದ ಶ್ರೀ ಮಾಘನಂದಿ ಸೈದ್ಧಾಂತಿಕ ದೇವರನ್ನು ಶುಭ ಮೂಹುರ್ತದಲ್ಲಿ ಬರಮಾಡಿಕೊಂಡು ಬಸದಿಯಲ್ಲಿ ನೇಮಿನಾಥ, ಜಿನೇಶ್ವರರ ಪ್ರತಿಷ್ಠಾಪನೆ ಮಾಡಿದ್ದನ್ನು ತೇರದಾಳದ ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ನಿವೇಶನ	:	ಊರ ಮಧ್ಯದಲ್ಲಿ
ದಿಕ್ಕು	:	ಉತ್ತರಾಭಿಮುಖ
ಅರ್ಪಣೆ	:	ನೇಮಿನಾಥ (ಜಿನ)
ಕಾಲ	:	೧೨ನೇ ಶತಮಾನ
ಅರಸು ಮನೆತನ	:	ಕಲ್ಯಾಣಿ ಚಾಲುಕ್ಯರು
ಮಾದರಿ	:	ವೇಸರ ಶೈಲಿ

ಈ ನೇಮಿನಾಥ ಜಿನಾಲಯವು ೨೦X೩೦ ಅಡಿ ಸುತ್ತಳತೆಯಲ್ಲಿ ಉತ್ತರಾಭಿಮುಖವಾಗಿ ನಿರ್ಮಿಸಲ್ಪಟ್ಟಿದೆ. ಕದಂಬ ನಾಗರ ಶೈಲಿಯಲ್ಲಿ ನಿರ್ಮಿತವಾದ ಈ ಬಸದಿ ಪ್ರದಕ್ಷಣಾ ಪಥವನ್ನು ಹೊಂದಿದೆ. ಗರ್ಭಗೃಹ, ಸುಖನಾಸಿ, ರಂಗಮಂಟಪ ಹಾಗೂ ಮುಖಮಂಟಪಗಳಿಂದ ಕೂಡಿದೆ. ಗರ್ಭಗೃಹದೊಳಗೆ ಪೀಠದ ಮೇಲೆ ಭದ್ದ ಪದ್ಮಾಸನದಲ್ಲಿ ನೇಮಿನಾಥನ ವಿಗ್ರಹವಿದೆ. ಗರ್ಭಗೃಹದ ದ್ವಾರಗಳು ಒಳ್ಳೆಯ ಸುಂದರವಾದ ನಕ್ಷೆಯಿಂದ ರಚಿಸಲ್ಪಟ್ಟಿದೆ. ಭವ್ಯ ರಂಗಮಂಟಪವನ್ನು ಹೊಂದಿದ್ದು, ಕಂಬಗಳು ರಂಗಮಂಟಪದ ಮಧ್ಯದಲ್ಲಿದ್ದು ಇವೇ ಪೂರ್ಣ ಮಂಟಪದ ಭಾರವನ್ನು ಹೊತ್ತಿರುವಂತೆ ತೋರುತ್ತದೆ.

ಕಂಬಗಳ ಕೆಳಭಾಗವು ಚೌಕಾಕಾರದಿಂದಿದ್ದು, ಮತ್ತೆ ಗೋಲಾಗಿ ಬೋದಿಗೆಯನ್ನು ಹೊಂದಿದೆ. ರಂಗಮಂಟಪದಲ್ಲಿ ಗರ್ಭಗುಡಿಯ ಹತ್ತಿರ ಇರುವ ಎರಡು ಕಂಬಗಳ ಕೆಳಗೆ ಖಡ್ಗಾಸನದಲ್ಲಿರುವ ತೀರ್ಥಂಕರರ ಮೂರ್ತಿಗಳಿವೆ.

ಹೊರ ಮಂಟಪದಲ್ಲಿರುವ ದ್ವಾರವು ಒಳ್ಳೆಯ ಸುಂದರ ಕುಸುರಿನ ಕೆತ್ತನೆಯಿಂದ ಕೂಡಿದೆ. ದ್ವಾರದ ಮೇಲ್ಭಾಗದಲ್ಲಿ ಬದ್ಧ ಪದ್ಮಾಸನ ಜಿನ ಮೂರ್ತಿಯಿದೆ. ಗೋಡೆಯಲ್ಲಿ ೪ ಅರ್ಧ ಕಂಬಗಳಿವೆ. ಮುಂದೆಯೂ ೪ ಕಂಬಗಳಿದ್ದು ಅವು ಮುಂದಿನ ಮಂಟಪವನ್ನು ಹೊತ್ತು ನಿಂತಿವೆ. ಮಂಟಪದ ದ್ವಾರದ ಬಲಭಾಗದಲ್ಲಿ ಎರಡು ಅರ್ಧ ಕಂಬಗಳ ಮಧ್ಯದಲ್ಲಿ ೧೧೭೩, ೧೧೮೧, ೧೧೮೭ ಹೀಗೆ ಮೂರು ಮಿತಿಗಳನ್ನೊಳಗೊಂಡ ಸುಂದರವಾಗಿ ಕೆತ್ತಲ್ಪಟ್ಟ ಶಾಸನವಿದೆ. ಗರ್ಭಗುಡಿಯ ಮೇಲೆ ಶಿಖರವಿದೆ. ಜಿನದೇವಾಲಯದ ಎದುರಿಗೆ ಎತ್ತರದ ದೀಪಸ್ಥಂಬವಿದೆ.

ಆಗಿನ ಕಾಲದಲ್ಲಿಯೇ ಈ ಜಿನಾಲಯಕ್ಕೆ ಅಷ್ಟ ವಿಧ್ಯಾರ್ಚನೆ ಪೂಜೆ ನಿರಂತರವಾಗಿ ನಡೆಯುವುದಕ್ಕೆ ಅಯ್ಯವೊಳೆ ಅಯ್ನೂರು ಸಂಘದ ಸದಸ್ಯರು, ನಾನಾ ಸೀಳದ ಗವರ ಗಾತ್ರಿಗರು, ಶೆಟ್ಟಿಯರು ಇತ್ಯಾದಿ ಸಭೆ ನಡೆಸಿ ೧೨೦ ಎತ್ತು, ಕೋಣ, ಕತ್ತೆ, ದೋಣಿ ಮತ್ತು ಘಟ್ಟ ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ಉಪಯೋಗಿಸುವ ಸಾಧನಗಳು ಸರಕುಗಳ ಮೇಲೆ ವಿಧಿಸುವ ಸುಂಕವಪರಿಹಾರವನ್ನು ದೇವರಿಗೆ ಬಿಟ್ಟ ವಿಷಯ ಶಾಸನಗಳು ತಿಳಿಸುತ್ತವೆ.

ಸೇವುಣ ಅರಸ ಸಿರಿಘಣನ ಸೇನಾನಿಯಾಗಿದ್ದ ಭಾಯಿದೇವ ದಂಡನಾಯಕನು ಈ ನಾಡನ್ನು ಪಡೆದುಕೊಂಡು ಆಳುತ್ತಿದ್ದಾಗ ತೇರದಾಳದ ಗೊಂಕ ಜಿನಾಲಯದ ನಮಿತೀರ್ಥೇಶ್ವರ ದೇವರಿಗೆ ೧೧೮೨ ರ ಶಾಸನದಲ್ಲಿ ಗೊಂಕರಸನು ಬಿಟ್ಟಿದ್ದ ಭೂಮಿಯನ್ನು ಪುನರ್ ದತ್ತಿ ಮಾಡಿ ಹೊಸದಾಗಿ ಬಸದಿಯ ಅಂಗಭೋಗಕ್ಕೆ, ರಂಗಭೋಗಕ್ಕೆ, ಮುನಿಗಳ ಆಹಾರಕ್ಕೆ ಬಸದಿಯ ಜೀರ್ಣೋದ್ಧಾರಕ್ಕೆ ೩೭ ಮತ್ತರು ಭೂಮಿಯನ್ನು ಹಾಗೂ ದೇವಾಲಯಕ್ಕೆ ಒಂದು ನಿವೇಶನವನ್ನು ಬಿಟ್ಟ ವಿಷಯವನ್ನು ತಿಳಿಯಬಹುದು.

ಗೊಂಕರಸನು ಪ್ರತಿಷ್ಠಾಪಿಸಿದ ಮೂರ್ತಿ ಈಗ ಲಭ್ಯವಿಲ್ಲ. ಈಗಿನ ಮೂರ್ತಿಯನ್ನು ತೇರದಾಳದ ದೇಸಾಯಿ ಸತ್ಯವ್ವ ಮತ್ತು ಅವರ ಮಗ ಜಕ್ಕಪ್ಪನು ಕೂಡಿಕೊಂಡು ೧೭೪೮ ನವೆಂಬರ್ ೧೮ ರಂದು ಪ್ರತಿಷ್ಠಾಪನೆ ಮಾಡಿದುದಾಗಿದೆ ಎಂದು ಅಲ್ಲಿನ ಶಾಸನವು ಹೇಳುತ್ತದೆ.[೨೮]

ಇವೆಲ್ಲವನ್ನು ಅಭ್ಯಾಸ ಮಾಡಿದಾಗ ತೇರದಾಳದ ಗೊಂಕ ಜಿನಾಲಯವು ಕ್ರಿ.ಶ. ೧೧ – ೧೨ ನೇಯ ಶತಮಾನದಿಂದಲೇ ಪ್ರಸಿದ್ಧಿ ಹೊಂದುತ್ತಾ ಬಂದು ಈಗ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುವದನ್ನು ಕಾಣಬಹುದು.

ಹನಗಂಡಿಯ ದೇಸಾಯಿ ವಾಡೆ ಬಸದಿ :

ಹನಗಂಡಿಯ ದೇಸಾಯಿ ವಾಡೆಯಲ್ಲಿ ಬಸದಿಯನ್ನು ನಾವು ಕಾಣುತ್ತೇವೆ. ಈ ಬಸದಿಯು ಆದಿಲ್ ಶಾಹಿ ಕಾಲದ ಬಸದಿಯಾಗಿದೆ. ನೇಮಿನಾಥ ಬಸದಿಯಾಗಿದೆ. ಇಲ್ಲಯ ದೇಸಾಯಿ ಸಂತತಿಯ

(ಜೈನ ಧರ್ಮದ)ವರು ಈ ಬಸದಿಯನ್ನು ಕಟ್ಟಿಸಿದ್ದಾರೆ. ಈ ಬಸದಿಯ ಸರಳ ವೇಸರ ಶೈಲಿಯನ್ನು ಹೋಲುತ್ತದೆ. ಗರ್ಭಗೃಹದಲ್ಲಿ ೨೪ ತೀರ್ಥಂಕರ ಚಿಕ್ಕ ಚಿಕ್ಕ ವಿಗ್ರಹಗಳನ್ನು ಕಾಣುತ್ತೇವೆ. ಹನಗಂಡಿ ಗ್ರಾಮವು ಒಂದು ಪುರಾತನ ಗ್ರಾಮವಾಗಿದ್ದು ನೂತನ ಶಿಲಾಯುಗದ ಮಾನವನ ಅವಶೇಷಗಳು ಇಲ್ಲಿ ಸಿಗುತ್ತವೆ.

ಧರ್ಮನಾಥ ಶ್ವೇತಾಂಬರ ಜೈನ ಮಂದಿರ – ಜಮಖಂಡಿ :

ಜಮಖಂಡಿ ತಾಲೂಕಾ ಕೇಂದ್ರದಲ್ಲಿ ವಲಸೆಬಂದ ಜೈನ (ಉತ್ತರ ಭಾರತದವ)ರು ಈ ಮಂದಿರ ಕಟ್ಟಿಸಿದ್ದಾರೆ.

ನಿವೇಶನ	:	ಪಟ್ಟಣ
ಕಾಲ	:	ಕ್ರಿ.ಶ. ೧೯೩೩
ಅರ್ಪಣೆ	:	ಧರ್ಮನಾಥ ಜೈನ ಮುನಿ
ಶೈಲಿ	:	ಆಧುನಿಕ ಮಿಶ್ರಿತ ನಾಗರ ಶೈಲಿ

ಈ ಜಿನಾಲಯ ಶ್ವೇತಂಬರ ಪಂಗಡ ಜಿನಾಲಯವಾಗಿದೆ. ಮೂಲತಃ ಇದನ್ನು ಕಲ್ಲಿನಲ್ಲಿ ಕಟ್ಟಿಸಿದ್ದು ಈಗ ಸಂಪೂರ್ಣವಾಗಿ ಅಮೃತ ಶಿಲೆಯ ಹೊದಿಕೆಯನ್ನು ನಿರ್ಮಿಸಿದ್ದಾರೆ. ಇದು ಎರಡು ಅಂತಸ್ಥಿನ ಜಿನಾಲಯವಾಗಿದೆ. ಕೆಳ ಅಂತಸ್ಥಿನಲ್ಲಿ ಧರ್ಮ ಪ್ರಸಾರದ ಶ್ರವಿಕರು & ಶ್ರವಕರು ವಾಸವಾಗಿರುತ್ತಾರೆ. ಇವರು ಬಿಳಿ ಬಟ್ಟೆ ತೊಟ್ಟಿರುತ್ತಾರೆ. ಜಿನಾಲಯದ ಮೇಲಂತಸ್ಥಿಗೆ ಹೋಗಲು ಎರಡೂ ಬದಿಗೆ ಮೆಟ್ಟಿಲುಗಳಿವೆ. ಮೇಲೆ ಹೋದಹಾಗೆ ಮುಂದಿನ ಚೌಕಿಯು ಸೂಕ್ಷ್ಮ ಕೆತ್ತನೆಯ ೩ ಕಂಬಗಳನ್ನು ಹೊಂದಿದೆ. ಪ್ರತಿ ಕಂಬದಲ್ಲಿ ಅಮೃತ ಶಿಲೆಯ ಕೈ ಮುಗಿದ ಗೊಂಬೆಗಳಿವೆ. ಒಳಗಡೆ ರಂಗಮಂಟಪ, ಮುಖಮಂಟಪಗಳಿವೆ. ಇಲ್ಲಿ ಗೋಡೆಯಲ್ಲಿ ಜಾಲಂದರಗಳಿವೆ. ಇಲ್ಲಿ ಆಧುನಿಕ ಶೈಲಿಯ ವರ್ಣಚಿತ್ರಗಳನ್ನು ಬಿಡಿಸಿದ್ದಾರೆ. ಮಹಾವೀರನ ಜನನ, ಸಂಸಾರ ತ್ಯಾಗ, ಧರ್ಮ ಭೋಧನೆಯ ವರ್ಣಚಿತ್ರ ಕೃತಿ ಕಾಣಬಹುದು. ಒಂದು ಚಿತ್ರದಲ್ಲಿ ಆದಿನಾಥನಿಗೆ ಕಬ್ಬಿನ ರಸ ನೀಡುವ ಶ್ರೀಮಂತ ದಂಪತಿಗಳ ಚಿತ್ರ ಸೊಗಸಾಗಿ ಮೂಡಿಬಂದಿದೆ. ಹೊರಗಡೆ ಮಾಡಿನಲ್ಲಿ ೫ ವಿಗ್ರಹಗಳಿವೆ. ಪದ್ಮಾವತಿದೇವಿ ವಿಗ್ರಹ, ಮಾಣಿ ಬದ್ದ ದೇವ ವಿಗ್ರಹ, ಯಕ್ಷ-ಯಕ್ಷಿಣಿ ವಿಗ್ರಹ ಕಾಣಬಹುದು. ಪುಂಡಲಿಕ ಸ್ವಾಮಿ & ಗೌತಮ ಸ್ವಾಮಿ ವಿಗ್ರಹ ಕಾಣಬಹುದು.

ಗರ್ಭಗೃಹದಲ್ಲಿ ೫ ವಿಗ್ರಹಗಳಿವೆ ಧರ್ಮನಾಥ ವಿಗ್ರಹ, ಮುನಿ ಸುವರ್ತಸ್ವಾಮಿ ಶಾಂತಿನಾಥ, ನೇಮಿನಾಥ, ಮಹಾವೀರರ ವಿಗ್ರಹಗಳಿವೆ. ಇವು ಅಮೃತ ಶಿಲೆಯಲ್ಲಿವೆ. ಮೇಲ್ಚಾವಣಿಯಲ್ಲಿ ಒಳಗಡೆ ಗಾಜಿನಿಂದ ಕೂಡಿದ ಕಸೂತಿ ಕೆಲಸ ಮಾಡಿದ್ದಾರೆ. ದೇವಾಲಯದಲ್ಲಿ ಬಂಗಾರ ಮತ್ತು ಬೆಳ್ಳಿಯ ಆಭರಣಗಳಿವೆ. ಗರ್ಭ ಗೃಹದ ಮೇಲಿನ ಶಿಖರವನ್ನು ಆಧುನಿಕ ಶೈಲಿ ಅಳವಡಿಸಿಕೊಂಡ ನಾಗರ ಶೈಲಿಯಲ್ಲಿ ಕಟ್ಟಲಾಗಿದೆ. ನೆಲಹಾಸು ಅಮೃತ ಶಿಲೆಯಲ್ಲಿ ಮಾಡಿದ್ದಾರೆ. ಪಕ್ಕದಲ್ಲಿ ಮಂಗಲ ಕಾರ್ಯಾಲಯವಿದೆ.

ಅದರ ಉಸ್ತುವಾರಿಯನ್ನು ಉಸ್ತುವಾರಿ ಸಮಿತಿ ನೋಡಿಕೊಳ್ಳುತ್ತದೆಯೆಂದು ಸದಸ್ಯ ಸಂತೋಷಲಾಲ ಎಸ್. ಜೈನ್ ತಿಳಿಸುತ್ತಾರೆ.

ಮೂರ್ತಿ ಶಿಲ್ಪಗಳು :

ಜಮಖಂಡಿ ತಾಲೂಕಿನ ಬಹುತೇಕ ಗ್ರಾಮಗಳಲ್ಲಿ ಮೂರ್ತಿ ಶಿಲ್ಪಗಳು ಕಂಡುಬರುತ್ತವೆ. ಮೂರ್ತಿ ಶಿಲ್ಪಗಳು ಜನರ ಭಕ್ತಿಗಳಿಗನುಗುಣವಾಗಿ ಅವರ ಪ್ರೊತ್ಸಾಹ ಪ್ರೇರಣೆಯಿಂದ ದೇವಾಲಯದ ಹೊರಗೂ ಹಾಗೂ ಒಳಗೂ ಪ್ರತಿಷ್ಠಾಪನೆಗೊಂಡಿವೆ. ಇನ್ನೂ ಕೆಲವನ್ನು ದೇವಾಲಯದ ಗೋಡೆಯಲ್ಲಿ ಅಲಂಕಾರಕ್ಕಾಗಿ ಕೆತ್ತಿರುವುದನ್ನು ಅಲ್ಲಲ್ಲಿ ಗುರುತಿಸಬಹುದು.

ಮೂರ್ತಿಶಿಲ್ಪದಲ್ಲಿನ ಸೌಂಧರ್ಯದಿಂದ ಆ ದೇವಾಲಯದ ದೇವರ ನಂಬಿಕೆ ಹೆಚ್ಚಾಗುತ್ತದೆ ಎಂಬ ಸಾಮಾನ್ಯ ನಂಬಿಕೆಯಿದೆ. ಇದಕ್ಕೆ ನಿದರ್ಶನವೆಂಬಂತೆ ಜಮಖಂಡಿ ತಾಲೂಕಿನ ಮುತ್ತೂರು ಮಹಾಲಕ್ಷ್ಮೀ ದೇವಾಲಯ ಎಷ್ಟೇ ಸುಂದರವಾಗಿದ್ದರೂ ಅದಕ್ಕೆ ಮಹತ್ವ ಬರುವುದು ಅಲ್ಲಿನ ಮೂರ್ತಿಶಿಲ್ಪದಿಂದ ಮಾತ್ರ ಎಂದು ಹೇಳಬಹುದು.

'ಪ್ರಸಾದ ನಾಮಂತು ಸರ್ವೇಶಂ ಪ್ರತಿಮಾ ಜೀವಾವುಚ್ಚಾಯತೆ' ಎಂದು ವಶಿಷ್ಠ ಸಂಹಿತೆಯಲ್ಲಿ ಉಲ್ಲೇಖಿಸಲಾಗಿದೆ. ಅಂದರೆ ಮೂರ್ತಿಯು ದೇವಾಲಯಕ್ಕೆ ಜೀವವಿದ್ದಂತೆ ಎಂಬರ್ಥದಲ್ಲಿ ಹೇಳಲಾಗಿದೆ.

ಮೂರ್ತಿಶಿಲ್ಪಗಳಲ್ಲಿ ಚಿತ್ರ, ಅರ್ಧ ಚಿತ್ರ ಮತ್ತು ಚಿತ್ರ ಭಾಸ ಎಂಬ ಮೂರು ಪ್ರಕಾರಗಳನ್ನು ಮಾಡಿದ್ದಾರೆ. ಅವುಗಳ ರಚನಾ ತಯಾರಿಕೆಯಲ್ಲಿ ಮುಖ್ಯವಾಗಿ ೬ ತಂತ್ರಗಳನ್ನು ಬಳಸುತ್ತಿದ್ದರು ಎಂದು ಮಾನಸಾರದಲ್ಲಿ ಉಲ್ಲೇಖಿಸಲಾಗಿದೆ. ಅವುಗಳೆಂದರೆ ಮಾನ, ಪ್ರಮಾಣ, ಪರಿಮಾಣ, ಲಂಬಮಾನ, ಉನಮಾನ ಮತ್ತು ಉಪಮಾನ.

: ಜಮಖಂಡಿ ತಾಲೂಕಿನ ದೇವಾಲಯಗಳಲ್ಲಿನ ಮೂರ್ತಿ ಶಿಲ್ಪಗಳು :

ಅ. ನಂ.	ಗ್ರಾಮ	ಶಿಲ್ಪ	ದೇವಾಲಯ
೧	ಸಸಾಲಟ್ಟಿ	ವೀರಭದ್ರ	ವೀರಭದ್ರೇಶ್ವರ ದೇವಾಲಯ
೨	ಖಾಜಿಬೀಳಗಿ	ಶಿವಲಿಂಗ	ಕಾಶಿಲಿಂಗೇಶ್ವರ ದೇವಾಲಯ
೩	ಕೊಣ್ಣೂರ	ಹರಿಹರ	ಪರಮಾನಂದ ದೇವಾಲಯ
೪	ಕೊಣ್ಣೂರ	ಕೋಟೇಶ್ವರ	ಕೋಟೇಶ್ವರ ದೇವಾಲಯ
೫	ಗಣಿ	ಮಲ್ಲಯ್ಯ	ಮಲ್ಲಯ್ಯನ ಗುಡಿ
೬	ಮರೆಗುದ್ದಿ	ವೀರಭದ್ರ	ಶ್ರೀ ವೀರಭದ್ರೇಶ್ವರ ದೇವಾಲಯ
೭	ಕಡಪಟ್ಟಿ	ನಂದಿ	ಬಸವೇಶ್ವರ ದೇವಾಲಯ
೮	ಹಳಿಂಗಳಿ	ಆಂಜನೇಯ	ರಾಮಲಿಂಗೇಶ್ವರ ದೇವಾಲಯ
೯	ಕಡಕೋಳ	ನಂದಿ	ಬಸವಣ್ಣ ದೇವಾಲಯ
೧೦	ಚಿಮ್ಮಡ	ಹನುಮಂತ	ಹನುಮಂತ ದೇವಾಲಯ
೧೧	ಕಲಬೀಳಗಿ	ಹನುಮಂತ	ಹನುಮಂತ ದೇವಾಲಯ
೧೨	ಕಲ್ಲಹಳ್ಳಿ	ಲಕ್ಷ್ಮೀ ವೆಂಕಟೇಶ್ವರ	ವೆಂಕಟೇಶ್ವರ ದೇವಾಲಯ
೧೩	ಕಲ್ಲಹಳ್ಳಿ	ವರಾಹ	ವರಾಹ ಗುಡಿ
೧೪	ಆಸಂಗಿ	ಗರುಡ	ವೇಣುಗೋಪಾಲ
೧೫	ತೇರದಾಳ	ನೇಮಿನಾಥ	ಜೈನ ಬಸದಿ
೧೬	ತಮದಡ್ಡಿ	ಪಾರ್ಶ್ವನಾಥ	ಚಂದ್ರಗಿರಿ ಬಸದಿ
೧೭	ಹನಗಂಡಿ	ದಿಗಂಬರೇಶ್ವರ	ದಿಗಂಬರೇಶ್ವರ ಬಸದಿ
೧೮	ಹಳಿಂಗಳಿ	ತೀರ್ಥಂಕರ	ಪಾರ್ಶ್ವನಾಥ ಜಿನಾಲಯ
೧೯	ಹುಲ್ಯಾಳ	ಕಾಳಿಕಾ	ಕಾಳಿಕಾ ಗುಡಿ
೨೦	ಮುತ್ತೂರ	ಮಹಾಲಕ್ಷ್ಮೀ	ಮಹಾಲಕ್ಷ್ಮೀ ದೇವಾಲಯ

ಅಡಿ ಟಿಪ್ಪಣಿ

೧.	ಪ್ರೊ. ಕೆ. ಚನ್ನಬಸಪ್ಪ	:	ಜಮಖಂಡಿ ತಾಲೂಕಿನ ಶಾಸನಗಳು ಒಂದು ಸಾಂಸ್ಕೃತಿ ಅಧ್ಯಯನ (ಎಂ.ಫಿಲ್. ಪ್ರಬಂಧ) ಪು. ಸಂ. – ೧೧೬
೨.	ಪ್ರೊ. ಕೆ. ಚನ್ನಬಸಪ್ಪ	:	ಜಮಖಂಡಿ ತಾಲೂಕಿನ ಶಾಸನಗಳು ಒಂದು ಸಾಂಸ್ಕೃತಿ ಅಧ್ಯಯನ (ಎಂ.ಫಿಲ್. ಪ್ರಬಂಧ) ಪು. ಸಂ. – ೧೧೮
೩.	ಪ್ರೊ. ಕೆ. ಚನ್ನಬಸಪ್ಪ	:	ಜಮಖಂಡಿ ತಾಲೂಕಿನ ಶಾಸನಗಳು ಒಂದು ಸಾಂಸ್ಕೃತಿ ಅಧ್ಯಯನ (ಎಂ.ಫಿಲ್. ಪ್ರಬಂಧ) ಪು. ಸಂ. – ೧೧೯
೪.	ಪ್ರೊ. ಕೆ. ಚನ್ನಬಸಪ್ಪ	:	ಜಮಖಂಡಿ ತಾಲೂಕಿನ ಶಾಸನಗಳು ಒಂದು ಸಾಂಸ್ಕೃತಿ ಅಧ್ಯಯನ (ಎಂ.ಫಿಲ್. ಪ್ರಬಂಧ) ಪು. ಸಂ. – ೧೨೨
೫.	ಪ್ರೊ. ಕೆ. ಚನ್ನಬಸಪ್ಪ	:	ಜಮಖಂಡಿ ತಾಲೂಕಿನ ಶಾಸನಗಳು ಒಂದು ಸಾಂಸ್ಕೃತಿ ಅಧ್ಯಯನ (ಎಂ.ಫಿಲ್. ಪ್ರಬಂಧ) ಪು. ಸಂ. – ೧೨೩.
೬.	ಪ್ರೊ. ಕೆ. ಚನ್ನಬಸಪ್ಪ	:	ಜಮಖಂಡಿ ತಾಲೂಕಿನ ಶಾಸನಗಳು ಒಂದು ಸಾಂಸ್ಕೃತಿ ಅಧ್ಯಯನ (ಎಂ.ಫಿಲ್. ಪ್ರಬಂಧ) ಪು. ಸಂ. – ೧೨೪.
೭.	ಸುವರ್ಣ ಸಂಭ್ರಮ	:	ಸ್ಮರಣ ಸಂಚಿಕೆ ೨೦೦೬. ಪು. ಸಂ. – ೧೦೭.
೮.	ಸುವರ್ಣ ಸಂಭ್ರಮ	:	ಸ್ಮರಣ ಸಂಚಿಕೆ ೨೦೦೬. ಪು. ಸಂ. – ೧೦೮.
೯.	ಪ್ರೊ. ಎಸ್. ಬಿ. ಮಟೋಳಿ	:	ಜಮಖಂಡಿ ಇತಿಹಾಸ ದರ್ಪಣ. ಪು.ಸಂ. – ೧೯೮
೧೦.	ಪ್ರೊ. ಎಸ್. ಬಿ. ಮಟೋಳಿ	:	ಜಮಖಂಡಿ ಇತಿಹಾಸ ದರ್ಪಣ. ಪು.ಸಂ. – ೨೦೦

೧೧. ಪ್ರೊ. ಎಸ್. ಬಿ. ಮಟೋಳಿ : ಜಮಖಂಡಿ ಇತಿಹಾಸ ದರ್ಪಣ. ಪು.ಸಂ. – ೨೦೧

೧೨. ಪ್ರೊ. ಎಸ್. ಬಿ. ಮಟೋಳಿ : ಜಮಖಂಡಿ ಇತಿಹಾಸ ದರ್ಪಣ. ಪು.ಸಂ. – ೨೦೨.

೧೩. ಪ್ರೊ. ಎಸ್. ಬಿ. ಮಟೋಳಿ : ಜಮಖಂಡಿ ಇತಿಹಾಸ ದರ್ಪಣ. ಪು.ಸಂ. – ೨೦೩.

೧೪. ಪ್ರೊ. ಎಸ್. ಬಿ. ಮಟೋಳಿ : ಜಮಖಂಡಿ ಇತಿಹಾಸ ದರ್ಪಣ. ಪು.ಸಂ. – ೨೦೭.

೧೫. ಪ್ರೊ. ಎಸ್. ಬಿ. ಮಟೋಳಿ : ಜಮಖಂಡಿ ಇತಿಹಾಸ ದರ್ಪಣ. ಪು.ಸಂ. – ೨೦೮.

೧೬. ಪ್ರೊ. ಎಸ್. ಬಿ. ಮಟೋಳಿ : ಜಮಖಂಡಿ ಇತಿಹಾಸ ದರ್ಪಣ. ಪು.ಸಂ. – ೨೧೧

೧೭. ಪ್ರೊ. ಎಸ್. ಬಿ. ಮಟೋಳಿ : ಜಮಖಂಡಿ ಇತಿಹಾಸ ದರ್ಪಣ. ಪು.ಸಂ. – ೨೧೩

೧೮. ಪ್ರೊ. ಎಸ್. ಬಿ. ಮಟೋಳಿ : ಜಮಖಂಡಿ ಇತಿಹಾಸ ದರ್ಪಣ. ಪು.ಸಂ. – ೨೧೫.

೧೯. ಪ್ರೊ. ಎಸ್. ಬಿ. ಮಟೋಳಿ : ಜಮಖಂಡಿ ಇತಿಹಾಸ ದರ್ಪಣ. ಪು.ಸಂ. – ೨೧೬.

೨೦. ಪ್ರೊ. ಎಸ್. ಬಿ. ಮಟೋಳಿ : ಜಮಖಂಡಿ ಇತಿಹಾಸ ದರ್ಪಣ. ಪು.ಸಂ. – ೨೨೮.

೨೧. ಸುವರ್ಣ ಸಂಭ್ರಮ : ಸ್ಮರಣ ಸಂಚಿಕೆ – ೨೦೦೬. ಪು.ಸಂ. – ೧೧೦.

೨೨. ಸುವರ್ಣ ಸಂಭ್ರಮ : ಸ್ಮರಣ ಸಂಚಿಕೆ – ೨೦೦೬. ಪು.ಸಂ. – ೧೦೯.

೨೩. ಪ್ರೊ. ಎಸ್. ಬಿ. ಮಟೋಳಿ : ಜಮಖಂಡಿ ಇತಿಹಾಸ ದರ್ಪಣ. ಪು.ಸಂ. – ೨೪೦.

೨೪. ಪ್ರೊ. ಎಸ್. ಬಿ. ಮಟೋಳಿ : ಜಮಖಂಡಿ ಇತಿಹಾಸ ದರ್ಪಣ. ಪು.ಸಂ. – ೨೪೧.

೨೫. ಪ್ರೊ. ಎಸ್. ಬಿ. ಮಟೋಳಿ : ಜಮಖಂಡಿ ಇತಿಹಾಸ ದರ್ಪಣ. ಪು.ಸಂ. – ೨೪೨.

೨೬. ಪ್ರೊ. ಎಸ್. ಬಿ. ಮಟೋಳಿ : ಜಮಖಂಡಿ ಇತಿಹಾಸ ದರ್ಪಣ. ಪು.ಸಂ. – ೨೫೦.

೨೭. ಪ್ರೊ. ಎಸ್. ಬಿ. ಮಟೋಳಿ : ಜಮಖಂಡಿ ಇತಿಹಾಸ ದರ್ಪಣ. ಪು.ಸಂ. – ೨೫೯.

೨೮. ಡಾ|| ಕೆ. ಪಿ. ಈರಣ್ಣ : ಗೊಂಕ ಜಿನಾಲಯ. ಪು. ಸಂ. – ೧೫೧.

ಅಧ್ಯಾಯ – ಆರು

ಉಪಸಂಹಾರ

ನಮ್ಮ ದೇಶ ಅಥವಾ ನಮ್ಮ ರಾಜ್ಯದ ಹಲವಾರು ಪ್ರದೇಶಗಳು ಐತಿಹಾಸಿಕ ಸ್ಥಳಗಳೆಂದು ಗುರುತಿಸಿಕೊಂಡು ಪ್ರಾದೇಶಿಕ ಇತಿಹಾಸವನ್ನು ಸೃಷ್ಠಿಸಿದ ಅದೇಷ್ಟೋ ಸ್ಥಳಗಳು ಪ್ರಾಚೀನ ಭಾರತದ ಇತಿಹಾಸದ ಪುಟಗಳಲ್ಲಿ ತಮ್ಮ ಸ್ಥಾನವನ್ನು ಪಡೆದುಕೊಂಡಿಲ್ಲ ಎಂದರೆ ತಪ್ಪಾಗಲಿಕ್ಕಿಲ್ಲ. ಅಂತಹ ಮಹತ್ವದ ಸ್ಥಳಗಳಲ್ಲಿ ಜಮಖಂಡಿ ತಾಲೂಕು ಒಂದಾಗಿದೆ. ಈ ತಾಲೂಕಿನ ದೇವಾಲಯಗಳ ಅಧ್ಯಯನ ಅಷ್ಟಾಗಿ ನಡೆದಿಲ್ಲವೆಂದು ಮನಗಂಡು ಈ ದಿಶೆಯಲ್ಲಿ ನಾನು ಮಾಡಿದ ಪ್ರಾಮಾಣಿಕ ಪ್ರಯತ್ನವೇ ಈ ಪ್ರಬಂಧ ರಚನೆಗೆ ಸಾಧ್ಯವಾಯಿತೆಂದು ಹೇಳಬಹುದು.

ಜಮಖಂಡಿ ತಾಲೂಕಿನಲ್ಲಿ ಈಗಾಗಲೇ ಪ್ರಕಟಗೊಂಡಿರುವ ದೇವಾಲಯಗಳ ಮೇಲಿನ ಲೇಖನಗಳನ್ನು ಆಯ್ದುಕೊಂಡು ಅವುಗಳನ್ನು ಆಧರಿಸಿ ಕ್ಷೇತ್ರಕಾರ್ಯವನ್ನು ಕೈಗೊಂಡು, ನಮ್ಮ ಅಧ್ಯಯನಕ್ಕೆ ಸಮಗ್ರತೆಯನ್ನು ತಂದುಕೊಡಲು ಪ್ರಯತ್ನಿಸಲಾಗಿದೆ.

೭೧ ಗ್ರಾಮಗಳನ್ನು ಹೊಂದಿರುವ ಜಮಖಂಡಿ ತಾಲೂಕಿನ ಪ್ರತಿ ಗ್ರಾಮಗಳಲ್ಲಿಯೂ ಅನೇಕ ದೇವಾಲಯಗಳು ದೊರೆಯುತ್ತವೆ. ಆದರೆ ಪ್ರತಿಯೊಂದು ದೇವಾಲಯಗಳ ಬಗ್ಗೆ ಮಾಹಿತಿ ಸರಿಯಾಗಿ ಲಭ್ಯವಾಗುವದಿಲ್ಲ, ಸ್ಥಳೀಯ ಜನರು ಹೇಳುವ ದಂತ ಕಥೆ ಮತ್ತು ದೇವಾಲಯಗಳ ಪೂಜಾರಿಗಳ ಹೇಳಿಕೆಗಳಿಂದ ದೇವಾಲಯವನ್ನು ಕಟ್ಟಿಸಿದ ಬಗ್ಗೆ ನಿಖರ ಮಾಹಿತಿ ದೊರೆಯುವುದಿಲ್ಲ. ಕೇವಲ ದೇವಾಲಯದ ವಾಸ್ತುವಿನ್ಯಾಸವನ್ನು ವಿಕ್ಷೀಸಿದಾಗ ಶೈಲಿಗಳ ಆಧಾರದ ಮೇಲೆ ಕಾಲಮಾನ ಮತ್ತು ಅರಸು ಮನೆತನದವರ ಹೆಸರನ್ನು ನಾವು ಕಂಡುಕೊಳ್ಳುತ್ತೇವೆ. ಆದರೆ ಕೆಲವು ದೇವಾಲಯಗಳಲ್ಲಿ ದೊರೆತ ಶಾಸನದಿಂದ ಮತ್ತು ಸಮಕಾಲಿನ ಸಾಹಿತ್ತಿಕ ಕೃತಿಗಳಿಂದ ಅಧ್ಯಯನದ ಸಮಗ್ರತೆಯನ್ನು ಕಾಯ್ದುಕೊಳ್ಳಲು ಪ್ರಯತ್ನಿಸಲಾಗಿದೆ. ಜಮಖಂಡಿ ತಾಲೂಕಿನ ತುಂಗಳ, ಜಮಖಂಡಿ, ಕೊಣ್ಣೂರ, ಶೂರ್ಪಾಲಿ, ತೇರದಾಳ ಇವೆಲ್ಲವೂ ಆಡಳಿತದ ಭಾಗಗಳಾಗಿ ಇತಿಹಾಸವನ್ನು ಕಂಡುಕೊಂಡಂತಹವುಗಳಾಗಿವೆ,

ಜಮಖಂಡಿ ತಾಲೂಕಿನ ಇತಿಹಾಸ ಅತ್ಯಂತ ಪ್ರಾಚೀನವೆಂದು ಕಂಡುಬಂದರೂ ದೇವಾಲಯಗಳು ದೊರೆಯುವವು, ೯ ಮತ್ತು ೧೦ ನೇ ಶತಮಾನದ ನಂತರದ ಕಾಲದಲ್ಲಿ ಅಂದರೆ ಈ ತಾಲೂಕನ್ನು ಆಳಿದ ಮನೆತನಗಳಲ್ಲಿ ಕಲ್ಯಾಣಿ ಚಾಲುಕ್ಯರೇ ಮೊದಲಿಗರು ಎಂದು ಹೇಳಬಹುದು. ಆದರೆ ಅದಕ್ಕಿಂತ ಹಿಂದಿನ ರಾಜಮನೆತನಗಳಾದ ಶಾತವಾಹನರು, ಕದಂಬರು, ರಾಷ್ಟ್ರಕೂಟರು ಮತ್ತು ಬದಾಮಿ ಚಾಲುಕ್ಯರ ಸ್ಪಷ್ಟ ದಾಖಲೆಗಳು ದೊರೆಯದಿದ್ದರೂ ಮೇಲೆ ಹೇಳಿದ ಸಾಮ್ರಾಜ್ಯದ ಕೇಂದ್ರ ಸ್ಥಾನಗಳಿಗೆ ಹಾಗೂ ಗಡಿ ಭಾಗಗಳಿಗೆ ಅತಿ ಹತ್ತಿರವಿರುವ ಈ ಜಮಖಂಡಿ ಪ್ರದೇಶದಲ್ಲಿಯೂ ಅವರ ಆಡಳಿತ ಇತ್ತೆಂದು ಹೇಳಲೇಬೇಕಾಗುತ್ತದೆ. ಉದಾ : ಶಾತವಾಹನರ ಆಡಳಿತವನ್ನು ಪ್ರಸ್ತಾಪಿಸುವಾಗ ಅವರ ಸಮ್ರಾಜ್ಯದ ಗಡಿಭಾಗ ಕೃಷ್ಣಾ ನದಿಯವರೆಗೂ ಇತ್ತು ಎಂದು ಹೇಳುವಲ್ಲಿ ಕೃಷ್ಣಾ ನದಿ ಜಮಖಂಡಿ ತಾಲೂಕಿನಲ್ಲಿ

ಹರಿದಿರುವುದು ಗಮನಾರ್ಹ ಸಂಗತಿಯಾಗಿದೆ. ಕಲ್ಯಾಣಿ ಚಾಲಕ್ಯರ ನಂತರ ಈ ಭಾಗವನ್ನು ಆಳಿದವರು ಯಾದವರು ಎನ್ನುವುದರ ಬಗ್ಗೆ ನಿದರ್ಶನಗಳು ದೇವಾಲಯಗಳಿಂದ ತಿಳಿದುಬರುತ್ತದೆ. ನಂತರ ಜಮಖಂಡಿ ತಾಲೂಕಿನಲ್ಲಿ ಆಳಿದ ವೀರರು, ಮಹಾಸಾಮಂತರು, ಮಹಾಮಂಡಳೇಶ್ವರರು, ರಾಣಿಯರು ದೇವಾಲಯಗಳನ್ನು ಕಟ್ಟಿಸಿದ ನಿದರ್ಶನಗಳುಂಟು.

ವಾಸ್ತುಶಿಲ್ಪ ಶಾಸ್ತ್ರಜ್ಞರು ದೇವಾಲಯಗಳ ವಾಸ್ತುಶಿಲ್ಪವನ್ನು ಶೈಲಿಗಳ ಆಧಾರದ ಮೇಲೆ ವಿಂಗಡಿಸಿದ್ದಾರೆ. ಅವು ನಾಗರ, ದ್ರಾವಿಡ, ವೇಸರ ಶೈಲಿಗಳಾಗಿವೆ. ಕರ್ನಾಟಕದ ವಾಸ್ತುಶಿಲ್ಪದ ಪ್ರವರ್ತಕರಾದ ಬದಾಮಿ ಚಾಲಕ್ಯರು ಮತ್ತು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ವೇಸರ ಶೈಲಿಯ ದೇವಾಲಯಗಳನ್ನು ಗುರುತಿಸಿ ಈ ಕೃತಿಯಲ್ಲಿ ಅವುಗಳ ಲಕ್ಷಣಗಳನ್ನು ತಿಳಿಸಲು ಪ್ರಯತ್ನಿಸಿದ್ದೇನೆ.

ಸಾಮಾಜಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಈ ನಾಡು ಉಜ್ವಲ ಸಂಸ್ಕೃತಿಯನ್ನು ಹೊಂದಲು ದೇವಾಲಯಗಳ ಪಾತ್ರವನ್ನು ಈ ಪ್ರಭಂದದಲ್ಲಿ ಗುರುತಿಸಲು ಪ್ರಯತ್ನಿಸಿದ್ದೇನೆ. ದೇವಾಲಯಗಳು ಸಮಾಜದ ಶಾಂತಿ ಕೇಂದ್ರಗಳಾಗಿ ಸರ್ವ ಧರ್ಮಗಳ ಸಮನ್ವಯತೆಗಳ ತಾಣಗಳಾಗಿ, ವೈವಿಧ್ಯತೆಯಲ್ಲಿ ಏಕತೆಯನ್ನು ಮೂಡಿಸುವ ಪ್ರಮುಖ ಸ್ಥಳಗಳಾಗಿ ಕಾರ್ಯನಿರ್ವಹಿಸಿದ್ದನ್ನು ಈ ಪ್ರಭಂಧದಲ್ಲಿ ಗುರುತಿಸಲು ಪ್ರಯತ್ನಿಸಿದ್ದೇನೆ. ಅಷ್ಟೇ ಅಲ್ಲದೆ ಪ್ರಾಚೀನ ಕಾಲದಿಂದಲೂ ದೇವಾಲಯಗಳು ಜ್ಞಾನದ ದೇಗುಲಗಳಾಗಿ, ಗುರುಕುಲಗಳಾಗಿ, ಘಟಿಕ ಸ್ಥಾನಗಳಾಗಿ, ಬ್ರಹ್ಮಪುರಿಗಳಾಗಿ, ಅಗ್ರಹಾರಗಳಾಗಿ ಅಂಧಕಾರದಲ್ಲಿದ್ದ ಜನತೆಯನ್ನು ಜ್ಞಾನದ ಜ್ಯೋತಿಯತ್ತ ಕರೆದೊಯ್ಯುವಲ್ಲಿ ದೇವಾಲಯಗಳ ಶೈಕ್ಷಣಿಕ ಪಾತ್ರವನ್ನು ವಿವರಿಸಲು ಪ್ರಯತ್ನಿಸಿದ್ದೇನೆ.

ಅಷ್ಟೇ ಅಲ್ಲದೆ ದೇವದಾಸಿ ಪದ್ಧತಿ, ಅಂಗವೈಭವಸೇವೆ, ರಂಗವೈಭವ ಸೇವೆ, ನಾಟ್ಯ ಸೇವೆ, ಮುಂತಾದ ಸಾಮಾಜಿಕ ಚಟುವಟಿಕೆಗಳನ್ನು ಈ ಪ್ರಬಂಧದಲ್ಲಿ ಗುರುತಿಸಲು ಪ್ರಯತ್ನಿಸಿದ್ದೇನೆ. ಅಷ್ಟೇ ಅಲ್ಲದೆ ಗವರೆ ಗಾತ್ರಿಗಳು ಇದ್ದರೆಂಬುವುದು ಕೂಡ ದೇವಾಲಯಗಳಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ಇಲ್ಲಿಯ ತೆರಿಗೆಗಳಲ್ಲಿ ಮುಖ್ಯವಾದುದು ಹೆರ್ಜುಂಕ ಮತ್ತು ವಡ್ಡರಾವುಳ ಮತ್ತು ದೇವಾಲಯಗಳಲ್ಲಿನ ಸಂಸ್ಕಾರದ ತೆರಿಗೆ, ದೇವಾಲಯಕ್ಕೆ ಕೊಟ್ಟ ದಾನದತ್ತಿಗಳಿಂದ ಈ ನಾಡಿನ ಅಳತೆ ಮಾಪನಗಳನ್ನು ತಿಳಿಸಲು ಪ್ರಯತ್ನಿಸಿದ್ದೇನೆ.

ನಮ್ಮ ಬದುಕನ್ನು ರೂಪಿಸಿಕೊಳ್ಳಲು ಧರ್ಮವು ಅವಶ್ಯಕ ಅಂತೆಯೇ ಜಮಖಂಡಿ ತಾಲೂಕಿನ ಇತಿಹಾಸದಲ್ಲಿ ಆಳರಸರ ಆಶ್ರಯ ಪಡೆದ ಹಾಗೂ ಒಂದು ವೇಳೆ ಪಡೆಯದೆ ಇದ್ದರೂ ಧಾರ್ಮಿಕ ತಳಹದಿಯ ಮೇಲೆ ಶೈವ ವೈಷ್ಣವ ಹಾಗೂ ಜೈನ ಧರ್ಮಗಳ ಬೆಳವಣಿಗೆಗೆ ದೇವಾಲಯಗಳ ಪಾತ್ರವನ್ನು ಅಧ್ಯಯನದ ಚೌಕಟ್ಟಿನಲ್ಲಿಯೇ ವಿವರಿಸಲಾಗಿದೆ. ಈ ತಾಲೂಕಿನಲ್ಲಿ ಕೆಂಪು ಗುಲಾಬಿ ಕಲ್ಲು, ಕರಿಯ ಕಲ್ಲು (ಕಲಾದಗಿ ಕಲ್ಲು) ದೊರೆಯುವುದರಿಂದ ದೇವಾಲಯಗಳ ನಿರ್ಮಾಣಕ್ಕೆ ಅದನ್ನೇ ಬಳಸಿರುವುದು ಕಂಡುಬರುತ್ತದೆ. ಚಿಕ್ಕ ಜಂಬಗಿಯ ಕಲ್ಮೇಶ್ವರ, ಖಾಜಿಬೀಳಗಿಯ ಕಾಶಿಲಿಂಗ,

ಸಾವಳಗಿಯ ಸೋಮನಾಥ, ಕೊಣ್ಣೂರಿನ ಕರಿಸಿದ್ದೇಶ್ವರ ದೇವಾಲಯಗಳಿಗೆ ಕರಿಯ ಕಲ್ಲನ್ನೇ ಬಳಸಿರುವುದು ಕಂಡುಬರುತ್ತವೆ. ಜೊತೆಗೆ ಗಚ್ಚು-ಗಾರೆಯ ಬಳಕೆಯು ಅಲ್ಲಲ್ಲಿ ಕಂಡುಬರುತ್ತದೆ.

ಕಟ್ಟಿದ ದೇವಾಲಯಗಳಿಗೆ ಅರಸರು ರಾಣಿಯರು, ದಂಡನಾಯಕರು, ಸಾಮಂತರು, ಮಹಾಜನಗಳು ಹಾಗೂ ಶ್ರೀಮಂತರು ಅವುಗಳ ಜೀರ್ಣೋದ್ಧಾರಕ್ಕೆ, ಪೂಜೆಗಳಿಗೆ, ಕೆರೆ ಕಟ್ಟಿಸಲಿಕ್ಕೆ, ಚಂದ್ರ ಶಾಲೆ ನಿರ್ಮಾಣಕ್ಕೆ, ಸಾರ್ವಜನಿಕ ಕಾರ್ಯಗಳಿಗೆ, ಭೂದಾನ ಎಣ್ಣೆ ದಾನ, ಗ್ರಾಮದಾನ ಹಾಗೂ ವಸ್ತುಗಳ ಮೇಲಿನ ತೆರಿಗೆಗಳನ್ನು ಬಿಟ್ಟುಕೊಟ್ಟು ತಮ್ಮ ಧಾರ್ಮಿಕ-ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಂಡು ಬಂದಿರುವದನ್ನು ಕಾಣಬಹುದು. ತಾವು ಹಾಕಿಕೊಟ್ಟ ಪರಂಪರೆಯನ್ನು ಮುಂದಿನವರು ನೋಡಿ ತಿಳಿದು ನಡೆಯಲು ದೇವಾಲಯಗಳಲ್ಲಿ ಶಾಸನಗಳ ಮುಖಾಂತರ ಬರೆದಿಡುವ ಪದ್ಧತಿಯನ್ನು ರೂಢಿಗೆ ತಂದು ಅದರ ಮೂಲಕ ಅಮರಗೊಳಿಸಿದ್ದಾರೆ. ಆದ್ದರಿಂದಲೇ ಶಾಸನಗಳನ್ನು ಬರೆಯಿಸುವವರ, ಬರೆಯುವವರ ಪರಂಪರೆಯು ಬೆಳೆದು ಬಂದಿತು. ಇದರ ಜೊತೆಗೆ ದೇವಾಲಯ ಕಟ್ಟಿಸಿ ಕಲಾ ಪರಂಪತೆಯನ್ನು ಉನ್ನತಿಗೇರಿಸಲು ಧರ್ಮವನ್ನು ಜೀವಂತವಾಗಿರಿಸಿದರು.

ಜಮಖಂಡಿ ತಾಲೂಕಿನ ತೇರದಾಳ, ಹಳಿಂಗಳಿ, ಚಿಕ್ಕಜಂಬಗಿ, ಜಮಖಂಡಿ, ಕೊಣ್ಣೂರು, ಸಾವಳಗಿಯಲ್ಲಿರುವ ದೇವಾಲಯಗಳು ವಾಸ್ತು-ಶಿಲ್ಪ ಕಲೆಯ ದೃಷ್ಠಿಯಿಂದ ಪ್ರಮುಖವಾದವುಗಳು. ಈ ಗ್ರಾಮಗಳಲ್ಲಿ ಕಟ್ಟಲ್ಪಟ್ಟ ನಾಗರ, ದ್ರಾವಿಡ, ವೇಸರ ಶೈಲಿಯ ದೇವಾಲಯಗಳನ್ನು ಗುರುತಿಸಿ ಅದರಲ್ಲಿ ಶೈವ ದೇವಾಲಯಗಳು ವೈಷ್ಣವ ದೇವಾಲಯಗಳು ಜೈನ ಬಸದಿಗಳು ಎಂದು ಸಾಧ್ಯವಾದಷ್ಟು ಪರಿಶೀಲಿಸಿ, ವಿಭಾಗಿಸಿ ಅಧ್ಯಯನ ನಡೆಸಲಾಗಿದೆ. ಇತರೆ ಎಲ್ಲ ಗ್ರಾಮಗಳಲ್ಲಿರುವ ಸಣ್ಣ ಪುಟ್ಟ ದೇವಾಲಯಗಳು ವಾಸ್ತು ಶಿಲ್ಪ ಪ್ರಮುಖ ಲಕ್ಷಣಗಳನ್ನು ಮತ್ತು ಶಾಸ್ತ್ರ ಗ್ರಂಥಗಳ ನಿಯಮಗಳಿಗೆ ಒಳಪಟ್ಟು ಧರ್ಮದ ಸಂಕೇತಗಳಾಗಿ ಹಲವಾರು ಹೆಸರು ಪಡೆದು ಬೆಳೆದುಬಂದಿವೆ.

ದೇವಾಲಯಗಳಂತೆ ಶೈವ, ವೈಷ್ಣವ, ಜೈನ, ಶಾಕ್ತ ಸಂಪ್ರದಾಯಕ್ಕೆ ಸೇರಿದ ಹಲವು ಮೂರ್ತಿ ಶಿಲ್ಪಗಳ ಸ್ಥಿತಿಯು ಭಿನ್ನವೇನಿಲ್ಲ. ಶಿಲ್ಪಗಳು ಇಂದು ಚದುರಿದಂತೆ ಬಹುತೇಕ ಗ್ರಾಮಗಳಲ್ಲಿ ಹರಡಿಕೊಂಡಿವೆ ಎಂದು ಹೇಳಬಹುದು.

ಇತಿಹಾಸದಲ್ಲಿ ಯಾವುದೇ ಪ್ರದೇಶದ ನಿರ್ಧಿಷ್ಟ ಅಧ್ಯಯನ ಸಂಪೂರ್ಣ ಸಾಧಿಸಲಾಗದ ಗುರಿ. ಆದರೂ ಜಮಖಂಡಿ ತಾಲೂಕಿನ ದೇವಾಲಯಗಳ ವಿವರವಾದ ವಿಶ್ಲೇಷಣೆಯನ್ನು ಸ್ವಲ್ಪ ಮಟ್ಟಿಗಾದರೂ ಅಧ್ಯಯನ ಮಾಡಿ ವಿಷಯದ ಸಮಗ್ರತೆಗೆ ಪ್ರಯತ್ನಿಸಿದ್ದೇನೆ ಎಂಬ ಸಮಾಧಾನ ನನಗಿದೆ.

ದೇವಾಲಯಗಳ ಅಧ್ಯಯನಕ್ಕೆ ಬೇಕಾದ ವಿಷಯಗಳನ್ನು (ದೇವಾಲಯಗಳನ್ನು) ವ್ಯವಸ್ಥಿತವಾಗಿ ಜೋಡಿಸಿ ಛಾಯಾಚಿತ್ರಗಳಂತಹ ಸಾಧನಗಳನ್ನು ಕ್ರಮಬದ್ಧವಾಗಿ ಜೋಡಿಸಿ ವಿವರಿಸಲಾಗಿದೆ ಆದರೂ ಇನ್ನು ಕೆಲವು ಸಂಗತಿಗಳು ಕಣ್ಣು ತಪ್ಪಿ ಉಳಿದಿರಬಹುದು ಎಂಬ ಅರಿವಿನೊಂದಿಗೆ ಸಮಾರೋಪ ಮಾಡುತ್ತಿದ್ದೇನೆ.

[illegible]

ಅನುಬಂಧ – ೧

ಪರಾಮರ್ಶನ ಗ್ರಂಥಗಳು

೧.	ಅಣ್ಣಾರಾಯ ಮಿರ್ಜಿ	: ೧೯೬೯	ಜೈನ ಧರ್ಮ ಶಾಂತಿ ಸೇವಾ ಸದನ, ಶೇಡಬಾಳ. ಬೆಳಗಾವಿ ಜಿಲ್ಲೆ.
೨.	ಅಕ್ಕಿ ಬಸವರಾಜ	: ೨೦೦೫	ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ, ಧಾರವಾಡ
೩.	ಈರಣ್ಣ ಕೆ. ಪಿ.	: ೨೦೦೦	ಬದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಂಪರೆ, ಮನುಸಾಹಿತ್ಯ ಪ್ರಕಾಶನ ಧಾರವಾಡ.
೪.	ಚನ್ನಕ್ಕ ಎಲಿಗಾರ	: ೧೯೮೭	ಪ್ರಾಚೀನ ಕರ್ನಾಟಕದ ರಾಣಿಯರು, ಚನ್ನಗಂಗಾ ಪ್ರಕಾಶನ ಧಾರವಾಡ.
		೧೯೯೦	ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೫.	ಕಲ್ಬುರ್ಗಿ ಎಂ. ಎಂ.	: ೧೯೯೮	ಮಾನಸೋಲ್ಲಾಸ ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
		: ೧೯೯೯	ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು ಭಾಗ – ೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
೬.	ಕೃಷ್ಣರಾವ್ ಎಂ. ವಿ. & ಕೇಶವ ಭಟ್ ಎಂ.	: ೧೯೭೦	ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.
೭.	ಕೊಪ್ಪ ಎಸ್. ಕೆ.	: ೧೯೯೦	ತರ್ದವಾಡಿ ನಾಡು – ಒಂದು ಅಧ್ಯಯನ ಪ್ರತಿಭಾ ಪ್ರಕಾಶನ ಸಿಂಧಗಿ ರೋಡ, ಇಚಿಡಿ.
೮.	ಕೆ. ಚನ್ನಬಸಪ್ಪ	: ೨೦೦೬	ಜಮಖಂಡಿ ತಾಲೂಕಿನ ಶಾಸನಗಳು – ಒಂದು ಸಾಂಸ್ಕೃತಿಕ ಅಧ್ಯಯನ. ಧಾರವಾಡ.
೯.	ಗೋಪಾಲರಾವ ಎಚ್. ಎಸ್.	: ೧೯೯೨	ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯರ ದೇವಾಲಯಗಳು – ಒಂದು ಸಾಂಸ್ಕೃತಿಕ ಅಧ್ಯಯನ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೧೦. ಚಕ್ರಕೋಡಿ ಈಶ್ವರ ಶಾಸ್ತ್ರಿ : ೧೯೮೨ ಮನುಸ್ಮೃತಿ – ಸಮಾಜ ಪುಸ್ತಕಾಲಯ ಶಿವಾಜಿ ಬೀದಿ, ಧಾರವಾಡ.

೧೧. ಚಿದಾನಂದ ಮೂರ್ತಿ ಎಂ. : ೧೯೬೬ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ.

೧೨. ತಿಪ್ಪೇರುದ್ರಸ್ವಾಮಿ ಎಚ್. : ೧೯೯೮ ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಪ್ರ.ಡಿ.ಕೆ. ಮೂರ್ತಿ ಕೃಷ್ಣಮೂರ್ತಿ ಪುರಂ, ಮೈಸೂರು.

೧೩. ನರಸಿಂಹ ಮೂರ್ತಿ ಎಂ. ವ್ಹಿ. : ೧೯೭೧ ಕರ್ನಾಟಕದ ಸೇವಣವರ ಇತಿಹಾಸ. ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು.

೧೪. ನಂದಿಮಠ ಎಸ್. ಸಿ. : ೧೯೭೫ ಕರ್ನಾಟಕದ ಧರ್ಮಗಳು ಕನ್ನಡ ನಾಡಿನ ಚರಿತ್ರೆ. ಭಾಗ – ೨, ಬೆಂಗಳೂರು.

೧೫. ನಾಗೇಗೌಡ ಎಚ್. ಎಲ್. : ೧೯೬೪ ಪ್ರವಾಸಿ ಕಂಡ ಇಂಡಿಯಾ ಸಂಪೂಟ – ೧ ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೬. ನಾಗಯ್ಯ ಜೆ. ಎಂ. : ೧೯೯೨ ೬ನೇ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ – ವೀರಶೈವ ಅಧ್ಯಯನ ಆಕಡಮಿ ಬೆಳಗಾವಿ.

೧೭. ನಾರಾಯಣ ಪಿ. ವ್ಹಿ. : ೧೯೮೩ ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ – ವೀರಶೈವ ಅಧ್ಯಯನ ಸಂಸ್ಥೆ ಜಗದ್ಗುರು, ತೊಂಟದಾರ್ಯ ಸಂಸ್ಥಾನ ಮಠ, ಗದಗ.

೧೮. ಪಂಚಮುಖಿ ಆರ್. ಎಸ್. : ೧೯೮೩ ಕರ್ನಾಟಕದ ಶಾಸನಗಳು – ಕನ್ನಡ ಅಧ್ಯಯನ ಸಂಸ್ಥೆ, ಕವಿವಿ ಧಾರವಾಡ.

೧೯. ಪಾಟೀಲ ಭೋಜರಾಜ : ೧೯೯೫ ನಾಗರ ಖಂಡ ೭೦ – ಒಂದು ಅಧ್ಯಯನ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ಮುರಗರಾಜೇಂದ್ರ ಮಠ, ಆನಂದ ಪುರಂ,

೨೦. ಮಹೇಶವಾಡಿ ಬಿ.ಬಿ ಮತ್ತು ಪಾಟೀಲ ಎಸ್. ಪಿ. (ಸಂ). : ೧೯೭೮ ನಯಸೇನ ವಿರಚಿತ ಧರ್ಮಾಮೃತಂ ಕನ್ನಡ ಅಧ್ಯಯನ ಪೀಠ, ಕ.ವಿ.ವಿ. ಧಾರವಾಡ

೨೧. ಮರಿಯಪ್ಪ ಭಟ್ (ಸಂ) : ೧೯೫೫ ರಾಜ್ಯಾದಿತ್ಯನ ವ್ಯವಹಾರ ಗಣಿತ, ಮದ್ರಾಸ.

೨೨. ಮುನಿಸ್ವಾಮಿ ಆರ್. (ಪ್ರ.ಸಂ.) : ೧೯೯೯ ಕರ್ನಾಟಕ ರಾಜ್ಯ ಗ್ಯಾಜೆಟ್ ಇಯರ್, ಬಿಜಾಪೂರ ಜಿಲ್ಲೆ, (ಬಾಗಲಕೋಟ ಜಿಲ್ಲೆ ಸೇರಿದಂತೆ), ೮ನೇ ಮಹಡಿ, ಜಲಮಂಡಳಿ ಕಟ್ಟಡ ಕಾವೇರಿ ಭವನ, ಬೆಂಗಳೂರು – ೯.

೨೩. ಮುದ್ದಾಚಾರಿ ಬಿ. : ೧೯೭೫ ದಕ್ಷಿಣ ಭಾರತದ ಇತಿಹಾಸ,

೨೪. ರಾಮಚಂದ್ರರಾವ್ ಎಸ್. ಕೆ. : ೧೯೭೫ ಮೂರ್ತಿ ಶಿಲ್ಪ ನೆಲೆ ಹಿನ್ನೆಲೆ. ಪ್ರಸಾರಾಂಗ ಬೆಂಗಳೂರು. ವಿ.ವಿ. ಬೆಂಗಳೂರು.

೨೫. ವೀರಣ್ಣಾ ರಾಜೂರ : ೨೦೦೦ ವೀರ ಶೈವ ದರ್ಶನ ಶ್ರೀ ಬಸವೇಶ್ವರ ಪೀಠ, ಕ.ವಿ.ವಿ. ಧಾರವಾಡ.

೨೬. ರಾಮಚಂದ್ರರಾವ್ ಎಸ್. ಕೆ. : ೧೯೮೦ ಭಾರತದ ದೇವಾಲಯಗಳ ನೆಲೆ ಹಿನ್ನೆಲೆ, ಪ್ರಸಾರಾಂಗ ಬೆಂಗಳೂರು ವಿ.ವಿ. ಬೆಂಗಳೂರು.

೨೭. ರಂಗೋ ಕಟ್ಟಿ : ೧೯೯೩ ಗ್ಯಾಜೇಟ್ ಇಯರ್ ಮುಂಬಯಿ ಇಲಾಖೆಗೆ ಕರ್ನಾಟಕದ ಭಾಗ – ೨, ಗವರ್ನಮೇಂಟ್ ಸೆಂಟ್ರಲ್ ಬುಕ್ ಡಿಪೊ. ಮುಂಬಯಿ.

೨೮. ಶಿವ ತಾರಕ ಕೆ.ಬಿ. : ೨೦೦೧ ಕರ್ನಾಟಕದ ಪ್ರಾಗೈತಿ–ಹಾಸಿಕ– ನೆಲೆಗಳು.

೨೯. ಶಿವರುದ್ರಸ್ವಾಮಿ ಎಸ್.ಎನ್. : ೨೦೦೦ ಕರ್ನಾಟಕ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ.

೩೦. ಸಿಂದಗಿ ರಾಜಶೇಖರ : ೧೯೮೮ ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ. ಸುಜಾತಾ ಪಬ್ಲಿಕೇಷನ್ಸ್, ಧಾರವಾಡ.

೩೧. ಎಸ್. ಬಿ. ಮಟೋಳಿ : ೨೦೦೭ ಜಮಖಂಡಿ ಇತಿಹಾಸ ದರ್ಪಣ. ಗೆಳೆಯರ ಬಳಗ ತುಂಗಳ ಪಬ್ಲಿಕೇಷನ್. ಜಮಖಂಡಿ.

ENGLISH BOOKS

1.	Altekar A. S.	: 1998	State and Govt. in ancient India. Motilal Banarasidas Publishers & Book Sellars New Dehli.
2.	Aruni	: 1960	Decany Paintings, New Dehli Publications, New Dehli.
3.	Basavaraj K. R.	: 1966	Administrative System under the Chalukya's of Kalyana.
4.	Basavaraj K. R.	: 1984	History & Culture of Karnataka early times to Unification. Chalukya Publications, Dharwar.
5.	Desai Dinakar	: 1981	The Mahamandeshwar Under the Chalukya's of Kalyana & Culachuries. Unpublished Thesis, Karnataka University Dharwar.
6.	Desai P. B.	: 1968	Basaveshwar & His Times. Kannada Research Institute K.U. Dharwar.
7.	Gopal B. R.	: 1981	The Chalukya's of Kalyana & Kalachuri's. Prasanga Karnataka University, Dharwar.
8.	Katkar Ishwar	: 1982	Art & Architecture of the Chalukya's of Kalyani. Doctoral Thesis, Karnataka University Dharwar.
9.	Pattar Iranna	: 1990	Education in ancient Karnataka, from early times to end of Chalukya's of Kalyana.

ಶಾಸನ ಸಂಪುಟದಲ್ಲಿ ದೇವಾಲಯಗಳು, ವರದಿಗಳು ಹಾಗೂ ಪತ್ರಿಕೆಗಳು

೧. ಸೌತ ಇಂಡಿಯನ್ ಇನ್ಸಕ್ರಿಪ್ಷನ್ಸ್ ಸಂ. ೯೦

೨. ಕರ್ನಾಟಕ ಇನ್ಸಕ್ರಿಪ್ಷನ್ ಸಂ. ೫

೩. ಕರ್ನಾಟಕ ಕನ್ನಡ ವಿಶ್ವಕೋಶ

೪. ಕನ್ನಡ ಭಾರತಿ – ಕರ್ನಾಟಕ ವಿಶ್ವವಿದ್ಯಾಲಯ

೫. ತ್ರಿದಳ ಸೌರಭ ಸ್ಮರಣ ಸಂಚಿಕೆ

೬. ಗೆಳೆಯರ ಬಳಗ ತುಂಗಳ, ಸ್ಮರಣ ಸಂಚಿಕೆ.

೭. ಜೈ ಜಮಖಂಡಿ ಪಾಕ್ಷಿಕ ಪತ್ರಿಕೆ, ಜಮಖಂಡಿ.

೮. ಅವಿಭಜಿತ ಬಿಜಾಪೂರ ಜಿಲ್ಲಾ ಶಾಸನಸೂಚಿ – ೨೧, ಜಮಖಂಡಿ ತಾಲೂಕ.


ಸುವರ್ಣ ಸಂಭ್ರಮ ಸ್ಮರಣ ಸಂಚಿಕೆ – ೨೦೦

ಅನುಬಂಧ – ೨

ಕೆಲವು ಮುಖ್ಯ ದೇವಾಲಯಗಳ ಛಾಯಾಚಿತ್ರಗಳು




ಪರಮಾನಂದ ದೇವಾಲಯದ ಹೊರಗೋಡೆ, ಕೊಣ್ಣೂರು



ಗೊಂಕ ಜಿನಾಲಯ, ತೇರದಾಳ



ಮಾನಸ್ತಂಭ; ಗೊಂಕ ಜಿನಾಲಯ, ತೇರದಾಳ



ರಾಮಲಿಂಗೇಶ್ವರ ದೇವಾಲಯ, ಹಳಿಂಗಳಿ




ನಂದಿಕೇಶ್ವರ ದೇವಾಲಯ, ಜಮಖಂಡಿ




ಅರ್ಧಕಂಬ-ನಂದಿಕೇಶ್ವರ ದೇವಾಲಯ, ಜಮಖಂಡಿ



ನಂದಿಕೇಶ್ವರ ದೇವಾಲಯದ ಗರ್ಭಗೃಹದ ದ್ವಾರ, ಜಮಖಂಡಿ



ಶ್ರೀ ರಾಮೇಶ್ವರ ದೇವಾಲಯದ ಕಂಭಗಳು, ಜಮಖಂಡಿ



ಕಾಶಿಲಿಂಗನ ಗುಡಿಯ ಗರ್ಭಗೃಹದಲ್ಲಿಯ ಶಿವಲಿಂಗ, ಖಾಜಿಬೀಳಗಿ



ಶ್ರೀ ಕಲ್ಮೇಶ್ವರ ದೇವಾಲಯದ ಹಿಂಭಾಗ, ಚಿಕ್ಕಜಂಬಗಿ




ಶ್ರೀ ಕಲ್ಮೇಶ್ವರ ದೇವಾಲಯದ ಮುನ್ನೋಟ, ಚಿಕ್ಕಜಂಬಗಿ



ಜಮಖಂಡಿ ಸಂಸ್ಥಾನಿಕರ ಅರಮನೆ ಜಮಖಂಡಿ



ಮಹಾಲಕ್ಷ್ಮೀ, ಮುತ್ತೂರ



ಆದಿನಾಥ ಶಿಲ್ಪ, ಹಳಿಂಗಳಿ



ನೇಮಿನಾಥ ಶಿಲ್ಪ, ತೇರದಾಳ



ಪಾರ್ಶ್ವನಾಥ ಶಿಲ್ಪ, ಅಲಗೂರು




ಕಲ್ಮೇಶ್ವರ ದೇವಾಲಯದ ಮೂರ್ತಿ, ಚಿಕ್ಕಜಂಬಗಿ



ಕಲ್ಮೇಶ್ವರ, ಆಲಗೂರು




ಆಧೀಶ್ವರ, ಆಲಗೂರು



ಶ್ರೀವರಾಹ, ವೀರಭದ್ರೇಶ್ವರ ಶಿಲ್ಪ, ಕಲ್ಲಳ್ಳಿ





ಶ್ರೀ ವೆಂಕಟೇಶ್ವರ ಶಿಲ್ಪ, ಕಲ್ಲಹಳ್ಳಿ

ಲಕ್ಷ್ಮೀ ವೆಂಕಟೇಶ, ಕಲ್ಲಹಳ್ಳಿ



ನರಸಿಂಹ ಶಿಲ್ಪ, ತೂಪಾಳಿ



ವರಾಹ ಶಿಲ್ಪ, ತೂಪಾಳಿ



ಸೋಮನಾಥ ದೇವಾಲಯದ ಗೋಪುರದ ಪಾರ್ಶ್ವನೋಟ, ಸಾವಳಗಿ




ಕಲ್ಮೇಶ್ವರ ದೇವಾಲಯದ ಗರ್ಭಗೃಹ, ಖಾಜಿಬೀಳಗಿ



ಕಲ್ಮೇಶ್ವರ ದೇವಾಲಯದ ನವರಂಗದ ಕಂಬ, ಖಾಜಿಬೀಳಗಿ




ಕಾಶಿಲಿಂಗನ ಗುಡಿಯ ದ್ವಾರಬಾಗಿಲು, ಖಾಜಿಬೀಳಗಿ



ರಾಮಲಿಂಗೇಶ್ವರ ದೇವಾಲಯದ ಗರ್ಭಗೃಹ, ಹಳಿಂಗಳಿ



ರಾಮಲಿಂಗೇಶ್ವರ ದೇವಾಲಯದಲ್ಲಿನ ಕಂಬ, ಹಳಿಂಗಳಿ



ಸೋಮನಾಥ ದೇವಾಲಯದ ಮುಂಭಾಗ, ಸಾವಳಗಿ




ಸೋಮನಾಥ ದೇವಾಲಯದ ನವರಂಗದಲ್ಲಿನ ಎರಡನೆಯ ಶಿವಲಿಂಗ ವಿಗ್ರಹ, ಸಾವಳಗಿ




ಶ್ರೀ ಕಲ್ಮೇಶ್ವರ ದೇವಾಲಯದ ನವರಂಗದ ಭುವನೇಶ್ವರಿ



ಮಘೆಪ್ರಭು ದೇವಾಲಯದ ನವರಂಗದ ಕಂಬ, ಜಮಖಂಡಿ



ಮಘೆಪ್ರಭು ದೇವಾಲಯದ ಗರ್ಭಗೃಹ, ಜಮಖಂಡಿ




ಯೋಗನಾರಾಯಣ ದೇವಾಲಯದ ಶಿಖರದ ಪಾರ್ಶ್ವನೋಟ, ಜಮಖಂಡಿ



ಸುವರ್ಣಖಂಡಿ ಈಶ್ವರ ದೇವಾಲಯದ ಶಿಖರದ ಹಿಂಭಾಗ, ಕಡಪಟ್ಟಿ



ಸುವರ್ಣಖಂಡಿ ಈಶ್ವರ ದೇವಾಲಯದ ನವರಂಗದ ಕಂಬಗಳು



ಸುವರ್ಣಖಂಡಿ ಈಶ್ವರ ದೇವಾಲಯದ ನವರಂಗ ಮತ್ತು ಗರ್ಭಗೃಹ



ಪರಮಾನಂದ ದೇವಾಲಯ, ಕೊಣ್ಣೂರು